بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

ಮಸೀಹ್ ಮೌಊದ್(ಅ)
ವಿಶೇಶ ಸಂಚಿಕೆ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ


ವರ್ಷ: 02

ವಾರ್ಷಿಕ ಶುಲ್ಕ: ರೂ.500/-



# ಕನ್ನಡ ಬದರ್ ವಾರ ಪತ್ರಿಕೆ

# Weekly BADAR Qadian KANNADA


ಸಂಚಿಕೆ: 09-10

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

Postal Reg. No: 3000039689/2020-22 04, 11 ಮಾರ್ಚ್ 2021, 04, 11 ಅಮಾನ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 19, 26 ರಜಬ್ 1442 ಹಿಜರಿ ಖಮರಿ.

اِذۡ بَعَثَ اللّٰہُ تَعَالٰی الۡمَسِیۡحَ ابۡنَ مَرۡیَمَ
فَیَنۡزِلُ عِنۡدَ الۡمَنَارَۃِ الۡبَیۡضَآءِ شَرۡقِیَّ دِمَشۡقَ

ಅಲ್ಲಾಹನು (ಸಾದೃಶ್ಯ) ಈಸಬ್ನು ಮರಿಯಮ್ ಅವರನ್ನು ಇಳಿಸುವಾಗ ಅವರ ಇಳಿಯುವಿಕೆ ಒಂದು ಶ್ವೇತ ಮಿನಾರ (ಬಿಳಿ ಗೋಪುರ) ದ ಬಳಿ ಆಗುವುದು ಅದು ದಮಿಶ್ಕ್‌ನ ಪೂರ್ವಭಾಗವಾಗಿರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಪಂಜಾಬಿನ ಗುರುದಾಸ್‌ಪುರ ಜಿಲ್ಲೆಯಲ್ಲಿರುವ ಖಾದಿಯಾನ್, ಅದು ಸೀರಿಯಾದಿಂದ ಸರಿಯಾಗಿ ಪೂರ್ವ ದಿಕ್ಕಿಗೆ ಬರುತ್ತದೆ ಹೀಗೆ ಈ ಮಿನಾರತುಲ್ ಮಸೀಹ್ ಸೀರಿಯಾದಿಂದ ಪೂರ್ವದಿಕ್ಕಿನಲ್ಲಿದೆ ಎಂದು ಸಾಬೀತಾಗುತ್ತದೆ."



ಮಸ್ಜಿದ್ ಮುಬಾರಕ್ (ಖಾದಿಯಾನ್)



ಮಸ್ಜಿದ್ ಅಖ್ಸ (ಖಾದಿಯಾನ್)




ಮಸ್ಜಿದ್ ದಾರುಸ್ಸಲಾಮ್ (ಸೌಥ್‌ಹಾಲ್, ಯು.ಕೆ)



ಬೈತುಲ್ ಆಫಿಯತ್ (ಅಲ್‌ಮೇರೆ ಹಾಲೆಂಡ್)




ಮಸ್ಜಿದ್ ಬೈತುನ್ನಸೀರ್ (ಆಗ್ಸ್‌ಬರ್ಗ್ ಜರ್ಮನಿ)



ಮಸ್ಜಿದ್ ಮಹ್ಮೂದ್ (ಸ್ವೀಡನ್)




ಮಸ್ಜಿದ್ ಮುಬಾರಕ್ (ವೇಸ್ಬಾಡನ್, ಜರ್ಮನಿ)




ಮಸ್ಜಿದ್ ಬೈತುಲ್ ಮುಖೀತ್ (ವಾಲ್ಸಾಲದ ಯು.ಕೆ)

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ 213 ರಾಷ್ಟ್ರಗಳಲ್ಲಿ ಸ್ಥಾಪನೆ ಆಗಿರುತ್ತದೆ. ಅಲ್‌ಹಮ್‌ದುಲಿಲ್ಲಾಹ್. ಲೋಕದಾದ್ಯಂತ ವಿವಿಧ ರಾಷ್ಟ್ರಗಳಲ್ಲಿ ಜಮಾಅತೆ ಅಹ್ಮದಿಯಾದ ವತಿಯಿಂದ ನಿರ್ಮಿಸಲಾದ ಕೆಲವು ಮಸೀದಿಗಳ ಸುಂದರ ನೋಟ

## ಕನ್ನಡ ವಾರಪತ್ರಿಕೆ ಬದರ್ "ಮಸೀಹೆ ಮೌಊದ್[ಅ] ವಿಷೇಶ ಸಂಚಿಕೆ"


| | ವಿಷಯ ಸೂಚಿಕೆ | ಪುಟ |
|---|---|---|
| * | ವಿಷಯ ಸೂಚಿಕೆ ಮತ್ತು ಸಂಪಾದಕೀಯ | 1 |
| * | ಪ್ರವಾದಿ ಮುಹಮ್ಮದ್[ಸ]ರ ಅಧ್ಯಾಪನೆಗಳು | 02 |
| * | ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು | 03 |
| * | ಮಿನಾರತುಲ್ ಮಸೀಹ್ ನಿರ್ಮಾಣ, ಇತಿಹಾಸ ಮತ್ತು ಚಂದಾದಾರರ ಹೆಸರಗಳು | 04 |
| * | ಹಝ್ರತ್ ಮಸೀಹ್ ಮೌಊದ್[ಅ] ರವರ ಪರವಾಗಿ ಸಾಹಿತ್ಯ ಮತ್ತು ಧಾರ್ಮಿಕ ಚರ್ಚೆಗಳ ನಡುವೆ ದೊರೆತ ವಿಶ್ವಾಸವರ್ಧಕ ಘಟನೆಗಳ ದೃಶ್ಯ. | 09 |
| * | ಹಝ್ರತ್ ಮಸೀಹ್ ಮೌಊದ್[ಅ] ರವರ ಸತ್ಯತೆ ಸೂರ್ಯ, ಚಂದ್ರ ಗ್ರಹಣಗಳ ಭವಿಷ್ಯವಾಣಿಗಳ ಪ್ರಕಾಶದಲ್ಲಿ. | 12 |
| * | ಹಝ್ರತ್ ಮಸೀಹ್ ಮೌಊದ್[ಅ] ರವರ ಸತ್ಯತೆ ಪೂರ್ವಿಕ ಮಹಾತ್ಮರುಗಳ ದೃಷ್ಟಿಯಲ್ಲಿ | 14 |
| * | ಹಝ್ರತ್ ಮಸೀಹ್ ಮೌಊದ್[ಅ] ರವರ ಸತ್ಯತೆ, ನ್ಯಾಯಾಧೀಕರಣ ಹಾಗೂ ತಿರ್ಪುಗಾರನ ನೆಲೆಯಲ್ಲಿ | 16 |


# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು, ಪ್ರತಿವಾದಿಸಲು ಆಹ್ವಾನಿಸಿದೆವು ನಾವು.
إِنَّ السُّمُوْمَ لَشَرٌّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

## "ಸಿರ್ರುಲ್ ಖಿಲಾಫ" ಗ್ರಂಥದಿಂದ ನ್ಯೂನತೆ ಆಯ್ದು ತೋರಿಸಿದವರಿಗೆ ಒಂದೊಂದು ನ್ಯೂನತೆಗೆ ಒಂದು ರೂಪಾಯಿಯಂತೆ ಬಹುಮಾನ"

ಈ ಹಿಂದೆ ನಾವು ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ಒಂದು ವಿಶೇಷ ರೀತಿಯ ಶತ್ರುತ್ವ ಇತ್ತು. ಅದರ ವಿವರ ನೀಡಿಯಾಗಿದೆ. ಅವರು ಬರಾಹೀನ್ ಅಹ್ಮದಿಯಾ ಗ್ರಂಥದ ಮುನ್ನುಡಿ ಬರೆದಿದ್ದರು. ಅದರಲ್ಲಿ ನಿಸ್ಸಂಶಯವಾಗಿಯೂ ಅವರು ಸಯ್ಯದನಾ ಹಝ್ರತ್ ಮಸೀಹ್ ಮೌಊದ್ ಅವರ ಮೇರುಕೃತಿಯಾದ "ಬರಾಹೀನ್ ಅಹ್ಮದಿಯಾವನ್ನು" ಬಲವಾಗಿ ಸಮರ್ಥಿಸುತ್ತ ಕೊಂಡಾಡಿದ್ದರು. ಪುಷ್ಟಿಯನ್ನಿಡಿದರು. ಆದರೆ ಅವರ ಪ್ರಶಂಸೆಗೆ ಕಾರಣ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಜನಮನ್ನಣೆ ಅಥವ ಬರಾಹೀನೆ ಅಹ್ಮದಿಯಾದ ಖ್ಯಾತಿಯ ಕಾರಣ ಆ ಟಿಪ್ಪಣಿ ಇರಲಿಲ್ಲ. ಬದಲು ಬರಾಹೀನ್ ಅಹ್ಮದಿಯಾ ಖ್ಯಾತಿ ಪಡೆಯಲು ಕಾರಣ ಮನಮುಟ್ಟುವಂತಹ ಶಕ್ತಿಯುತ ಸಾಕ್ಷ್ಯಗಳಾಗಿದ್ದವು. ಮಸೀಹ್ ಮೌಊದ್(ಅ) ರವರ ಜನಮನ್ನಣೆಗೆ ಕಾರಣ ಅವರ ಸಾತ್ವಿಕ ಸ್ವಭಾವ, ಅವರ ಭಯಭಕ್ತಿ, ಅಲ್ಲಾಹನ ವತಿಯಿಂದ ಅನುಗ್ರಹಿತ ಒಂದು ಆಧ್ಯಾತ್ಮಿಕ ಶಕ್ತಿ ಮತ್ತು ಒಂದು ವಿಶೇಷ ರೀತಿಯ ದೈವಿಕ ಆಕರ್ಷಣೆ ಆಗಿತ್ತು. ಅದಲ್ಲದೇ ಅವರ ಪ್ರಸಿದ್ಧಿಗೆ ಒಂದು ದೊಡ್ಡ ಕಾರಣವೆಂದರೆ ಅವರು ಇಸ್ಲಾಮಿನ ಓರ್ವ ಯೋಧ ಮತ್ತು ಅದ್ವಿತೀಯ ಜರ್ನಲ್‌ನಂತಿದ್ದರು. ಅವರ ಮುಂದೆ ಯಾರಿಗೂ ನಿಲ್ಲಲು ಧೈರ್ಯವಿರಲಿಲ್ಲ. ಅದು ಮುಹಮ್ಮದ್ ಹುಸೇನ್ ಅವರ ದೌರ್ಭಾಗ್ಯವಾಗಿದೆ. ಅವರು ಈ ಖ್ಯಾತಿಗೆ ತಮ್ಮ ಮುನ್ನುಡಿಯಿಂದಾಗಿ ಆಗಿದೆ ಎಂದು ಭಾವಿಸಿಕೊಂಡರು. ಹಝ್ರತ್ ಮಸೀಹ್ ಮೌಊದ್(ಅ) 1890 ರಲ್ಲಿ ವಾಗ್ದತ್ತ ಮಸೀಹ್ ಆಗಿದ್ದೇನೆ ಎಂಬ ದಾವೆ ಸಾರಿದಾಗ ಮುಹಮ್ಮದ್ ಹುಸೇನ್ ಆತಂಕಗೊಂಡರು. ನನ್ನೊಡನೆ ಸಲಹೆ ಪಡೆಯದೇ ಹೇಗೆ ಅವರು ವಾಗ್ದತ್ತ ಮಸೀಹನಾಗುವ ದಾವೆ ಸಾರಿದರು.

ದೀರ್ಘವಾದ ಚರ್ಚೆಗಳ ನಂತರ ಅವರು ಬರೆದರು (ಇಶಾಅತುಸ್ಸಿನಾ) ದ ಕರ್ತವ್ಯವಾಗಿದೆ. ಅದರ ಮೇಲೆ ಒಂದು ಸಾಲಭಾರವಿತ್ತು. ಅದು ಹೇಗೆ ಅವನನ್ನು (ಅಂದರೆ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರನ್ನು ಗತದಾವೆಗಳ ಮೂಲಕ ಉತ್ತುಂಗನ ಶಿಕರಕ್ಕೆ ಏರಿಸಿದೆನೋ, ಅಂತೆಯೇ ಈ ಹೊಸ ದಾವೆಗಳ ದೃಷ್ಟಿಯಿಂದ ನೆಲಕ್ಕೂ ಉರುಳಿಸುವೆನು." **(ತಾರೀಖೆ ಅಹ್ಮದಿಅತ್ ಸಂಪುಟ–1, ಪುಟ–386)**

ಮುಹಮ್ಮದ್ ಹುಸೇನ್ ಬಟಾಲ್ವಿ ಅಂದಿನಿಂದ ತನ್ನನ್ನು ಮತ್ತು ತನ್ನ ಪತ್ರಿಕೆ ಇಶಾಅತುಸ್ಸುನನ್ನು ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ)

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ರವರ ವಿರೋಧಕ್ಕಾಗಿ ಮುಡಿಪಾಗಿಟ್ಟಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಬರೆದರು:

"ನಿಮ್ಮಂತಹ ಮಿತ್ರರು ನನ್ನ ವಿರೋಧಿಯಾಗಿದ್ದಕ್ಕೆ ನನಗೆ ದುಃಖವಾಗಲಿ, ಭಯವಾಗಲಿ ಇಲ್ಲ, ನಿನ್ನೆ ನಾನು ನನ್ನ ಕೈಯ ಮೇಲೆ ನನ್ನ ಬಗ್ಗೆ ಈ ಪದಗಳನ್ನು ಬರೆಯಲ್ಪಟ್ಟಿದ್ದು ಕಂಡಿದ್ದೇನೆ. "ನಾನು ಒಬ್ಬನಾಗಿದ್ದೇನೆ. ಮತ್ತು ನನ್ನ ಜೊತೆ ಅಲ್ಲಾಹನಿದ್ದಾನೆ. ಅದರ ಹಿಂದೆಯೇ ನನಗೆ ದೇವವಾಣಿಯಾಯಿತು. **"ಇನ್ನ ಮಯಿಯ ರಬ್ಬಿ ಸಯಹದೀನ್"** ಆದುದರಿಂದ ನನಗೆ ದೃಢ ವಿಶ್ವಾಸವಿದೆ. ಅಲ್ಲಾಹನು ತನ್ನ ನಿರ್ಣಯ ಪ್ರಕಟಿಸಿದನು. ನಾನು ನಿಮಗಾಗಿ ದುಆ ಮಾಡುವೆನು. ಆದರೆ ಏನೆಲ್ಲ ನಿಮ್ಮ ವಿಧಿಯಲ್ಲಿದೆ. ಅವಶ್ಯವಾಗಿ ಅದು ಆಗಿಯೇ ತೀರುವುದು. ಅದೆಲ್ಲಾ ನಿಮ್ಮ ಬಯಕೆಯಂತೆಯೇ ಆಗಲಿ." **(ತಾರೀಖೆ ಅಹ್ಮದಿಅತ್ ಸಂಪುಟ–1, ಪುಟ–386)**

ಹಾ! ಮುಹಮ್ಮದ್ ಹುಸೇನ್ ಬಟೌಲ್ವಿ ಅವರ ವಿರೋಧದ ನಡೆಯು ಅತ್ಯಂತ ಕೀಳುಮಟ್ಟದ್ದಾಗಿತ್ತು ಅದರಲ್ಲಿ ಆತ್ಮೀಯತೆಯ ಹೆಸರು ಸಹ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಅವರ ವಿರೋಧದಲ್ಲಿ ಮುಹಮ್ಮದ್ ಹುಸೇನ್ ಬಟಾಲ್ವಿ ನೈತಿಕತೆಯ ಎಲ್ಲಾ ಮೇರೆಯನ್ನು ಮೀರಿಸಿದ್ದರು. ಬರೀ ಸುಳ್ಳು ಹೇಳುವುದನ್ನು ನೆಚ್ಚಿಕೊಂಡರು. ಅವರ ಎಲ್ಲಾ ಸುಳ್ಳು ಆರೋಪಗಳಲ್ಲಿ ಒಂದು ಇದಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಅರಬಿ ಭಾಷೆಯ ಮತ್ತು ಖುರ್‌ಆನ್‌ನ ಜ್ಞಾನದಿಂದ ವಂಚಿತರಾಗಿದ್ದಾರೆ. ಯಾವ ಜ್ಞಾನವು ಇಲ್ಲ ಎಂಬುದಾಗಿತ್ತು. ಅದರ ಉತ್ತರವಾಗಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ತನ್ನ ಪ್ರತಿಸ್ಪರ್ಧಿಯಾಗಿ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ ಬರೆಯಲು ಪಂಥ್ವಾನ ನೀಡಿದರು. "ಕರಾಮತುಸ್ಸಾದಿಖೀನ್ ಮತ್ತು "ನೂರುಲ್ ಹಖ್" ಎರಡು ಸಾಹಿತ್ಯ ಪೂರ್ಣ ರೀತಿಯಲ್ಲಿ ಗ್ರಂಥಗಳನ್ನು ಬರೆದರು ಮತ್ತು ಇದರಂತೆಯೇ ಗ್ರಂಥವನ್ನು ಬರೆಯಲು ಪಂಥ್ವಾನ ನೀಡಿದರು. ಅದಕ್ಕಾಗಿ ದೊಡ್ಡ ಮೊತ್ತದ ಬಹುಮಾನಗಳ ಘೋಷಣೆಗಳನ್ನು ಸಹ ಮಾಡಿದರು. ಅದರ ವಿವರಣೆ ನಾವು ಹಿಂದಿನ ಹಲವು ಸಂಚಿಕೆಗಳಲ್ಲಿಯೂ ಮಾಡಿರುತ್ತೇವೆ. ಇದಾದ ನಂತರ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಅರಬಿ ಭಾಷೆಯಲ್ಲಿ ಜಾಣ್ಮೆಯುತ್ತ ಸಾಹಿತ್ಯವಾಗಿ "ಸಿರ್ರುಲ್ ಖಿಲಾಫ್" ಎಂಬ ಗ್ರಂಥವನ್ನು ರಚಿಸಿದರು. ಮತ್ತು ಅದಕ್ಕಾಗಿ 27 ರೂಪಾಯಿಗಳ ಬಹುಮಾನ ಘೋಷಿಸಿದರು. ಅದರಿಂದ ನ್ಯೂನತೆಗಳನ್ನು ತೆಗೆದರೆ ಒಂದು ನ್ಯೂನತೆಗೆ ಒಂದು ರೂಪಾಯಿ ಬಹುಮಾನ ಇಟ್ಟರು. ಮತ್ತೆ ಈ ಬಹುಮಾನವನ್ನು ಹೆಚ್ಚಿಸಿ ಎರಡು ರೂಪಾಯಿಯನ್ನಾಗಿ ಮಾಡಿದರು. ಇದರ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ನುಡಿಗಳು ಪ್ರಸ್ತುತವಿದೆ. ಅವರು ಮುಹಮ್ಮದ್ ಹುಸೇನ್ ಬಟೌಲ್ವಿರವರನ್ನು ಸಂಬೋಧಿಸಿ ಹೇಳುತ್ತಾರೆ:

ನಿಮ್ಮ ಹಿತಾಕಾಂಕ್ಷಿಯಾಗಿ ನಾನು ಅಂತಿಮವಾಗಿ ನಿಮಗೆ ಆಹ್ವಾನಿಸುತ್ತೇನೆ. ಹಿಂದಿನ ಪತ್ರಿಕೆಗಳಿಂದ ರಿಯಾಯಿತಿ ನೀಡಿ ಇದೀಗ "ಸಿರ್ರುಲ್ ಖಿಲಾಫ್" ಪತ್ರಿಕೆಯತ್ತ ಶೇಕ್ ಸಾಹಿಬರಿಗೆ ಕರೆ ನೀಡುತ್ತೇವೆ. ಅದಕ್ಕಾಗಿ ನಿಮಗೆ 27 ದಿನಗಳ ಅವಧಿ ಮತ್ತು 27 ರೂಪಾಯಿಯ ನಗದು ಬಹುಮಾನವನ್ನು ನಿಗದಿಪಡಿಸಿದ್ದೇವೆ. ನಾವು ಮೊದಲಾಗಿ ಸಹ ರೂಪಾಯಿಗಳನ್ನು ಕಳುಹಿಸಬಹುದು. ಆದರೆ ನೀವು ತಮ್ಮ ಒಪ್ಪಿಗೆಯ ಪ್ರಕಟಣೆ ನೀಡಬೇಕು. ನಾನು ಆ ಅವಧಿಯಲ್ಲಿ ತಮಗೆ ಉತ್ತರವನ್ನು ಬರೆದು ಕಳುಹಿಸುವೆನು ಎಂದು. ನೀವು ಈ ಅವಧಿಯಲ್ಲಿ ಪ್ರಕಟಪಡಿಸಿದರೆ ನೀವು 27 ರೂಪಾಯಿಗಳನ್ನು ಪಡೆಯುವುದು ಮಾತ್ರವಲ್ಲ ಬದಲು ನಾವು ಸಾರ್ವಜನಿಕವಾಗಿ ಪ್ರಕಟಿಸುವೆವು. ನಾವು ಇಲ್ಲಿಯವರೆಗೆ ನಿಮಗೆ ಶೇಖ್ ಎಂದು ಕರೆದೆವು ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಎನ್ನಲಿಲ್ಲ. ಇದು ನಮ್ಮ ದೊಡ್ಡ ತಪ್ಪಾಗಿತ್ತು. ಅಲ್ಲದೇ ನೀವು ನಿಜವಾಗಿಯೂ ದೊಡ್ಡ ವಿದ್ವಾಂಸರು, ಮತಪಂಡಿತರು ಎಂದು ಒಪ್ಪುವೆವು. ಹಾಗೂ ನೀವು ಹದೀಸಿನ ಯಾವ ಅರ್ಥ ಹೇಳುವಿರೋ ಅದನ್ನು ಸ್ವೀಕರಿಸುವೆವು.

ಈಗ ನೋಡೋಣ ಎಷ್ಟರಮಟ್ಟಿಗೆ ನಿಮಗೆ ಯಶಸ್ಸು ದೊರೆಯುತ್ತದೆ ಎಂದು. ಇದಾದ ನಂತರ ನಿಮಗೆ ಜನರೊಂದಿಗೆ ರೂಪಾಯಿಗಳನ್ನು ಕೇಳುವ, ಜನರೊಂದಿಗೆ ಕಷ್ಟ ಹೇಳುವ ಅವಶ್ಯಕತೆ ಇರಲಿಕ್ಕಿಲ್ಲ. ಅಥವಾ ನೌಕರಿಯಿಂದ ರಾಜಿನಾಮೆ ನೀಡುವ ಅವಶ್ಯಕತೆ ಇರುವುದಿಲ್ಲ, ಏಕೆಂದರೆ ನೀವು ನನ್ನನ್ನು ಎದುರಿಸಿ ತೋರಿಸಿದರೆ, ನನ್ನ ದೇವವಾಣಿಯನ್ನು ಸುಳ್ಳಾಗಿಸಿದಂತೆಯೇ ಸರಿ, ಆಗ ನನ್ನ ಬಳಿ ಏನೂ ಇರುವುದಿಲ್ಲ. ಆದುದರಿಂದ ನಿಮಗೆ ದೇವವಾಣಿ ಹಾಕಿ ಹೇಳುವೆನು. ನಿಮಗೆ ಅರಬಿ ಭಾಷೆಯ ಬಗ್ಗೆ ಏನಾದರೂ ಜ್ಞಾನವಿದ್ದರೆ

*(ಉಳಿದ ಭಾಗ ಪುಟ ಸಂಖ್ಯೆ 18ರಲ್ಲಿ ಮುಂದುವರಿಸಲಾಗಿದೆ)*

**ವಿಶ್ವಾಸವು ಕೃತ್ತಿಕಾ ನಕ್ಷತ್ರ ತಲುಪಿದರು, ಪರ್ಶಿಯನ್ ವ್ಯಕ್ತಿಯೊಬ್ಬರು ಅದನ್ನು ಪುನರ್ ಸ್ಥಾಪಿಸುವರು.**

**ನನ್ನ ಜನರಿಗೆ ಈಸಬ್ನು ಮರಿಯಮ್‌ರೊಂದಿಗೆ ಎಲ್ಲರಿಗಿಂತಲೂ ಘರಿಷ್ಟ ಸಂಬಂಧವಿದೆ. ಏಕೆಂದರೆ ನನ್ನ ಮತ್ತು ಅವರ ನಡುವೆ ಯಾರು ನಬಿ ಇರುವುದಿಲ್ಲ.**

## ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಅಧ್ಯಾಪನೆಗಳು

وَلَمَّا ضُرِبَ ابْنُ مَرْيَمَ مَثَلًا اِذَا قَوْمُكَ مِنْهُ يَصِدُّوْنَ۝ وَقَالُوْٓا ءَاٰلِهَتُنَا خَيْرٌ اَمْ هُوَ ؕ مَا ضَرَبُوْهُ لَكَ اِلَّا جَدَلًا ؕ بَلْ هُمْ قَوْمٌ خَصِمُوْنَ۝ اِنْ هُوَ اِلَّا عَبْدٌ اَنْعَمْنَا عَلَيْهِ وَجَعَلْنٰهُ مَثَلًا لِّبَنِيْٓ اِسْرَآءِيْلَ۝ وَلَوْ نَشَآءُ لَجَعَلْنَا مِنْكُمْ مَّلٰٓئِكَةً فِى الْاَرْضِ يَخْلُفُوْنَ۝ (سورة الزخرف: آیت 58-61)

ಅನುವಾದ: ಮರ್ಯಮರ ಪುತ್ರನ ಸಂಭವವನ್ನು ಒಂದು ಉಪಮೆಯಾಗಿ ಪ್ರಸ್ತಾಪಿಸುವಾಗ, ಅದೋ ನಿನ್ನ ಜನರು ಆ ಬಗ್ಗೆ ಕೂಗಾಡುತ್ತಾರೆ. 'ಯಾರು ಮಿಗಿಲು–ನಮ್ಮ ದೇವತೆಗಳೋ ಅಥವಾ ಆತನೋ?' ಎಂದು ಅವರು ಕೇಳುತ್ತಾರೆ. ನಿನ್ನೊಡನೆ ವಾಗ್ವಾದ ಮಾಡಲಿಕ್ಕೋಸ್ಕರ ಮಾತ್ರ ಹೊರತು ಅವರು ಅದನ್ನು ಪ್ರಸ್ತಾಪಿಸುವುದಿಲ್ಲ. ನಿಜವಾಗಿಯೂ ಅವರು ಜಗಳಗಂಟರೇ ಆಗಿದ್ದಾರೆ. (ವಾಸ್ತವದಲ್ಲಿ) ಅವರು (ಈಸಾ) ಕೇವಲ ನನ್ನೊಬ್ಬ ದಾಸರಾಗಿದ್ದರು. ಅವರಿಗೆ ನಾವು ಅನುಗ್ರಹ ದಯಪಾಲಿಸಿ ಇಸ್ರಾಈಲ್ ಸಂತತಿಗಳಿಗೆ ಅವರನ್ನು ಒಂದು ಮಾದರಿಯನ್ನಾಗಿ ಮಾಡಿದೆವು.

ಈ ವಚನಗಳ ವ್ಯಾಖ್ಯಾನ ಮಾಡುತ್ತ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ:

(1)ಅಂದರೆ ಪವಿತ್ರ ಖುರ್‌ಆನ್‌ನಲ್ಲಿ ಮರ್ಯಮ್ ಪುತ್ರ ಈಸಾ ಪುನಃ ಆಗಮಿಸುವ ಸುದ್ಧಿ ಪಠಿಸುತ್ತಲೇ ಕೂಗಾಡಲು ಪ್ರಾರಂಭಿಸುತ್ತಾರೆ. ಅವರು ನಮ್ಮ ಆರಾಧ್ಯರಲ್ಲಿ ಉತ್ತಮರಾಗಿರುವರು. ಆದುದರಿಂದಲೇ ನಮ್ಮ ಆರಾಧ್ಯರನ್ನು ನರಕಕ್ಕೆ ನೂಕಿ ಅವರು ಮಾತ್ರ ಲೋಕದ ಸುಧಾರಣೆಗಾಗಿ ಪುನಃ ಆಗಮಿಸುತ್ತಾರೆ. ಅದಾಗ್ಯೂ ಎರಡು ಘಟನೆಗಳಲ್ಲಿ ಭೂಮ್ಯಾಕಾಶದಷ್ಟು ವ್ಯತ್ಯಾಸವಿದೆ. ಈಸ ಮಸೀಹರು ಸ್ವಯಂ ತನ್ನನ್ನು ದಾಸನೆಂಬ ಸ್ಥಿತಿ ಒಪ್ಪಿಕೊಳ್ಳುತ್ತಾರೆ. ಅವರು ಸಜ್ಜನ ಪುರುಷರಾಗಿದ್ದರು. ಅವರನ್ನು ಬಹುದೇವರೊಡನೆ ಅಥವಾ ಬಹುದೇವರ ಸರದಾರರೊಡನೆ ಹೋಲಿಸುವುದು ತರವಲ್ಲ.

(2) "ನಮ್ಮ ಆರಾಧ್ಯರು" ಎನ್ನುವ ತಾತ್ಪರ್ಯ ದೇವನ ಮುಂದೆ ತಮ್ಮ ಪೂರ್ವಜ ಮಹಾತ್ಮರನ್ನು ದೇವನನ್ನಾಗಿ ಗೌರವಿಸುವುದಾಗಿದೆ. ಅವರಿಗೆ ಅವರು ಸಾಷ್ಟಾಂಗ ಪ್ರಣಾಮ ಮಾಡುವುದಿಲ್ಲ. ಆ ಮಾತು ಬೇರೆ, ಇಂದಿನ ಬಹುದೇವಾರಾಧನೆ ಮಾಡುವವರು, ಉದಾಹರಣೆಗೆ ಶಿಯಾ ಮುಂತಾದವರು ಹೇಳುವುದು ಅದೇ ಆಗಿದೆ. ಮಹದಿ ಆಗಮಿಸಿದಾಗ ಎಲ್ಲ ಪ್ರವಾದಿಗಳು ಜೀವಂತರಾಗುವರು ಮತ್ತು ಅವರ ಅನಸುರಣೆ ಮಾಡುವರು.

(3) ಮಸೀಹರ ಮೇಲೆ ದೇವದೂತರು ಅವತರಿಸಿದರು, ಏಕೆಂದರೆ ಅವರು ಆಧ್ಯಾತ್ಮಿಕ ನೆಲೆಯಲ್ಲಿ ದೇವದೂತರಾಗಿದ್ದರು. ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಕಾಲದ ಜನರು ಅಥವ ಅವರ ನಂತರದ ಜನರು ಸಹ ಮಸೀಹರಂತೆ ಆಗುತ್ತಿದ್ದರೆ ಅವರ ಮೇಲೆಯೂ ದೇವದೂತರು ಅವತರಿಸುತ್ತಿದ್ದರು. ಅದರಲ್ಲಿ ಯಾವ ಆಶ್ಚರ್ಯದ ಮಾತಿದೆ. ಪ್ರಸಕ್ತ ಮುಸಲ್ಮಾನರು ಕೇವಲ ಹಠದಿಂದಾಗಿ ಅದನ್ನು ನಿರಾಕರಿಸುತ್ತಿದ್ದಾರೆ. **(ತಫ್ಸೀರ್ ಸಗೀರ್ ಪುಟ–816)**

**(ಸೂರಃ ಅನ್ನಜ್ಮ್: 2,3)** وَالنَّجْمِ اِذَا هَوٰى۝ مَا ضَلَّ صَاحِبُكُمْ وَمَا غَوٰى۝

ಅನುವಾದ: ನಕ್ಷತ್ರದಾಣೆ, ಅದು (ಆಧ್ಯಾತ್ಮಿಕ ದೃಷ್ಟಿಯಲ್ಲಿ) ಕೆಳಗೆ ಬರುವಾಗ, ನಿಮ್ಮ ಸಂಗಡಿಗ ತಪ್ಪು ಮಾಡಿಲ್ಲ. ಪಥಭ್ರಷ್ಟನೂ ಅಲ್ಲ.

ಈ ವಚನಗಳ ವ್ಯಾಖ್ಯಾನದಲ್ಲಿ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ.

(1) ಇದು ರಸೂಲುಲ್ಲಾಹ್(ಸ) ರವರು ಮಾಡಿದ ಆ ಭವಿಷ್ಯವಾಣಿಯಾಗಿದೆ ಅದರ ಪದಗಳು ಹೀಗಿವೆ. **ಲೌಕಾನಲ್ ಈಮಾನು ಮು ಅಲ್ಲಕ ಬಿಸ್ಸುರೈಯ ಲನಾಲಹೂ ರಜುಲುನ್ ಮಿನ್ ಫಾರಿಸಿನ್** ಅಂದರೆ ಈಮಾನ್ (ವಿಶ್ವಾಸವು) ಕೃತ್ತಿಕಾ ನಕ್ಷತ್ರಕ್ಕೆ ತಲುಪಿದರೂ ಪರ್ಷಿಯನ್ನರ ಓರ್ವ ವ್ಯಕ್ತಿ ಅದನ್ನು ಅಲ್ಲಿಂದ ಮರಳಿ ತರುವನು.

(2) ಅಂದರೆ ಆ ವ್ಯಕ್ತಿ ಆಗಮಿಸಿದಾಗ ಪ್ರತಿಯೊಬ್ಬ ವ್ಯಕ್ತಿಯು ಅರಿತುಕೊಳ್ಳುವರು ಪ್ರವಾದಿ ಮುಹಮ್ಮದ್(ಸ) ತಂದಿರುವಂತಹ ಶಿಕ್ಷಣವು ಪರಿಪೂರ್ಣವಾಗಿತ್ತು. ಅವರು ಮಾರ್ಗಭ್ರಷ್ಟರೂ ಆಗಿರಲಿಲ್ಲ. ಪಥಭ್ರಷ್ಟರು ಆಗಿರಲಿಲ್ಲ. ಹಾಗೂ ಸ್ವೇಚ್ಛಾಚಾರಕ್ಕೂ ಬಲಿಯಾಗಿರಲಿಲ್ಲ. **(ತಫ್ಸೀರ್ ಸಗೀರ್ ಪುಟ–877)**

* ಹಝ್ರತ್ ನಾಫೆಅ್ ವರದಿ ಮಾಡುತ್ತಾರೆ. ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ಹೇಳಿದರು: ಒಂದು ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಒಂದು ರಾತ್ರಿ ನಾನು ಸ್ವಪ್ನವನ್ನು ಕಂಡೆನು, ನಾನು ಕಅ್‌ಬದ ಬಳಿ ಇದ್ದೇನೆ ನೋಡುವುದೇನೆಂದರೆ ಓರ್ವ ಸುಂದರ ಗೋಧಿ ಬಣ್ಣದ ಮನುಷ್ಯನು ಅವನ ಕೂದಲುಗಳು ಹೆಗಲ ಮೇಲಿನ ತನಕ ಬಂದಿವೆ. ಕೂದಲುಗಳು ನೇರ ನೀಟವಾಗಿವೆ. ಅದರಿಂದ ನಿರಿನ ಹನಿಗಳು ಉದುರುತ್ತಿವೆ. ಅವನು ತನ್ನ ಕೈಗಳನ್ನು ಇಬ್ಬರು ಮನುಷ್ಯರ ಹೆಗಲ ಮೇಲೆ ಇಟ್ಟು ತವಾಫ್(ಪ್ರದಕ್ಷಿಣೆ) ಮಾಡುತ್ತಿದ್ದಾನೆ. ನಾನು ಕೇಳಿದೆ ಅವರು ಯಾರು? ಎಂದು ಆಗ ಜನರು ಹೇಳಿದರು ಅವರು ಮಸೀಹ್ ಇಬ್ನು ಮರ್ಯಮ್ ಆಗಿದ್ದಾರೆ ಮತ್ತೆ ನಾನು ಅವರ ಹಿಂದೆ ಇನ್ನೊಬ್ಬ ಮನುಷ್ಯನನ್ನು ನೋಡಿದೆ ಆತನ ಕೂದಲುಗಳು ಗೊಂಚಲುಗಳಂತೆ ಇದ್ದವು, ಕಠಿಣವಾದ ಚರ್ಮ, ಬಲಗಣ್ಣು ಕುರುಡಾಗಿತ್ತು. ಇಬ್ನು ಖತನ್‌ನನ್ನು ಹೋಲುತ್ತಿತ್ತು. ಓರ್ವ ಮನುಷ್ಯನ ಎರಡೂ ಹೆಗಲ ಮೇಲೆ ತನ್ನ ಕೈಗಳನ್ನಿಟ್ಟು ಕಅ್‌ಬವನ್ನು ಸುತ್ತಾಡುತ್ತಿದ್ದನು. ನಾನು ಕೇಳಿದೆ. ಇವರು ಯಾರು? ಎಂದು ಆಗ ಜನರು ಹೇಳಿದರು. ಈತನು ಮಸೀಹುದ್ದಜ್ಜಾಲ್ ಆಗಿದ್ದಾನೆ. (ಇಲ್ಲಿ ಹುಝೂರ್(ಸ) ನೋಡಿರುವ ಕಅ್‌ಬ ತವಾಫಿನ ದೃಶ್ಯದ ಅರ್ಥವು ಮಸೀಹನು ಬೈತುಲ್ಲಾಹ್‌ವಿನ ರಕ್ಷಣೆಗೋಸ್ಕರ ಮತ್ತು ಅದರ ಘನತೆಯನ್ನು ಎತ್ತಿಹಿಡಿಯಲು ಪ್ರಯತ್ನಪಡುವನು. ಹಾಗೆಯೇ ದಜ್ಜಾಲನು ಅದರ ವಿರುದ್ಧ ಕಾರ್ಯಪ್ರವೃತ್ತನಾಗುವನು ಎಂದಾಗಿದೆ) **(ಬುಖಾರಿ ಕಿತಾಬುಲ್ ಅಂಬಿಯಾ, ಉಲ್ಲೇಖ–ಹದೀಖತುಸ್ಸಾಲಿಹೀನ್, ಹದೀಸ್–944)**

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ನುಡಿದರು: ಪ್ರವಾದಿಗಳ ಪರಸ್ಪರ ಸಂಬಂಧವು 'ಅಲ್ಲಾತಿ' ಸಹೋದರ ರೀತಿಯಲ್ಲಿರುತ್ತದೆ. ಅಂದರೆ ತಂದೆ ಒಬ್ಬರು ಮತ್ತು ತಾಯಿ ಬೇರೆ ಬೇರೆ ಇರುವ ಹಾಗೆ, ಅಂದ ಹಾಗೆ ಎಲ್ಲರಿಹಿಂತಲೂ ಮರ್ಯಮ್ ಪುತ್ರ ಈಸಾರೊಂದಿಗೆ ನನ್ನ ಆತ್ಮೀಯ ಸಂಬಂಧವಿದೆ. ಏಕೆಂದರೆ ಅವರ ಮತ್ತು ನನ್ನ ನಡುವೆ ಯಾವ ಪ್ರವಾದಿಯೂ ಇಲ್ಲ.........ಅವರು ಪುನಃ ಆಗಮಿಸಿ ಶಿಲುಬೆ ಮುರಿಯವವರು. (ಅರ್ಥಾತ್ ಶಿಲುಬೆಗೆ ಸಂಬಂಧಿಸಿದ ಮಿತ್ಯ ವಿಶ್ವಾಸವನ್ನು ತೊಡೆದು ಹಾಕುವರು) ಹಂದಿಗಳ ಹತ್ಯೆ ಮಾಡುವರು (ಅರ್ಥಾತ್ ದುಷ್ಟ ಜನರನ್ನು ಕೊಂದು ಹಾಕುವರು ಅಂದರೆ ಅದರ ಮೂಲಕ ಶಿಲುಬೆಯ ವಿಜಯ ತಡೆಯುವರು ಮತ್ತು ಹಂದಿಯ ರೀತಿಯ ದುಷ್ಟ ಆತ್ಮಗಳನ್ನು ಪರಿಶುದ್ಧ ಗೊಳಿಸುವರು ಎಂದರ್ಥ). ಯುದ್ಧವನ್ನು ತಡೆದು ನಿಲ್ಲಿಸುವರು (ಅಂದರೆ ಅವರ ಕಾಲದಲ್ಲಿ ಧಾರ್ಮಿಕ ಯುದ್ಧಗಳನ್ನು ಕೊನೆಗಾಣಿಸುವುದಾಗಿರುವುದು) ಅವರ ಕಾಲದಲ್ಲಿ ಇಸ್ಲಾಂ ಧರ್ಮದ ಹೊರತು ಅಲ್ಲಾಹನು ಬಾಕಿ ಎಲ್ಲ ಧರ್ಮಗಳನ್ನು (ಆಧ್ಯಾತ್ಮಿಕ ನೆಲೆಯಲ್ಲು ಮತ್ತು ಐಹಿಕ ವೈಭವದಿಂದಲೂ) ಅಳಿಸಿ ಹಾಕುವನು. ಮಸೀಹ್ ದಜ್ಜಾಲನನ್ನು ನಾಶಗೊಳಿಸುವನು, ಒಂಟೆ, ಸಿಂಹದ ಜೊತೆಯಲ್ಲಿ, ಚಿರತೆ, ಹಸುಗಳ ಜೊತೆಯಲ್ಲಿ, ತೋಳಗಳು, ಮೇಕೆಗಳ ಜೊತೆಯಲ್ಲಿ ಮೇಯುವಂತಹ ಶಾಂತಿಪೂರ್ಣ ಕಾಲ ಅದಾಗುವುದು. ಮಕ್ಕಳು ಮತ್ತು ವಯಸ್ಕರು ಸರ್ಪಗಳ ಜೊತೆಯಲ್ಲಿ ಆಟ ಆಡುವರು. ಅಂದ ಹಾಗೆ ಅಲ್ಲಾಹನ ಆಜ್ಞಾನುಸಾರ ಅಲ್ಲಾಹನು ಬಯಸಿದಷ್ಟು ಕಾಲ ಮಸೀಹರು ಲೋಕದಲ್ಲಿರುವವರು. ಮತ್ತೆ ನಿಧನ ಹೊಂದುವರು. ಮುಸಲ್ಮಾನರು ಅವರ ಜನಾಝಾ ನಿರ್ವಹಿಸುವವರು ಮತ್ತು ಅವರ ಅಂತ್ಯಕ್ರಿಯೆ ನೆರವೇರುವುದು. **(ಅಬೂದಾವೂದ್, ಕಿತಾಬುಲ್ ಮಲಾಹಿಮ್, ಉಲ್ಲೇಖ–ಹದೀಕತು ಸ್ಸಾಲಿಹೀನ್, ಹದೀಸ್–945)**

* ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ನುಡಿದರು. ಮರ್‌ಯಮರ ಪುತ್ರ ಮಸೀಹರು ನಿಮ್ಮಲ್ಲಿ ಆಗಮಿಸುವ ಕಾಲ ಎಷ್ಟು ಉತ್ತಮವಾಗಿರುವುದು, ಅವರು ನಿಮ್ಮ ಇಮಾಮರಾಗುವವರು, ನಿಮ್ಮಿಂದಲೇ ಆಗಮಿಸುವರು. ಇನ್ನೊಂದು ವರದಿಯಲ್ಲಿ ಹೀಗಿದೆ. ನಿಮ್ಮಿಂದ ಆಗಮಿಸುವ ಕಾರಣದಿಂದ ಅವನು ನಿಮ್ಮ ಇಮಾಮರ ಕರ್ತವ್ಯಗಳನ್ನು ನಿರ್ವಸುವನು. **(ಬುಖಾರಿ ಕಿತಾಬುಲ್ ಅಂಬಿಯಾ, ಉಲ್ಲೇಖ–ಹದೀಖತುಸ್ಸಾಲಿಹೀನ್, ಹದೀಸ್–947)**

* ಹಝ್ರತ್ ಅನಸ್ ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ನುಡಿದರು: ಪರಿಸ್ಥಿತಿಗಳು ಹದಗೆಡುವುದು, ಲೋಕವು ಆಧೋಗತಿಗೆ ತಲುಪುವುದು, ಜನರು ಜಿಪುಣರಾಗುವರು, ಕಿರಾತಕರು ಪ್ರಳಯದ ದೃಶ್ಯ ಕಾಣುವರು, ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಅಲ್ಲಾಹನ ಸುಧಾರಕರು ಬರುವರು, ಈಸಾ ಹೊರತು ಮತ್ತು ಯಾವ ಮಹದಿ ಇಲ್ಲ (ಅಂದರೆ ಮಸೀಹರೇ ಮಹದಿ ಆಗಿರುವರು ಎಂದರ್ಥ ಪ್ರತ್ಯೇಕ ಅಸ್ತಿತ್ವವಿಲ್ಲ) **(ಇಬ್ನು ಮಾಜ, ಬಾಬ್ ಶಿದ್ದತುಝ್ಝುಮಾನ್, ಉಲ್ಲೇಖ– ಹದೀಖತು ಸ್ಸಾಲಿಹೀನ್, ಹದೀಸ್–954)**

**************

**ಯಾರಾದರು ಪವಿತ್ರ ಖುರ್‌ಆನಿನ ಶಿಕ್ಷಣದಲ್ಲಿ ಒಂದು ಅಣುವಿನ ಸಾವಿರದಷ್ಟು ಭಾಗವಾದರೂ ನ್ಯೂನತೆ ಕಂಡು ಹಿಡಿದರೆ ಅಥವಾ ಅದರ ಎದುರಾಗಿ ತನ್ನ ಯಾವುದೇ ಗ್ರಂಥದಿಂದ ಪವಿತ್ರ ಖುರ್‌ಆನ್‌ನಲ್ಲಿ ಇಲ್ಲದಂತಹ ಯಾವುದೇ ಒಳ್ಳೆಯ ಗುಣವನ್ನು ಎತ್ತಿ ತೋರಿಸಿದರೆ ಮತ್ತು ಅದಕ್ಕಿಂತ ಉತ್ತಮವಾಗಿದ್ದರೆ, ನಾವು ಮರಣದಂಡನೆ ಸ್ವೀಕರಿಸಲು ಸಿದ್ಧರಿದ್ದೇವೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಇಂದಿವವರೆಗೂ ಯಾರನ್ನು ಪವಿತ್ರ ಖುರ್‌ಆನ್‌ನನ್ನು ಎದುರಿಸಲು ಸಾಧ್ಯವಾಗಲಿಲ್ಲ

ಎಲ್ಲ ಅವಿಶ್ವಾಸಿಗಳು ಪವಿತ್ರ ಖುರ್‌ಆನ್‌ನ ಎದುರಿನಲ್ಲಿ ಅತ್ಯಂತ ಮೇಧಾವಿ ಜ್ಞಾನವಂತರಾಗಿಯೂ, ಸಾಹಿತ್ಯ ಪರಿಣತರಾಗಿಯೂ, ಕವಿಗಳ ರಾಜಾಧಿರಾಜ ಎಂದು ಕರೆಯಿಸಿಕೊಂಡವರಾದರೂ ಬಾಯಿ ಮುಚ್ಚಿ ಕುಳಿತುಕೊಂಡರು. ಇಂದಿಗೂ ಸಹ ಮೌನಧರಿಸಿ ನಿರುತ್ತರವಾಗಿ ಕುಳಿತುಕೊಂಡಿದ್ದಾರೆ. ಈ ಮೌನವೇ ಅವರು ವಿವಶರಾಗಿರುವುದಕ್ಕೆ ಸಾಕ್ಷಿಯಾಗಿದೆ. ಏಕೆಂದರೆ ನ್ಯಾಯ ತೀರ್ಪನ್ನು ಕೇಳಿಯೂ, ತಿಳಿದು ಮುರಿಯಲಾರದಂತಾದರೆ ಅದುವೇ ವಿವಶತನವಾಗಿದೆ. **(ಬರಾಹೀನ್ ಅಹ್ಮದಿಯಾ, ರೂಹಾನಿ ಖಝಾಈನ್ ಸಂಪುಟ–1, ಪುಟ–152)**

### ಪವಿತ್ರ ಖುರ್‌ಆನ್‌ನ ಮೂರು ಗುಣ ಲಕ್ಷಣಗಳು

ಪವಿತ್ರ ಖುರ್‌ಆನ್‌ನಲ್ಲಿ ಮೂರು ಗುಣಲಕ್ಷಣಗಳಿವೆ. ಮೊದಲನೆಯದಾಗಿ ಜನರಿಗೆ ಯಾವ ಧರ್ಮಜ್ಞಾನ ಇರಲಿಲ್ಲವೋ ಆ ಕಡೆ ಮಾರ್ಗದರ್ಶನ ನೀಡುವಂತಹದ್ದು. ಎರಡನೆಯದಾಗಿ ಮೊದಲು ಇದ್ದ ಅಂಶಿಕ ಜ್ಞಾನಗಳನ್ನು ವಿವರವಾಗಿ ತಿಳಿಸುವುದು. ಮೂರನೆಯದಾಗಿ ಯಾವ ಸಮಸ್ಯೆಗಳಲ್ಲಿ ಭಿನ್ನಮತ ಉಂಟಾಗಿತ್ತೋ ಮತ್ತು ವಿವಾದ ತಲೆದೋರಿತ್ತೋ ಅವುಗಳನ್ನು ನಿರ್ಣಯಾತ್ಮಕವಾಗಿ ಪರಿಹರಿಸಿ ಅದರ ಸತ್ಯ ಹಾಗೂ ಮಿಥ್ಯತೆಯನ್ನು ಜಾಹೀರುಪಡಿಸುವುದು. **(ಅದೇ ಪುಟ–255, ಅಡಿಟಿಪ್ಪಣಿ ಸಂಖ್ಯೆ–11)**

### ಖುರ್‌ಆನ್‌ನಿನಲ್ಲಿ ಇರದಂತಹ ಯಾವುದೋ ಒಂದು ಸತ್ಯವನ್ನು ಪ್ರಸ್ತುತಪಡಿಸಿರಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನ್‌ನ ಆಕ್ಷೇಪ ಮಾಡುವವರಿಗೆ ಮತ್ತು ಅದನ್ನು ವಿರೋಧಿಸುವವರಿಗೆ ಸಂಬೋಧಿಸಿ ಹೇಳುತ್ತಾರೆ. ನಿಮ್ಮಲ್ಲಿ ಏನಾದರೂ ದೊಡ್ಡದಾದ ಸತ್ಯವಿದ್ದರೆ ಆ ಪೈಕಿ ನಿಮಗೆ ದೃಢವಾದ ನಂಬಿಕೆಯಿದೆ. ಅದನ್ನು ನೀವು ಸಂಶೋಧನೆ ಮಾಡಿ ತುಂಬ ಪ್ರಯತ್ನಪಟ್ಟು ಕಂಡುಹಿಡಿಯುವವರಾಗಿದ್ದರೆ, ಅದು ನಿಮ್ಮ ಅನಿಸಿಕೆಯಲ್ಲಿ ಅಂತಹದೊಂದು ಸತ್ಯ ಖುರ್‌ಆನ್‌ನಲ್ಲಿ ಇಲ್ಲ ಎಂದಾದರೆ, ನಿಮಗೆ ಆಣೆ ಮಾಡಿ ಹೇಳುತ್ತೇನೆ. ನೀವು ಎಲ್ಲ ಕಾರ್ಯಭಾರಗಳನ್ನು ಬಿಟ್ಟು ಆ ಸತ್ಯವನ್ನು ನನ್ನ ಮುಂದೆ ಸಾದಾರಪಡಿಸಿರಿ. ನಾವು ಅದನ್ನು ಪವಿತ್ರ ಖುರ್‌ಆನ್‌ನಲ್ಲಿ ಎತ್ತಿ ತೋರಿಸುವೆವು. ಮತ್ತೆ ಮುಸಲ್ಮಾನನಾಗಲು ಸಿದ್ಧವಿರಿ. ಈಗಲು ಸಹ ನೀವು ನಿಮ್ಮ ಸಂಶಯಗಳನ್ನು ತೆರೆಯದಿದ್ದರೆ ಮತ್ತು ಅದೇ ಬೊಗಳಿಕೆ ಮಾಡುತ್ತಿದ್ದರೆ, ಚರ್ಚೆಯ ನೇರವಾದ ವಿಧಾನ ಅನುಸರಿಸುತ್ತಿದ್ದರೆ "ಲಾನತಲ್ಲಾಹಿ ಅಲಲ್ ಕಾಝಿಬೀನ್" (ಸುಳ್ಳುಗಾರರ ಮೇಲೆ ಅಲ್ಲಾಹನ ಶಾಪವಿದೆ). ಅನ್ನದೇ ಬೇರೆ ದಾರಿಯಿಲ್ಲ. **(ಅದೇ ಪುಟ–255, ಅಡಿಟಿಪ್ಪಣಿ ಸಂಖ್ಯೆ–11)**

### ಖುರ್‌ಆನ್‌ನ ಸಾಕ್ಷ್ಯ ಒದಗಿಸುವುದು ನಮ್ಮ ಹೊಣೆಯಾಗಿದೆ.

ಪವಿತ್ರ ಖುರ್‌ಆನ್ ಹೇಗೆ ತಾನೇ ಎಲ್ಲ ಸಾಕ್ಷ್ಯಗಳನ್ನು ಒಳಗೊಂಡಿದೆ ಎಂಬುದರಲ್ಲಿ ನಿಮಗೆ ಸಂಶಯವಿದ್ದರೆ, ಆ ಸಂಶಯಗಳನ್ನು ದೂರ ಮಾಡುವ ಹೊಣೆ ನಾವು ಹೊರುತ್ತೇವೆ. ಯಾರೊಬ್ಬರು ಸತ್ಯಾವೇಷಿಯಾಗಿ ಅಥವಾ ಇಸ್ಲಾಮ್ ಧರ್ಮ ಸ್ವೀಕರಿಸುವ ಲಿಖಿತ ವಾಗ್ದಾನ ನೀಡಿ ಯಾವುದೇ ಗ್ರಂಥ, ಇಬ್ರಾನಿ, ಯುನಾನಿ, ಲಾಟೀನ್, ಇಂಗ್ಲೀಷ್, ಸಂಸ್ಕೃತ ಇತ್ಯಾದಿಗಳಿಂದ ಒಂದಿಷ್ಟು ಧರ್ಮದ ಸಾಕ್ಷ್ಯಗಳನ್ನು ಪ್ರಸ್ತುತಪಡಿಸಿದರೆ ಅಥವಾ ತಮ್ಮ ಬುದ್ಧಿಶಕ್ತಿಯಿಂದಾದರೂ ಯಾವುದೇ ರೀತಿಯ ದೈವಿಕ ದೃಷ್ಟಾಂತಗಳ ಲಘುವಾದ ಅಂಶ ಎತ್ತಿ ತೋರಿಸಿದರೆ, ನಾವು ಅವರನ್ನು ಪವಿತ್ರ ಖುರ್‌ಆನ್‌ನಿಂದ ಎತ್ತಿ ತೋರಿಸುವೆವು. **(ಅದೇ ಪುಟ 272).**

### ಪವಿತ್ರ ಖುರ್‌ಆನ್ ಎಲ್ಲ ಕಾಲದಲ್ಲೂ ತನ್ನ ಪ್ರಕಾಶ ತೋರಿಸಿದೆ.

ಹಝ್ರತ್ ರಸೂಲುಲ್ಲಾಹ್(ಸ) ಆಗಮಿಸದಿರುತ್ತಿದ್ದರೆ ಮತ್ತು ಪವಿತ್ರ ಖುರ್‌ಆನ್ ಅದರ ಪ್ರಭಾವ ನಮ್ಮ ಮಹಾತ್ಮರು, ದಿಗ್ಗಜರು ಪುರಾತನ ಕಾಲದಿಂದ ನೋಡುತ್ತ ಬಂದವರಾಗಿದ್ದಾರೆ ಮತ್ತು ನಾವು ಇಂದು ನೋಡುತ್ತಿದ್ದೇವೆ. ಪವಿತ್ರ ಖುರ್‌ಆನ್ ಅವತರಿಸದಿರುತ್ತಿದ್ದರೆ ಕೇವಲ ಬೈಬಲ್ ಅಧ್ಯಯನದಿಂದ ಹಜ್‌ರತ್ ಮೂಸಾ(ಅ) ಮತ್ತು ಈಸಾ(ಅ) ಮತ್ತು ಗತಿಸಿ ಹೋದ ಇತರ ಪ್ರವಾದಿಗಳು ನಿಜವಾಗಿಯೂ ಅಲ್ಲಾಹನ ಸಂದೇಶವಾಹಕರೇ ಎಂದು ಕಂಡು ಹಿಡಿಯುವುದು ನಮಗೆ ಬಹಳ ಕಠಿಣವಾದ ಕಾರ್ಯವಾಗುತ್ತಿತ್ತು. ನಮ್ಮ ಮೇಲೆ ಇದು ಪವಿತ್ರ ಖುರ್‌ಆನ್‌ನ ದೊಡ್ಡ ಉಪಕಾರವಾಗಿದೆ. ಅದು ನಮಗೆ ಎಲ್ಲ ಕಾಲದಲ್ಲೂ ತನ್ನ ಪ್ರಕಾಶ ತೋರಿಸಿದರೆ ಮತ್ತು ಆ ಪರಿಪೂರ್ಣ ಪ್ರಕಾಶದಿಂದ ಗತ ಪ್ರವಾದಿಗಳ ಸತ್ಯತೆಯನ್ನು ಎತ್ತಿ ಹಿಡಿದಿದೆ. ಅಂದ ಹಾಗೆ ಈ ಉಪಕಾರ ಕೇವಲ ನಮ್ಮ ಮೇಲೆ ಅಲ್ಲ. ಬದಲು ಆದಂ (ಅ) ರಿಂದ ಹಿಡಿದು ಮಸೀಹ್(ಅ) ರವರೆಗೆ ಎಲ್ಲ ಪ್ರವಾದಿಗಳ ಮೇಲಿದೆ. ಎಲ್ಲ ಪ್ರವಾದಿಗಳು ಆ ಮಹಾನ್ ಪ್ರವಾದಿಗೆ ಕೃತಜ್ಞರಾಗಿರುವರು. ಅವರಿಗೆ ಅಲ್ಲಾಹನು ಆ ಪರಿಪೂರ್ಣ ಮತ್ತು ಪವಿತ್ರ ಗ್ರಂಥ ದಯಪಾಲಿಸಿದೆ. ಅದರ ಪರಿಪೂರ್ಣ ಪ್ರಭಾವಗಳಿಂದಾಗಿಯೇ, ಅನುಗ್ರಹಗಳಿಂದಾಗಿಯೇ ಎಲ್ಲಾ ಸತ್ಯಾಂಶಗಳು ಜೀವಂತವಾಗಿವೆ. ಅದರಿಂದ ಆ ಪ್ರವಾದಿಗಳ ಪ್ರವಾದಿತ್ವದ ಮೇಲೆ ವಿಶ್ವಾಸ ಮೂಡಿ ಬರುತ್ತದೆ ಮತ್ತು ಎಲ್ಲ ಆತಂಕ ಸಂಶಯಗಳಿಂದ ರಕ್ಷಿಸುತ್ತದೆ.

### ಪವಿತ್ರ ಖುರ್‌ಆನ್‌ನ ಎರಡು ರೀತಿಯ ಪವಾಡಗಳು

ನೆನಪಿರಲಿ. ಪವಿತ್ರ ಖುರ್‌ಆನ್‌ನಲ್ಲಿ ಎರಡು ರೀತಿಯ ಪವಾಡಗಳನ್ನು ಸದಾ ಕಾಲಕ್ಕಾಗಿ ನಿಗದಿಸಲ್ಪಟ್ಟಿದೆ. ಒಂದು ಖುರ್‌ಆನ್‌ನ ಸಾಹಿತ್ಯಕ ಪವಾಡ ಎರಡನೆಯದು ಅದರ ಪರಿಣಾಮಕಾರಿ ರೀತಿಯ ಪವಾಡ, ಇವೆರಡು ಪವಾಡಗಳು ಎಷ್ಟೊಂದು ಕರಾರುವಕ್ಕಾಗಿವೆ ಎಂದರೆ, ಒಬ್ಬನ ಆತ್ಮ ಎಲ್ಲ ರೀತಿ ಐಹಿಕ ಹಾಗೂ ಬಾಹ್ಯ ಕಲ್ಮಶಗಳಿಂದ ಪವಿತ್ರವಾಗಿದ್ದರೆ ಸ್ವಯಂ ಅವನು ತ್ವರಿತವಾಗಿ ತನ್ನ ಕಣ್ಣುಗಳಿಂದ ಈ ಸತ್ಯಪ್ರಕಾಶವನ್ನು ಕಾಣುವಂತಾಗುವುದು. ಪರಿಣಾಮ ಬೀರುವಿಕೆಯ ಪವಾಡ ಪವಿತ್ರ ಖುರ್‌ಆನ್ ಕುರಿತು ನಾವು ಸಾಕ್ಷ್ಯವಹಿಸುವೆವು. ಇಂದಿನವರೆಗೆ ಯಾವ ಶತಮಾನವು ಅಲ್ಲಾಹನಿಂದ ಮಾರ್ಗದರ್ಶನ ಬಯಸಿ, ಪವಿತ್ರ ಖುರ್‌ಆನನ್ನು ಪೂರ್ಣ ರೀತಿಯಲ್ಲಿ ಅನುಸರಿಸಿದವರಿಗೆ, ಅದರ ಮಾರ್ಗದರ್ಶನದಿಂದ ಅದರ ಪ್ರಕಾಶದಿಂದ ವಂಚಿತರಾಗಲಿಲ್ಲ. ಈಗಲೂ ಸಹ ಮಾರ್ಗದರ್ಶನದ ಬಾಗಿಲು ತೆರೆದೇ ಇದೆ. ಗತಕಾಲದ ಇತಿಹಾಸ ಹೇಳುವ ಅಗತ್ಯವಿಲ್ಲ. ದೈವಿಕ ಗ್ರಂಥಧ ಪರಿಪೂರ್ಣ ಭಕ್ತರಿಗೆ ಯಾವ ಆಧ್ಯಾತ್ಮಿಕ ಅನುಗ್ರಹಗಳು ಲಭಿಸಬೇಕು ಮತ್ತು ದೈವಿಕ ಕೃಪೆಗೆ ದೇವವಾಣಿಗೆ ಅರ್ಹರಾಗಬೇಕು. ಅದೇ ಅನುಗ್ರಹಗಳು ಇಂದಿಗೂ ಲಭಿಸುತ್ತವೆ. ಯಾರು ಬಯಸುವರೋ ಅವರು ಸತ್ಯತೆಯನ್ನು ಸ್ವೀಕರಿಸಲಿ. ಮತ್ತು ತನ್ನ ಪರಲೋಕವನ್ನು ಸುಧಾರಿಸಿಕೊಳ್ಳಲಿ. **(ಅದೇ ಅಡಿಟಿಪ್ಪಣಿಯ ಟಿಪ್ಪಣಿ ಸಂಖ್ಯೆ–1, ಪುಟ–290)**

### ಖುರ್‌ಆನ್‌ನಲ್ಲಿ ಯಾವುದಾದರೂ ನ್ಯೂನತೆ ಇದ್ದರೆ ತೋರಿಸಲಿ?

ಯಾವೊಬ್ಬ ವ್ಯಕ್ತಿಯು ಪವಿತ್ರ ಖುರ್‌ಆನ್‌ನ ಶಿಕ್ಷಣದಿಂದ ಒಂದು ಅಣುವಿನ ಸಾವಿರದಷ್ಟು ಭಾಗವಾದರೂ ನ್ಯೂನತೆ ಕಂಡು ಹಿಡಿದರೆ ಅಥವಾ ಅದರ ಎದುರಾಗಿ ತನ್ನ ಯಾವುದೇ ಗ್ರಂಥದಿಂದ ಪವಿತ್ರ ಖುರ್‌ಆನ್‌ನಲ್ಲಿ ಇರದಂತಹ ಯಾವುದೇ ಒಳ್ಳೆಯ ಗುಣವನ್ನು ಎತ್ತಿ ತೋರಿಸಿದರೆ ಮತ್ತು ಅದಕ್ಕಿಂತ ಉತ್ತಮವಾಗಿದ್ದರೆ, ನಾವು ಮರಣದಂಡನೆ ಸ್ವೀಕರಿಸಲು ಸಿದ್ಧರಿದ್ದೇವೆ. ಇದೀಗ ಓ ವಿವೇಕವಂತರೇ!! ಯೋಚಿಸಿರಿ. ನಮ್ಮ ವಿರೋಧಿಗಳ ವಿಶ್ವಾಸ ಹಾಗೂ ದೇವನಿಷ್ಠೆ ಯಾವ ರೀತಿಯದ್ದಾಗಿದೆ ಎಂದು. ನಿರುತ್ತರವಾದರೂ ತಮ್ಮ ಹಟ ನಿಷ್ಪ್ರಯೋಜಕವಾದ್ದರಿಂದ ದೂರ ಸರಿಯುವುದಿಲ್ಲ. **(ಅದೇ ಪುಟ–298, ಅಡಿಟಿಪ್ಪಣಿ ಸಂಖೆ–2)**

### ಇಂಜೀಲಿನಲ್ಲಿ ಎಲ್ಲ ಸಾಕ್ಷ್ಯಗಳಿರುವುದಿಲ್ಲ.

ಇಂಜೀಲಿನ ಶಿಕ್ಷಣವನ್ನು ಪರಿಪೂರ್ಣ ಎಂದು ಭಾವಿಸುವುದು ಅಪ್ಪಟ ನಷ್ಟದಾಯಕ. ಅಲ್ಪಜ್ಞಾನ ಮತ್ತು ಮೂಢತೆಯಾಗಿದೆ. ಸ್ವಯಂ ಹಝ್ರತ್ ಮಸೀಹ್ ಇಂಜೀಲಿನ ಶಿಕ್ಷಣವನ್ನು ಪರಿಪೂರ್ಣ ಎಂದು ಪರಿಗಣಿಸಲಿಲ್ಲ. ಅವರು ಹೇಳಿದರು. "ನನ್ನ ಇನ್ನೂ ಹಲವು ಮಾತುಗಳಿವೆ. ಅದು ನಿಮಗೆ ಹೇಳಿದರೆ ನೀವು ಸಹಿಸಲಾರಿರಿ. ಆದರೆ ಅವನು ಅಂದರೆ "ರೂಹುಲ್ ಖುದುಸ್" ಆಗಮಿಸಿದಾಗ, ನಿಮಗೆ ಎಲ್ಲಾ ಸಾಕ್ಷ್ಯಗಳ ಹಾದಿ ತೋರಿಸುವನು. (ಇಂಜೀಲ್ ಯುಹನ್ನ ಬಾಬ್ 16, ಸೂಕ್ತ, 12, 13, 14) ಈಗ ಹೇಳಿರಿ. ಇದು ಎಲ್ಲಾ ಸಾಕ್ಷ್ಯಗಳನ್ನು ಒಳಗೊಂಡ ಇಂಜೀಲೇ, ಅದರ ಮುಂದೆ ಪವಿತ್ರ ಖುರ್‌ಆನ್ ಅಗತ್ಯ ಬೇಡವೇ. **(ಅದೇ ಪುಟ–300, ಅಡಿಟಿಪ್ಪಣಿ–2)**

### ಆಧ್ಯಾತ್ಮಿಕ ಜ್ಞಾನದ ಭಂಡಾರ ಪವಿತ್ರ ಖುರ್‌ಆನ್‌ನಲ್ಲಿದೆ ಇಂಜೀಲಿನಲ್ಲಿಲ್ಲ.

ನೀವು ಜನರು ಮಸೀಹರ ಅನುಯಾಯಿಗಳೆಂದು ಹೇಳಿಕೊಂಡು, 1882 ವರ್ಷಗಳ ಹಿಂದೆ ಸ್ವಯಂ ಮಸೀಹನು ಇಂಜೀಲನ್ನು ಅಪೂರ್ಣ ಎಂದಿದ್ದನ್ನು, ನೀವು ಅದನ್ನು ಪರಿಪೂರ್ಣ ಎನ್ನುವುದು ನ್ಯಾಯವೇ. ನಿಮಗೆ ನಿಮ್ಮ ಮಸೀಹನ ನುಡಿಯ ಮೇಲೆಯೇ ನಂಬಿಕೆ ಇಲ್ಲ. ಸ್ವಯಂ ಇಂಜೀಲನ್ನು ಪವಿತ್ರ ಖುರ್‌ಆನ್‌ಗೆ ಎದುರಾಗಿ ಹೋರಾಡಬಯಸುವಿರಾದರೆ ಬನ್ನಿ. ಬಿಸ್ಮಿಲ್ಲಾಹ್ ನಾವು ಪವಿತ್ರ ಖುರ್‌ಆನ್‌ನಿಂದ ಸಾಬೀತುಪಡಿಸಿದಂತಹ ಸಾಕ್ಷ್ಯಗಳು ನೀವು ಇಂಜೀಲಿನಿಂದ ಎತ್ತಿ ತೋರಿಸಿರಿ. ಆಗ ವಿವೇಕರಾಗಿದ್ದವರು ತಿಳಿದುಕೊಳ್ಳಬಹುದು. ಆಧ್ಯಾತ್ಮಿಕ ಜ್ಞಾನ ಪವಿತ್ರ ಖುರ್‌ಆನ್‌ನಲ್ಲಿ ಹೆಚ್ಚಿದೆಯೋ ಅಥವಾ ಇಂಜೀಲಿನಲ್ಲಿ. **(ಅದೇ ಪುಟ–301, ಅಡಿಟಿಪ್ಪಣಿ–2)**

# ಮಿನಾರತುಲ್ ಮಸೀಹ್ ನಿರ್ಮಾಣ, ಇತಿಹಾಸ ಮತ್ತು ಚಂದಾದಾರರ ಹೆಸರಗಳು

*ಮುಹಮ್ಮದ್ ಹಮೀದ್ ಕೌಸರ್, ನಾಝಿರ್ ದಲ್‌ವತ್ ಇಲಲ್ಲಾಹ್ ಮರ್ಕಝಿಯ ಖಾದಿಯಾನ್, ಇಂಚರ್ಜ್ ಅಹ್ಮದಿಯಾ ಇತಿಹಾಸ ವಿಭಾಗ*

ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ವಾಗ್ದತ್ತ ಮಸೀಹರ ಬಗ್ಗೆ ಮಾಡಲಾದ ಭವಿಷ್ಯವಾಣಿಗಳ ಪೈಕಿ ಹೀಗೊಂದು ವಿವರವಿದೆ. **"ಇಝಾ ಬಅಸಲ್ಲಾಹುಲ್ ಮಸೀಹಿಬ್ನ ಮರ್‌ಯಮ ಫ ಯನ್‌ಝಿಲ್ ಇಂದಲ್ ಮಿನಾರತಿಲ್ ಬೈಝಾಇ ಶರ್‌ಖಿಯ್ಯ ದಮಶ್‌ಕ್" (ಸಹೀ ಮುಸ್ಲಿಮ್, ಕಿತಾಬುಲ್ ಫಿತನ್)**

ಅರ್ಥಾತ್ ಅಲ್ಲಾಹನು (ಸಾದೃಶ್ಯ) ಈಸಬ್ನು ಮರಿಯಮ್ (ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಖಾದಿಯಾನಿ) ಅವರನ್ನು ಇಳಿಸುವಾಗ ಅವರ ಇಳಿಯುವಿಕೆ ಒಂದು ಶ್ವೇತ ಮಿನಾರ (ಬಿಳಿ ಗೋಪುರ) ದ ಬಳಿ ಆಗುವುದು ಅದು ದಮಿಶ್ಕ್‌ನ ಪೂರ್ವಭಾಗವಾಗಿರುವುದು.

ಇತಿಹಾಸ ಸಾಕ್ಷ್ಯವಿದೆ. ಹಝ್ರತ್ ರಸೂಲುಲ್ಲಾಹ್(ಸ) ಈ ಭವಿಷ್ಯವಾಣಿ ಮಾಡುತ್ತಿರುವಾಗ ದಮಿಶ್ಕ್‌ನಲ್ಲಿ ಯಾವ ಶ್ವೇತ ಮಿನಾರವು ಇರಲಿಲ್ಲ. ಯಾವುದೆಲ್ಲಾ ಮಿನಾರಗಳು ತಯಾರಾಗಿದೆಯೊ ಅವು ಭವಿಷ್ಯವಾಣಿಯ ಎಷ್ಟೋ ಅವದಿಯ ನಂತರ ನಿರ್ಮಾಣವಾಗಿದೆ.

ಮಿನಾರ ಪದವು "ನೂರ್" (ಪ್ರಕಾಶ) ಪದದಿಂದ ಬಂದಿದೆ. "ಅಲ್–ಮಿನಾರ–ತುಲ್ ಬೈಝಾಅ" (ಶ್ವೇತ ಮನಾರ) ದ ಒಂದು ಭಾವಾರ್ಥ ಹೀಗಾಗುತ್ತದೆ. ಮುಹಮ್ಮದಿಯ ಸಮುದಾಯದಲ್ಲಿ ಅಲ್ಲಾಹನು ಯಾರನ್ನು ಸಾದೃಶ್ಯ ಮಸೀಹನಾಗಿ ಇಳಿಸಿದನೋ ಅವನ ಪ್ರಕಾಶಮಯ ಸಾಕ್ಷ್ಯಗಳ ಮುಂದೆ ಮಿಥ್ಯ ಧರ್ಮಗಳ ಅಂಧಕಾರವು ಸಾಕ್ಷ್ಯಗಳು ಮಾಯವಾಗುವುದು. ಸಾತ್ವಿಕ ಪುರುಷರು ಈ ಮಾತಿಗೆ ಸಾಕ್ಷಿಯಾಗಿದ್ದಾರೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) (1835–1908) ರವರ ಅಧ್ಯಯನದ ಮೂಲಕ ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ಪವಿತ್ರ ನುಡಿಯನ್ನು ಅಕ್ಷರಶಃ ಪೂರ್ತಿಗೊಳಿಸಿದ್ದಾನೆ. ಅವರ ಗ್ರಂಥಗಳು, ಬರಹಗಳು, ಮಲ್ಫೂಝಾತ್, ಮಕ್ತಾಬಾತ್, ಇಶ್ತಿಹಾರಾತ್ ಸಾಕ್ಷ್ಯಗಳಾಗಿವೆ. ಅವರು ಎಲ್ಲಾ ಮಿಥ್ಯ ಧರ್ಮಗಳ ಅಂಧಾಕಾರಮಯ ಸಾಕ್ಷ್ಯಗಳನ್ನು ಪ್ರಕಾಶಮಯ ಸಾಕ್ಷ್ಯಗಳೊಂದಿಗೆ ರದ್ದುಪಡಿಸಿದ್ದಾರೆ. ಈ ಭವಿಷ್ಯವಾಣಿಯನ್ನು ಭೌತಿಕ ರೂಪದಲ್ಲೂ ಪೂರ್ಣಗೊಳಿಸುವ ಉದ್ದೇಶದಿಂದ ಹಝ್ರತ್ ಮಸೀಹ್ ಮೌಊದ್(ಅ) ಮಿನಾರತುಲ್ ಮಸೀಹ್ ನಿರ್ಮಾಣ ಮಾಡಲು ಕರೆ ನೀಡಿದರು.

### ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿ ಪೂರ್ಣಗೊಳಿಸಲು ಮಿನಾರ ನಿರ್ಮಾಣಕ್ಕಾಗಿ ಕರೆ

ಹಝ್ರತ್ ಮಸೀಹ್ ಮೌಊದ್(ಅ) ಖಾದಿಯಾನಿಯಲ್ಲಿ ಮಿನಾರ ನಿರ್ಮಾಣ ಮಾಡಲು ಕರೆ ನೀಡುತ್ತ ಹೇಳಿದರು.

1. ಈ ಭವಿಷ್ಯವಾಣಿ ಪೂರ್ಣಗೊಳಿಸಲು ಇಸ್ಲಾಂ ಧರ್ಮದಲ್ಲಿ ಎರಡು ಸಲ ಪ್ರಯತ್ನ ಮಾಡಲಾಗಿದೆ. ಮೊದಲು 741 ಹಿಜರಿಗಿಂತ ಮೊದಲು ದಮಿಶ್ಕ್‌ನ(ಡಮಸ್ಕಸ್‌ನ) ಪೂರ್ವ ಭಾಗದಲ್ಲಿ ಬಿಳಿ ಮಾರ್ಬಲ್(ಸಂಗೆ ಮರ್‌ಮರ್)ನಿಂದ ಒಂದು ಮಿನಾರ ನಿರ್ಮಿಸಲಾಗಿತ್ತು. ಅದು ದಮಿಶ್ಕ್ (ಡಮಸ್ಕಸ್)ನ ಪೂರ್ವ ದಿಕ್ಕಿಗೆ ಮತ್ತು ಜಾಮೆ ಅಮ್ವಿಯ ಒಂದು ಅಂಶವಾಗಿತ್ತು. ಎಷ್ಟೋ ಲಕ್ಷ ರೂಪಾಯಿಗಳ ಖರ್ಚಾಗಿತ್ತು ಎಂದು ಹೇಳಳಾಗುತ್ತದೆ. ಅದು ನಿರ್ಮಿಸುವ ಉದ್ದೇಶವು ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿ ಪೂರ್ಣಗೊಳಿಸುವುದಾಗಿತ್ತು. ಆದರೆ ನಂತರ ಅದನ್ನು ಕ್ರೈಸ್ತರು ಆ ಮಿನಾರರನ್ನು ಸುಟ್ಟು ಹಾಕಿದರು. ನಂತರ 741 ಹಿಜರಿಯಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡಲಾಯಿತು. ಅದನ್ನು ದಮಶ್ಕಸ್‌ನ ಪೂರ್ವ ದಿಕ್ಕಿನಲ್ಲಿ ನಿರ್ಮಿಸಬೇಕೆಂದು. ಅಂದ ಹಾಗೆ ಈ ಮಿನಾರಕ್ಕಾಗಿಯೇ ಸುಮಾರು ಒಂದು ಲಕ್ಷ ರೂಪಾಯಿ ಸಂಗ್ರಹಿಸಲಾಯಿತು. ಆದರೆ ದೈವವಿಧಿ ಜಾಮೆ ಅಮ್ವಿಗೆ ಬೆಂಕಿ ತಗುಲಿತು. ಆ ಮಿನಾರವೂ ಸುಟ್ಟು ಹೋಯಿತು. ಎರಡೂ ಸಲವು ಮುಸಲ್ಮಾನರಿಗೆ ಈ ಉದ್ದೇಶದಲ್ಲಿ ಸೋಲು ಕಾಣುವಂತಾಯಿತು. **(ಮಜ್‌ಮೂಅ ಇಶ್ತಿಹಾರಾತ್, ಸಂಪುಟ–3, ಪುಟ–315, ಜುಲೈ 1, 1900)**

2. ಇದು ಹಜ್‌ರತ್ ಉಮರ್(ರ) ಸಹಾಬಿಯೊರ್ವರಿಗೆ ಯುದ್ಧ ಸಂಪತ್ತಿನಿಂದ ದೊರೆತ ಚಿನ್ನದ ಬಳೆಯನ್ನು ತೊಡೆಸುವ ರೀತಿಯಲ್ಲಾಗಿತ್ತು. ಅದು ಸಹ ಒಂದು ಭವಿಷ್ಯವಾಣಿ ಪೂರ್ಣಗೊಳಿಸುವ ಉದ್ದೇಶ ಹೊಂದಿತ್ತು."

**(ಮಜ್‌ಮೂಅ ಇಶ್ತಿಹಾರಾತ್, ಸಂಪುಟ–3, ಪುಟ 316)**

### ಮಿನಾರ ನಿರ್ಮಾಣದ ಮೂರು ಮೂಲಭೂತ ಉದ್ದೇಶಗಳು

ಹಝ್ರತ್ ಮಸೀಹ್ ಮೌಊದ್(ಅ) ಮಿನಾರ ನಿರ್ಮಿಸುವ ಮೂರು ಉದ್ದೇಶಗಳನ್ನು ವಿವರಿಸಿದರು.

1. ಪ್ರಥಮ ಮುಅಝ್ಝಿನ್ ಅದರ ಮೇಲೇರಿ ಐದು ಹೊತ್ತು ನಮಾಝಿಗೋಸ್ಕರ ಅಝಾನ್ ಕೊಡಬೇಕು. ಅದರಿಂದ ಅಲ್ಲಾಹನ ಪವಿತ್ರ ನಾಮ ಉನ್ನತ ಸ್ವರದಲ್ಲಿ ಹಗಲಿರುಳು ಪ್ರಚಾರಪಡಿಸಬೇಕು. ಸಂಕ್ಷಿಪ್ತ ಪದಗಳಲ್ಲಿ ಹೇಳುವುದಾದರೆ ಐದು ಹೊತ್ತು ನಮ್ಮ ಕಡೆಯಿಂದ ಮಾನವ ಜಾತಿಗೆ ಈ ಸಂದೇಶ ಮುಟ್ಟಬೇಕು. ಆದಿಯಿಂದ ಅಂತ್ಯದವರೆಗೂ ಜೀವಂತವಿರುವ ಅಲ್ಲಾಹ್, ಅವನನ್ನು ಆರಾಧಿಸುವುದೇ ಎಲ್ಲಾ ಮನುಷ್ಯರ ಕರ್ತವ್ಯವಾಗಿದೆ. ಪವಿತ್ರ ಪ್ರವಾದಿ ಮುಹಮ್ಮದ್ ಮುಸ್ತಫಾ(ಸ) ರವರು ಇದರ ಬಗ್ಗೆ ಮಾರ್ಗದರ್ಶನ ನೀಡಿದ್ದಾರೆ. ಅವನ ಹೊರತು ಭೂಮ್ಯಾಕಾಶದಲ್ಲಿ ಯಾವ ದೇವನೂ ಇಲ್ಲ." **(ರೂಹಾನಿ ಖಝಾಈನ್, ಸಂಪುಟ–16, ಝಮೀಮ ಖುತ್‌ಬ ಇಲ್‌ಹಾಮಿಯ ಪುಟ–16)**

2. ಮಿನಾರ ನಿರ್ಮಾಣದ ಎರಡನೆಯ ಉದ್ದೇಶವೇನೆಂದರೆ ಈ ಮಿನಾರದ ಗೋಡೆಯ ಉತ್ತರ ಭಾಗದಲ್ಲಿ ಒಂದು ದೊಡ್ಡ ಲಾನ್‌ಟೆನ್ (ದೀಪ) ಸ್ಥಾಪಿಸಬೇಕು. ಅದಕ್ಕೆ ಸುಮಾರು ಒಂದು ನೂರು ರೂಪಾಯಿ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚೆ ಬೆಲೆಯಾಗಿರಬೇಕು. ಅದರ ಪ್ರಕಾರ ಮಿನಾರ್ ಕಣ್ಣು ತೆರೆಸಲು ದೂರ ದೂರದವರೆಗೆ ತಲುಪಬೇಕು. **(ರೂಹಾನಿ ಖಝಾಈನ್, ಸಂಪುಟ–16, ಝಮೀಮ ಖುತ್‌ಬ ಇಲ್‌ಹಾಮಿಯ ಪುಟ–16)**

3. ಮಿನಾರ ನಿರ್ಮಾಣದ ಮೂರನೆಯ ಉದ್ದೇಶವೇನೆಂದರೆ ಈ ಮಿನಾರದ ಗೋಡೆಯ ಎತ್ತರ ಭಾಗದಲ್ಲಿ ಒಂದು ದೊಡ್ಡ ಗಡಿಯಾರ ಅದು ನಾಲ್ಕು ನೂರು ಅಥವಾ ಐದು ನೂರು ರೂಪಾಯಿಗಳ ಬೆಲೆಯಾಗಿರಬೇಕು. ಸ್ಥಪಿಸಬೇಕು. ಅದರಿಂದ ಮನುಷ್ಯನು ಸಮಯ ಗುರುತಿಸುವಂತಾಗಬೇಕು ಮತ್ತು ಮನುಷ್ಯನು ಸಮಯದೆಡೆ ಗಮನ ಹರಿಸುವಂತಾಗಬೇಕು" **(ರೂಹಾನಿ ಖಝಾಈನ್, ಸಂಪುಟ–16, ಝಮೀಮ ಖುತ್‌ಬ ಇಲ್‌ಹಾಮಿಯ ಪುಟ–16)**

### ಮಿನಾರ ನಿರ್ಮಾಣಕ್ಕಾಗಿ ಖರ್ಚಿನ ಉಪಲಬ್ಧತೆ

1900 ಇಸವಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಮಿನಾರತುಲ್ ಮಸೀಹ್ ನಿರ್ಮಾಣದ ಯೋಜನೆ ಹಾಕಿಕೊಂಡಿದ್ದರು. ಆಗ ಜಮಾಅತಿನ ಸದಸ್ಯರ ಸಂಖ್ಯೆ ಅಷ್ಟೇನೂ ಹೆಚ್ಚಾಗಿರಲಿಲ್ಲ. ಅದರ ನಿರ್ಮಾಣಕ್ಕಾಗಿ ಬೇಕಾದ ಚಂದ ಸಂಗ್ರಹಿಸಲು ಸಾಂಪತ್ತಿಕ ಸ್ಥಿತಿಯೂ ಚೆನ್ನಾಗಿರಲಿಲ್ಲ. ಹಝ್ರತ್ ಸಾಹಿಬ್ಜಾದ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್ (ಖಲೀಫತುಲ್ ಮಸೀಹ್ ಸಾನಿ) ರವರು ಹೇಳುತ್ತಾರೆ. ಹಝ್ರತ್ ಅಖ್‌ದಸ್, ಮಸ್ಜಿದ್ ಮುಬಾರಕ್‌ನಲ್ಲಿ ಕುಳಿತುಕೊಂಡಿದ್ದರು. ಮಿನಾರ ನಿರ್ಮಾಣ ಕುರಿತು ಯೋಚಿಸುತ್ತಿದ್ದರು. ಮೀರ್ ಹಿಸಾಮುದ್ದೀನ್ ಸಾಹಿಬ್ ಸಿಯಾಲ್ಕೋಟಿ ಹತ್ತು ಸಾವಿರ ರೂಪಾಯಿಗಳ ಅಂದಾಜು ಹಾಕಿದ್ದರು. ಆದರೆ ಹತ್ತು ಸಾವಿರ ರೂಪಾಯಿ ಹೇಗೆ ಬರುವುದು ಎಂಬ ಪ್ರಶ್ನೆ ಮುಂದಿತ್ತು. ಏಕೆಂದರೆ ಆ ಸಮಯ ಜಮಾಅತಿನ ಸ್ಥಿತಿ ತುಂಬ ದುರ್ಬಲವಾಗಿತ್ತು. ಆ ಪರಿಸ್ಥಿತಿಯಲ್ಲಿ ಮಿನಾರ ನಿರ್ಮಾಣದ ಕಾರ್ಯ ತುಂಬ ಕಷ್ಟಕರವಾಗಿತ್ತು. ಹುಝೂರ್(ಅ) ಅದಕ್ಕಿಂತ ಕಡಿಮೆ ಖರ್ಚು ಬರುವಂತೆ ಸಲಹೆ ಕೇಳುತ್ತಿದ್ದರು. ಅಂತಿಮವಾಗಿ ಹುಝೂರ್(ಅ) ಹತ್ತು ಸಾವಿರ ಮೊತ್ತವನ್ನು ನೂರು ರೂಪಾಯಿಗಳಾಗಿ ವಿಭಜಿಸಿದರು. ಅಂದ ಹಾಗೆ 1900ರ ಒಂದು ಜಲ್ಸಾದಲ್ಲಿ ಜಾಹಿರಾತು ಪ್ರಕಟಿಸಿ ಮಿನಾರ ನಿರ್ಮಾಣಕ್ಕಾಗಿ ಖರ್ಚು ಒದಗಿಸಲು ಹಜ್‌ರತ್ ಅಖದಸ್ ರೂ. 101 ಖುದ್ದಾಮರ ಒಂದು ಪಟ್ಟಿ ತಯಾರಿಸಿ ಕನಿಷ್ಠ ಒಂದೊಂದು ನೂರು ರೂಪಾಯಿಗಳ ಚಂದಾ ಕೊಡಲು ಕರೆ ನೀಡಿದರು. ಈ ನಿರ್ಮಾಣಕ್ಕೆ ಬದ್ಧರಾಗಿ ಚಂದಾ ನೀಡುವವರ ಹೆಸರುಗಳನ್ನು ಮಿನಾರದ ಮೇಲೆ ಸ್ಮರಣಾರ್ಥವಾಗಿ ಬರೆಯಲು ನಿರ್ಧರಿಸಲಾಯಿತು. ಈ ನಿರ್ಣಯ ಕೈಗೊಳ್ಳುತಿದ್ದಂತೆಯೇ ಅವರ ನಾಲ್ಕು ನಿಷ್ಠಾವಂತ ಖುದ್ದಾಮ್ ಮುನ್ಶಿ ಅಬ್ದುಲ್ ಅಝೀಝ್ ಸಾಹಿಬ್ ಓಜಲ್ವಿ, ಮಿಯಾ ಶಾದಿ ಖಾನ್ ಸಾಹಿಬ್ ಲಕ್‌ಡಿ ಫರೋಶ್ ಸಿಯಾಲ್ಕೋಟ್, ಮೌಲ್ವಿ ಮುಹಮ್ಮದ್ ಅಲಿ–ಸಾಹಿಬ್ ಎಂ.ಎ, ಹಾಗೂ ಶೇಖ್ ನಿಯಾಝ್ ಅಹ್ಮದ್ ಸಾಹಿಬ್ ತಾಜಿರ್ ವಝೀರಾಬಾದ್ ಅವರುಗಳು ಹುಝೂರರ ಶರತ್ತಿನ ಪ್ರಕಾರ ಚಂದಾ ನೀಡಿದರು. ಅವರಲ್ಲಿ ಇಬ್ಬರು ಸಹಾಬರ ವಿವರ ಹುಝೂರ್(ಅ) ಜಾಹಿರಾತಿನ ಪ್ರಾರಂಬದಲಿಯೇ ಪ್ರಶಂಸಿಸಿ ಅವರ ತ್ಯಾಗವು ಜಮಾಅತಿಗೆ ಮಾದರಿಯಾಗಿದೆ ಎಂದರು. ಹಝ್ರತ್ ಉಮ್ಮುಲ್ ಮುಮಿನೀನ್(ರ) ಅವರು ಮಿನಾರಕ್ಕಾಗಿ ಒಂದು ಸಾವಿರ ರೂಪಾಯಿಗಳ ಚಂದಾ ಬರೆಸಿದರು. ಅದನ್ನು ದೆಹಲಿಯ ತಮ್ಮ ಸ್ವಂತ ಮನೆಯನ್ನು ಮಾರಾಟ ಮಾಡಿ ಪ್ರಧಾನ ಮಾಡಿದರು. ದಿನಾಂಕ: 13 ಝುಲ್‌ಹಜ್ಜ್ 1320 ಹಿಜರಿ, 13 ಮಾರ್ಚ್ 1903 ಶುಕ್ರವಾರ ದಿನ ಮಿನಾರತುಲ್ ಮಸೀಹ್‌ಗೆ ಅಡಿಗಲ್ಲು ಹಾಕಲಾಯಿತು. ಆ ದಿನ ಜುಮುಅ ನಮಾಝ್ ನಂತರ ಹಝ್ರತ್ ಮಸೀಹ್ ಮೌಊದ್(ಅ) ರವರ ಸೇವೆಯಲ್ಲಿ ಹಾಜರಾಗಿ ಹಕೀಮ್ ಫಝುಲ್ ಇಲಾಹಿ

ಸಾಹಿಬ್ ಲಾಹೋರಿ, ಮಿರ್ಝಾ ಖುದಾ ಬಕ್ಷ್ ಸಾಹಿಬ್ ಮುಂತಾದ ಬಂಧುಗಳು ಹೇಳಿದರು. ಹುಝೂರ್ ತಮ್ಮ ಪವಿತ್ರ ಹಸ್ತದಿಂದ ಮಿನಾರತುಲ್ ಮಸೀಹದ ಬುನಾದಿಯ ಪ್ರಥಮ ಇಟ್ಟಿಗೆಯನ್ನು ಇಡಬೇಕು. ಹುಝೂರ್(ಅ) ಹೇಳಿದರು. ನನಗೆ ಇಂದು ಮಿನಾರತುಲ್ ಮಸೀಹ್‌ನ ಅಡಿಗಲ್ಲು ಇಡಬೇಕಾಗಿದೆ ಎಂದು ತಿಳಿದಿರಲಿಲ್ಲ. ಇದೀಗ ನೀವು ಒಂದು ಇಟ್ಟಿಗೆಯನ್ನು ತಂದುಕೊಡಿ. ನಾನು ಅದರ ಮೇಲೆ ದುಆ ಪಠಿಸುವೆನು. ಮತ್ತೆ ನಾನು ಎಲ್ಲಿ ಹೇಳುತ್ತೇನೊ ಅಲ್ಲಿ ನೀವು ಅದನ್ನು ಸ್ಥಾಪಿಸಿರಿ. ಅಂದ ಹಾಗೆ ಹಕೀಮ್ ಫಝ್ಲುಲ್ ಇಲಾಹಿ ಸಾಹಿಬ್ ಇಟ್ಟಿಗೆ ತಂದರು. ಹುಝೂರ್(ಅ) ಅದನ್ನು ತೊಡೆಯ ಮೇಲೆ ಇಟ್ಟುಕೊಂಡು ಸುದೀರ್ಘವಾಗಿ ದುಆ ಮಾಡಿದರು. ದುಆ ನಂತರ ಅವರು ಆ ಇಟ್ಟಿಗೆಯನ್ನು ಅನುಗ್ರಹಿಸಿದರು ಮತ್ತು ಹಕೀಮ್ ಫಝ್ಲುಲ್ ಇಲಾಹಿ ಸಾಹಿಬರಿಗೆ ಹೇಳಿದರು. ನೀವು ಅ ಇಟ್ಟಿಗೆಯನ್ನು ಮಿನಾರತುಲ್ ಮಸೀಹದ ಪಶ್ಚಿಮ ದಿಕ್ಕಿನಲ್ಲಿಡಿ. ಹಕೀಮ್ ಸಾಹಿಬ್ ಮತ್ತು ಇತರ ಬಂಧುಗಳು ಆ ಪವಿತ್ರ ಇಟ್ಟಿಗೆಯನ್ನು ತೆಗೆದುಕೊಂಡು ಮಸ್ಜಿದ್ ಅಖ್ಸಾ ತಲುಪಿದಾಗ ರಸ್ತೆಯಲ್ಲಿ ಮೌಲ್ವಿ ಅಬ್ದುಲ್ ಕರೀಮ್ ಸಹಿಬ್(ರ) ಜಮುಅ ನಮಾಝ್ ನಿರ್ವಹಿಸಿ ಮರಳಿ ಬರುತ್ತಿದ್ದರು. ನಮಾಝ್ ಜುಮುಅ ನಂತರ ಹೆಚ್ಚಿನ ಸಮಯ ಮಸ್ಜಿದ್ ಅಖ್ಸಾದಲ್ಲಿ ಕಳೆಯುವುದು ಮೌಲ್ವಿ ಸಾಹಿಬರ ರೂಢಿಯಾಗಿತ್ತು. ಆಧ್ಯಾತ್ಮಿಕ, ಜಾಣ್ಮೆಭರಿತ ಜ್ಞಾನಯುತ್ತ ಅದು ರಸಭರಿತ ಸಭೆಯಾಗಿರುತ್ತಿತ್ತು. ಅಲ್ಲಿ ಹೊರಗಿನಿಂದಲೂ ಹಲವು ಜನರು ಬಂದು ಸೇರಿ ಅವರ ಮಾತುಗಳಿಂದ ಅನುಗ್ರಹಿತರಾಗುತ್ತಿದ್ದರು. ಆ ದಿನವು ಸಹ ಮಾಮೂಲಿಗಿಂತ ತಡ ಮಾಡಿ ಬರತೊಡಗಿದ್ದರು. ರಸ್ತೆಯಲ್ಲಿ ಈ ವಿಷಯ ತಿಳಿದ ನಂತರ ಪುಳಕಿತರಾದರು. ಮತ್ತು ಆ ಇಟ್ಟಿಗೆಯನ್ನು ಎದೆಗೆ ಹಚ್ಚಿಕೊಂಡು ದೀರ್ಘ ಸಮಯದವರೆಗೆ ದುಆ ಮಾಡಿದರು ಮತ್ತು ಹೇಳಿದರು. ಈ ಶುಭಕಾರ್ಯವು ನಾನು ದೇವದೂತರ ಸಾಕ್ಷ್ಯಗಳ ನಡುವೆ ಆಗುವಂತೆ ಆಶಿಸುತ್ತೇವೆ. ಅಂತಿಮವಾಗಿ ಆ ಇಟ್ಟಿಗೆ ಫಝ್ಲುಲುದ್ದೀನ್ ಸಾಹಿಬ್ ಅಹ್ಮದಿ ಮೆಮಾರ್ ಅವರು ಬುನಾದಿಯ ಪಶ್ಚಿಮ ಭಾಗದಲ್ಲಿ ಸ್ಥಾಪಿಸಿದರು. ಮತ್ತು ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್(ರ) ಅವರು ಈ ಕಾರ್ಯದ ಉಸ್ತುವಾರಿ ವಹಿಸಿಕೊಂಡಿದ್ದರು.

ಮಿನಾರದ ಬುನಾದಿಯು ತುಂಬ ಆಳವಾದ ಮತ್ತು ಉದ್ದಗಲಕ್ಕೂ ಕಾಂಕ್ರೇಟಿನಿಂದ ಭದ್ರಗೊಳಿಸಿದರು.

**ಮಿನಾರ ನಿರ್ಮಾಣ ತಡೆಹಿಡಿಯಲು ಅಹ್ಮದಿಯ ವಿರೋಧಿಗಳು ಸರಕಾರಿ ಅಧಿಕಾರಿಗಳ ಮೊರೆ ಹೋದರು.**

ಪ್ರಾರಂಭದಿಂದಲೇ ಖಾದಿಯಾನಿನಲ್ಲಿ ಆರ್ಯ ಸಮಾಜದವರೊಂದಿಗೆ ಸಂಬಂಧವುಳ್ಳವರ ಒಂದು ಗುಂಪು ಹಝ್ರತ್ ಮಸೀಹ್ ಮೌಊದ್(ಅ) ರವರ ಇಸ್ಲಾಂ ಧರ್ಮದ ಸೇವೆಯ ನಿಮಿತ್ತ ವಿರೋಧ ಮಾಡುತ್ತಲೇ ಇದ್ದರು. ಒಮ್ಮೆ ಅಮೃತಸರದಿಂದ ಪಂಡಿತ್ ಖಡಕ್‌ಸಿಂಗ್‌ರಿಗೆ ಖಾದಿಯಾನಿಗೆ ಆಹ್ವಾನ ನೀಡಲಾಗಿತ್ತು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರರೊಂದಿಗೆ ಚರ್ಚಾಕೂಟ ಏರ್ಪಡಿಸಲು ಆಹ್ವಾನ ನೀಡಲಾಗಿತ್ತು. ಒಮ್ಮೆ ಇಸ್ಲಾಂ ಹಾಗೂ ಹಝ್ರತ್ ಮಸೀಹ್ ಮೌಊದ್(ಅ) ರವರನ್ನು ಸುಳ್ಳುವಾದಿ ಎನ್ನಲು, "ಶುಭ ಚಿಂತಕ" ಪತ್ರಿಕೆ ಜಾರಿ ಮಾಡಿದ್ದರು.

"ಮಿನಾರತುಲ್ ಮಸೀಹ್" ಗೆ ಅಡಿಗಲ್ಲು ಹಾಕಿದ ನಂತರ ಅದೇ ವರ್ಗದವರು ಕಡು ರೀತಿಯಲ್ಲಿ ವಿರೋಧ ಮಾಡಲು ಪ್ರಾರಂಭಿಸಿದರು ಮತ್ತು ಅದರ ನಿರ್ಮಾಣ ಕಾರ್ಯವನ್ನು ತಡೆಹಿಡಿಯಲು ಸರಕಾರಿ ಅಧಿಕಾರಿಗಳವರೆಗೆ ತಲುಪಿದರು. ಜಿಲ್ಲಾಡಳಿತದವರು ಸಹ ಈ ಸಮಸ್ಯೆಯ ತನಿಖೆಗೋಸ್ಕರ ದಿನಾಂಕ 8 ಮೇ 1903 ರಲ್ಲಿ ಬಟಾಲ ತಹಶೀಲ್ದಾರ್‌ರನ್ನು ಖಾದಿಯಾನಿಗೆ ಕಳುಹಿಸಿದರು. ಅವರು ಖಾದಿಯಾನಿಗೆ ತಲುಪಿದಾಗ ಹಝ್ರತ್ ಮಸೀಹ್ ಮೌಊದ್(ಅ) ವಿಹಾರಕ್ಕಾಗಿ ತೆರಳಿದ್ದರು. ಸುಮಾರು ಅರ್ಧ ಗಂಟೆಯ ನಂತರ ಹುಝೂರ್(ಅ) ಮರಳಿ ಬಂದರು. ಮತ್ತು ಈ ಕೆಳಗೆ ನಮೂದಿತ ಪ್ರಶ್ನೋತ್ತರಗಳು ನಡೆದವು.

ತಹಶೀಲ್ದಾರ್: ಮಿನಾರ್ ಏಕೆ ನಿರ್ಮಿಸುತ್ತಿದ್ದೀರಿ?

ಹುಝೂರ್(ಅ):(1) ಈ ಮಿನಾರ್ ನಿರ್ಮಾಣದಲ್ಲಿ ಒಂದು ಅನುಗ್ರಹವಿದೆ. ಅದರ ಮೇಲೇರಿ ಅಲ್ಲಾಹನ ನಾಮ ಉಚ್ಚರಿಸಲಾಗುತ್ತದೆ ಮತ್ತು ಎಲ್ಲಿ ಅಲ್ಲಾಹನ ನಾಮ ಉಚ್ಚರಿಸಲಾಗುತ್ತದೆಯೋ ಅಲ್ಲಿ ಅನುಗ್ರಹವಿರುತ್ತದೆ.

(2) ಅದರ ಮೇಲೆ ಒಂದು ಲಾಲ್‌ಟೇನ್ (ದೀಪ) ಸ್ಥಾಪಿಸಲಾಗುವುದು. ಅದರ ಪ್ರಕಾಶ ದೂರ ದೂರದವರೆಗೆ ತಲುಪಿಸುವುದು.

(3) ಒಂದು ಗಡಿಯಾರ ಸ್ಥಾಪಿಸಲಾಗುವುದು.

(4) ಅದರಿಂದ ಬಟ್ಟಬಯಲಾಗುತ್ತದೆ (ಪರದೆ ಇರುವುದಿಲ್ಲ) ಎಂಬುದು ಸಹ ತಪ್ಪು ಕಲ್ಪನೆಯಾಗಿದೆ. ಅದು ಎಷ್ಟೊಂದು ಎತ್ತರದ್ದಾಗಿದೆ ಎಂದರೆ ಮನುಷ್ಯನು ಮೇಲೇರಿದರೆ ನಮ್ಮ ಮನೆಯಲ್ಲಿಯೂ ಅವನ ದೃಷ್ಟಿ ಬೀಳುತ್ತದೆ. ಹಾಗಾದರೆ ನಾವು ಅವರ ದೃಸ್ಟಿ ಬೀಳಿಸಲು ಹೇಳಬಹುದೇ, ನಮಗೆ ಸ್ವಯಂ ಪರದೆಯ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.

ಹಝ್ರತ್ ಹಾಫಿಝ್ ರೋಷನ್ ಅಲಿ ಸಾಹಿಬ್(ರ) ಹೇಳುತ್ತಾರೆ. ಮಿನಾರತುಲ್ ಮಸೀಹ್ ನಿರ್ಮಾಣವಾಗುತ್ತಿರುವಾಗ ಖಾದಿಯಾನಿನ ಜನರು ನಮಗೆ ಅದರಿಂದ ಪರದೆ ಇಲ್ಲದಂತಾಗುತ್ತದೆ ಎಂದು ಅಧಿಕಾರಿಗಳ ಬಳಿ ದೂರು ಕೊಡಲು ಹೊರಟರು. ಅಂದ ಹಾಗೆ ಸರಕಾರದ ವತಿಯಿಂದ ಒಬ್ಬ ಡೆಪ್ಯೂಟಿ ಖಾದಿಯಾನಿಗೆ ಬಂದರು ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರೊಡನೆ ಮಸ್ಜಿದ್ ಮುಬಾರಕ್‌ಗೆ ಹೊಂದಿದ ಒಂದು ಕೋಣೆಯಲ್ಲಿ (ಬೈತುಲ್ ಫಿಕರ್) ಭೇಟಿಯಾದರು. ಆ ಸಮಯ ದೂರು ಕೊಡಲು ಹೊರಟ ಜನರು ಅವರೊಂದಿಗಿದ್ದರು. ಹಝ್ರತ್ ಸಾಹಿಬರೊಡನೆ ದೀರ್ಘ ಮಾತುಕತೆ ನಡೆದಿತ್ತು. ಮಾತುಕತೆಯ ನಡುವೆ ಹಝ್ರತ್ ಸಾಹಿಬ್ ಡೆಪ್ಯೂಟಿಯನನ್ನು ಸಂಬೋಧಿಸಿ ಹೇಳಿದರು. ಈ ಬುಡ್ಡಮಲ್ ಇಲ್ಲಿ ಕುಳಿತುಕೊಂಡಿದ್ದಾನೆ. ನೀವು ಇವನನ್ನು ಕೇಳಿ ನೋಡಿ. ಬಾಲ್ಯದಿಂದ ಇಲ್ಲಿಯತನಕ ಅವನಿಗೆ ಒಳ್ಳೆಯದೇನಾದರು ಮಾಡುವಂತಹ ಸಂಧರ್ಭ ಒದಗಿ ಬಂದಾಗ ನಾನು ಆ ಕಾರ್ಯ ಮಾಡುವುದರಲ್ಲಿ ಸ್ವಲ್ಪವಾದರೂ ಕಡಿಮೆ ಮಾಡಿದ್ದೇನೆಯೇ? ಮತ್ತು ಅವನನ್ನೇ ಕೇಳಿ ನನಗೆ ಕಷ್ಟಕೊಡಲು ಸಂಧರ್ಭ ಒದಗಿದಾಗ ಬಂದಾಗ ಅವನು ನನಗೆ ಕಷ್ಟ ಕೊಡುವುದರಲ್ಲಿ ಏನಾದರೂ ಕಡಿಮೆ ಪ್ರಯತ್ನ ಮಾಡಿದ್ದಾನೆಯೇ? ಹಾಫೀಝ್ ಸಾಹಿಬ್ ಹೇಳುತ್ತಾರೆ. ನಾನು ಆ ಸಮಯ ಬಡ್ಡಾಮಲ್‌ನನ್ನು ನೋಡುತ್ತಿದ್ದೆ. ಅವನು ನಾಚಿಕೆಯಿಂದ ತನ್ನ ತಲೆಯನ್ನು ಎರಡು ಕಾಲುಗಳ ನಡುವೆ ಹಾಕಿ ಕುಳಿತುಕೊಂಡಿದ್ದ. ಅವನ ಮುಖ ರಕ್ತಹೀನನಂತೆ ಬಿಳಿಯಾಗಿ ಬಿಟ್ಟಿತ್ತು. ಅವನ ಮುಖದಿಂದ ಒಂದು ಶಬ್ದ ಸಹ ಹೊರಡಲಿಲ್ಲ. **(ಸೀರತುಲ್ ಮಹದಿ ಭಾಗ–1, ಪುಟ–138, ವರದಿ ಸಂಖ್ಯೆ 148)**

ಅಂತಿಮವಾಗಿ ಈ ಸಮಸ್ಯೆ ಡೆಪ್ಯೂಟಿ ಕಮೀಷನರ್ ಬಹಾದೂರ್ ಗುರುದಾಸಪುರ ನ್ಯಾಯಾಲಯದವರೆಗೆ ಹೋಯಿತು. ಅಲ್ಲಿಯ ತೀರ್ಪು ಈ ಕೆಳಗಿನಂತಿದೆ.

"ನಕಲು ಆದೇಶ ಸಭೆ; ಎಂ. ಡಾಲಸ್ ಸಹಿಬ್ ಬಹಾದೂರ್. Deputy Commissioner ಬಹಾದೂರ್ ಜಿಲ್ಲಾ ಗುರುದಾಸಪುರ ತೀರ್ಪು, 13 ಮೇ 1903 ಕೇಸು ಸಂಖ್ಯೆ 4–17 ಮಿನಾರತುಲ್ ಮಸೀಹ್ ನಿರ್ಮಣ ಕಾರ್ಯದ ದಸ್ತಾ ವೇಜುಗಳು ಮತ್ತು ಖಾದಿಯಾನ್ ನಿವಾಸಿಗಳಿಂದ ಅದರ ವಿರುದ್ಧ ಮಂಡಿಸಿದ ದೂರುಗಳು, ಸದ್ಯ ಶಾಂತಿಭಂಗವಾಗುವಂತಹ ಯಾವ ಭಯವು ಇಲ್ಲ. ಎಲ್ಲ ದಸ್ತಾವೇಜುಗಳು ಕಚೇರಿಯ ಕಡತಕ್ಕೆ ಸೇರಿಸತಕ್ಕದ್ದು. **(ಅಲ್–ಹಕಮ್, 10 ಜೂನ್ 1903, ಪುಟ 4–10)**

ಈ ತೀರ್ಪಿನ ಜೊತೆಯಲ್ಲಿಯೇ ವಿರೋಧಿಗಳ ಎಲ್ಲಾ ಷಡ್ಯಂತರಗಳು ವಿಫಲಗೊಂಡವು. ಅಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್

**ಸಾಂಪತ್ತಿಕ ಸಮಸ್ಯೆಗಳಿಂದಾಗಿ ಮಿನಾರ ನಿರ್ಮಾಣ ಕಾರ್ಯ ತಡವಾಯಿತು.**

ಹಝ್ರತ್ ಮಸೀಹ್ ಮೌಊದ್(ಅ) ದೈವಿಕ ಇಂಗಿತನುಸಾರವಾಗಿ ಮಿನಾರತುಲ್ ಮಸೀಹ್ ನಿರ್ಮಾಣ ಕಾರ್ಯ ಪ್ರಾರಂಬಿಸಿದ್ದರು. ಆದರೆ ಕೆಲ ಸಮಸ್ಯೆಗಳಿಂದಗಿ ನಿರ್ಮಾಣ ಕಾರ್ಯ ಸ್ಥಗಿತಗೊಳಿಸಬೇಕಾಯಿತು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ವರದಿ ಮಾಡುತ್ತಾರೆ. 'ಮಿನಾರ್ ನಿರ್ಮಾಣ ಕಾರ್ಯ (ಸಾಂಪತ್ತಿಕ ಸಮಸ್ಯೆಯಿಂದಾಗಿ) ಸ್ಥಗಿತಗೊಂಡ ಕಾರಣ ಒಂದು ದಿನ ಒಬ್ಬ ವ್ಯಕ್ತಿಯು ಪ್ರಶ್ನಿಸಿದನು. ಹುಝೂರ್ ಈ ಮಿನಾರ ಯಾವಾಗ ಸಿದ್ಧಗೊಳ್ಳುವುದು? ಹುಝೂರ್(ಅ) ಹೇಳಿದರು. ಎಲ್ಲಾ ಕಾರ್ಯಗಳು ನಾವೇ ಅಂತ್ಯಗೊಳಿಸಿದರೆ ಹಿಂದೆ ಬರುವವರಿಗೆ ಯಾವ ಪುಣ್ಯ ಕಾರ್ಯ ಉಳಿಯುವುದು. ಅಂದ ಹಾಗೆ ಹಾಗೆಯೇ ಆಯಿತು. ಹುಝೂರ್(ಅ) ರವರ ಜೀವಿತದಲ್ಲಿ ಮಿನಾರ ಕಟ್ಟಡವು ಮಸೀದಿಯ ಅಂಗಳ ಮಟ್ಟದಿಂದ 6 ಅಡಿಯಿಂದ ಹೆಚ್ಚು ಮೇಲೇರಲಿಲ್ಲ.

**ಮಿನಾರತುಲ್ ಮಸೀಹ್‌ನ ಪರಿಪೂರ್ಣತೆ**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರನ್ನು ಅಲ್ಲಾಹನು 14 ಮಾರ್ಚ್ 1914ರಲ್ಲಿ ಖಿಲಾಫತ್ ಸ್ಥಾನ ದಯಪಾಲಿಸಿದನು. ಈ ಪವಿತ್ರವಾದ ಉನ್ನತಮಯ ಸ್ಥಾನದ ಹೊಣೆಗಾರಿಕೆಗಳನ್ನು ವಹಿಸಿಕೊಂಡ ಕೆಲ ತಿಂಗಳ ನಂತರವೇ ದಿನಾಂಕ: 27 ನವೆಂಬರ್ 1914 ರಲ್ಲಿ ಅಪೂರ್ಣಗೊಂಡಿದ್ದ ಕಟ್ಟಡದ ಮೇಲೆ ತನ್ನ ಪವಿತ್ರ ಹಸ್ತದಿಂದ ಇಟ್ಟಿಗೆಯನ್ನಿಟ್ಟು ಅದರ ನಿರ್ಮಾಣ ಕಾರ್ಯ ಮರು ಚಾಲನೆ ನೀಡಿದರು. ಈ ಸಲ ನಿಮಾಣ ಕಾರ್ಯದ ಉಸ್ತುವಾರಿಯನ್ನು ಖಾಝೀ ಅಬ್ದುರ್ ರಹೀಂ ಭಟ್ಟಿ ಸಾಹಿಬರಿಗೆ ವಹಿಸಿಕೊಟ್ಟರು. ಅದಕ್ಕಾಗಿ ಅಜ್ಮೀರಿನಿಂದ ಅತ್ಯುತ್ತಮ (ಮರ್‌ಮಿರ್) ಮಾರ್ಬಲ್‌ಗಳನ್ನು ಒದಗಿಸಲಾಯಿತು. ಅಂತಿಮವಾಗಿ ರಸೂಲುಲ್ಲಾಹ್(ಸ) ರವರ ನುಬುವತ್ತಿನ ಸಾಕ್ಷ್ಯಗಳ ಈ ಅಚಲ ದೃಷ್ಟಾಂತವು ಡಿಸೆಂಬರ್ 1915 ರಲ್ಲಿ ಪೂರ್ಣಗೊಂಡಿತು. ಈ ಸುಂದರ, ಆಕರ್ಷಕ ಮತ್ತು ಭವ್ಯವಾದ ಮಿನಾರ (ಶಿಲ್ಪ ಕಲೆಯ ಒಂದು ಅದ್ವಿತೀಯ ಮಾದರಿಯಾಗಿದೆ) ಒಂದು ನೂರ ಐದು ಅಡಿ ಎತ್ತರವಾಗಿದೆ. ಅದರಲ್ಲಿ ಮೂರು ಮಜಲುಗಳಿವೆ. ಒಂದು ಗುಂಬಜು ಮತ್ತು 92 ಮೆಟ್ಟಿಲುಗಳಿವೆ.

**ಅಲ್ಲಾಹನ ವತಿಯಿಂದ ಮಿನಾರತುಲ್ ಮಸೀಹನ ರಕ್ಷಣೆ ಹಾಗೂ ಸುರಕ್ಷತೆ**

ಹಿಂದಿನ ನೂರು ವರ್ಷಗಳಿಂದ ಹಲವು ಭೂಕಂಪಗಳು ಮತ್ತು ಪ್ರವಾಹಗಳು ಬಂದಿವೆ, ಈ ಪರಿಸ್ಥಿತಿಗಳ ನಡುವೆಯೂ ಅಲ್ಲಾಹನು ಮಿನಾರತುಲ್ ಮಸೀಹನ್ನು ಸಂರಕ್ಷಿಸಿದನು. ದಿನಾಂಕ: 8 ಅಕ್ಟೋಬರ್ 2005 ರಲ್ಲಿ ಸುಮಾರು 9 ಕಾಲು ಗಂಟೆಗೆ ಬೆಳಿಗ್ಗೆ ಒಂದು ಭಯಂರವಾದ ಭೂಕಂಪ ಸಂಭವಿಸಿತು. ಈ ವಿನೀತನು ಹಳೆಯ ಕಚೇರಿಗಳಿಂದ ಸದರ್ ಅಂಜುಮನ್ ಅಹ್ಮದಿಯಾ, ಅದು ಮಸ್ಜಿದ್ ಅಖ್ಸದ ಪೂರ್ವ ದಿಕ್ಕಿನ ಕಟ್ಟಡಕ್ಕೆ ಸೇರಿತ್ತು. ಆ ಕಟ್ಟಡದ ಉತ್ತರ ದಿಕ್ಕಿನತ್ತ ನಾನು ಮಿನಾರತುಲ್ ಮಸೀಹ್‌ನ ಕೆಳಗೆ ನಿಂತುಕೊಂಡಿದ್ದೆ. ಮಿನಾರತುಲ್ ಮಸೀಹ್‌ನ ಸಮೀಪದಲ್ಲೆಲ್ಲ ಇರುವ ಎಲ್ಲ ಕಟ್ಟಡಗಳು ಅಲ್ಲಾಡುತ್ತಿದ್ದವು. ಆದರೆ ಮಿನಾರುತುಲ್ ಮಸೀಹ್ ಸ್ವಲ್ಪವೂ ಅಲ್ಲಾಡುತ್ತಿರಲಿಲ್ಲ. ಯಾವುದೇ ನಷ್ಟ ಉಂಟಾಗದಂತೆ ದೈವಿಕ ಹಸ್ತವು ಅದನ್ನು ಹಿಡಿದಿಟ್ಟುಕೊಂಡಂತೆ ಭಾಸವಾಗುತ್ತಿತ್ತು.

ಖಾದಿಯಾನ್ ನಿವಾಸಿಗಳಾದ ಸಜ್ಜನ ವ್ಯಕ್ತಿಗಳು ಈ ವಾಸ್ತವವನ್ನು ಒಪ್ಪಿಕೊಂಡು ಮಿನಾರದ ಅನುಗ್ರಹದಿಂದಲೇ ಅಲ್ಲಾಹನು ನಮಗೆ ಆಪತ್ತಿನಿಂದ ರಕ್ಷಿಸಿದಂತಾಗಿದೆ ಎಂದು ಹೇಳುತ್ತಿದ್ದರು. ಹಕೀಮ್ ಸುವರ್ಣ ಸಿಂಗ್, ಜ್ಞಾನಿ ಲಾಭ ಸಿಂಗ್ ಆ ಸಮರ್ಥಕರಲ್ಲಿ ಸುಪ್ರಸಿದ್ಧರು. ಅವರುಗಳು ಈಗ ನಿಧನ ಹೊಂದಿದ್ದಾರೆ.

**ಅಭಿನಂದನೆಗಳು**

ಹಝ್ರತ್ ಮಸೀಹ್ ಮೌಊದ್(ಅ) ಬರೆದರು: "ಮಿನಾರ ನಿರ್ಮಾಣಕ್ಕಾಗಿ ಕನಿಷ್ಠ ಪಕ್ಷ ಒಂದು ನೂರು ರೂಪಾಯಿಗಳ ಚಂದಾ ನೀಡಿದವರ ಎಲ್ಲರ ಹೆಸರುಗಳು ಬರೆಯಲಾಗುವುದು. ಅವರ ಈ ಹೆಸರುಗಳು ದೀರ್ಘ ಕಾಲಾವಧಿಯವರೆಗೆ ಗೋಡೆಬರಹ ರೂಪದಲ್ಲಿ ಮಿನಾರದ ಮೇಲೆ ಅಚ್ಚುಗೊಳ್ಳುವುದು. ಅದು ಮುಂಬರುವ ಪೀಳಿಗೆಗೆ ದುಆ ಮಾಡಲು ಪ್ರೇರಕವಾಗುವುದು. **(ಮಜ್ಮುಅ ಇಶ್ತಿಹಾರಾತ್, ಸಂಪುಟ–3, ಪುಟ–319, ಜುಲೈ 1, 1900)**

ಹಝ್ರತ್ ಮಸೀಹ್ ಮೌಊದ್(ಅ) ಘೋಷಿಸಿದ ಪ್ರಕಾರ 306 ಚಂದಾ ನೀಡಿದರ ಹೆಸರುಗಳು ಮಿನಾರತುಲ್ ಮಸೀಹ್ ಮೇಲೆ ಕೆತ್ತಲಾಗಿದೆ. ಕಾಲಕಳೆದಂತೆ ಕೆತ್ತಲಾದ ಹೆಸರುಗಳ ಮಸಿ ಮಂದವಾಗಿದೆ. ಅದರ ಸೂಚನೆ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ತಲುಪಿಸಿದಾಗ ಹುಝೂರ್ ಅನ್ವರ್(ಅಬಿಅ) ಕೆತ್ತಲದ ಆ ಹೆಸರುಗಳಲ್ಲಿ ಮರು ಮಸಿ ತುಂಬಲು ನಿರ್ದೇಶನ ಹಾಗೂ ಅನುಮತಿ ದಯಪಾಲಿಸಿದ್ದಾರೆ. ಹುಝೂರರ ನಿರ್ದೇಶನ ಹಾಗೂ ಅನುಮತಿಯನ್ವಯ ಜನವರಿ 2020 ರಲ್ಲಿ ಮಸಿ ತುಂಬಿಸುವ ಕಾರ್ಯ 'ನಝಾಮತ್ ತಅ್‌ಮಿರಾತ್' ಖಾದಿಯಾನ್ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದರು. **ಜಝಾಕುಮುಲ್ಲಾಹ್ ಅಹಸನಲ್ ಜಝಾಅ** ಇದೀಗ ಆ ಹೆಸರುಗಳು ದೂರದಿಂದಲೂ ಓದಬಹುದಾಗಿದೆ. ಓದುವವರು ಚಂದಾದಾರರಿಗೆ ದುಆ ಅರ್ಪಿಸುತ್ತಾರೆ. **ಅಲ್‌ಹಮ್ದುಲಿಲ್ಲಾಹ್ ಅಲಾ ಝಾಲಿಕ್**

ಪ್ರಸಕ್ತ ಸಮಯದಲ್ಲೂ ಆ 306 ಅದೃಷ್ಟವಂತ ಚಂದಾದಾರರ ಹೆಸರುಗಳು ಮಿನಾರತುಲ್ ಮಸೀಹ್ ಖಾದಿಯಾನ್ ಮೇಲೆ ಕೆತ್ತಲ್ಪಟ್ಟಿದೆ. ಆ ಹೆಸರುಗಳು ಕೆಳಗೆ ನಮೂದಿಸಲಾಗಿದೆ.

1. ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್
   ವಾಗ್ದಾತ್ತ ಮಸೀಹ್ ಅಲೈಹಿಸ್ಸಲಾಮ್.
2. ಹಝ್ರತ್ ಮೌಲವಿ ನೂರುದ್ದೀನ್ ಖಲೀಫತುಲ್ ಮಸೀಹ್ ಅವ್ವಲ್(ರ)
3. ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಖಲೀಫತುಲ್ ಮಸೀಹ್ ಸಾನಿ(ರ)
4. ಹಝ್ರತ್ ನುಸ್ರತ್ ಜಹಾನ್ ಬೇಗಮ್ ಉಮ್ಮುಲ್ ಮುಮಿನೀನ್
5. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ
6. ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ರೀಸ್ ಮಲೇರ್‌ಕೋಟ್ಲ
7. ಡಾ॥ ಮೀರ್ ಮುಹಮ್ಮ್‌ದ್ ಇಸ್ಮಾಈಲ್ ಸಿವಿಲ್ ಸರ್ಜನ್ ಖಾದಿಯಾನ್
8. ಹಾಫಿಝ್ ರೌಶನ್ ಅಲಿ(ರ) ಖಾದಿಯಾನ್
9. ಮೌಲ್ವಿ ಝುಲ್‌ಫಿಖಾರ್ ಅಲಿ ಖಾನ್ ಗೌಹರ್ ರಾಮ್‌ಪುರಿ ಮುಹಾಜಿರ್ ಖಾದಿಯಾನ್
10. ಮುಹಮ್ಮದ್ ಹಯಾತ್ ಖಾನ್ ಪೆಅಶೆನರ್ ಹಾಫಿಝಾಬಾದ್
11. ಮೌಲ್ವಿ ಗುಲಾಮ್ ಅಕ್ಬರ್ ಖಾನ್ ನವಾಬ್ ಅಕ್ಬರ್ ಯಾರ್‌ಜಂಗ್ ಹೈದ್ರಬಾದ್ ದಕ್ಕನ್
12. ಬಾಬು ಮುಹಮ್ಮದ್ ಅಫ್ಝಲ್ ಸುಪ್ರಿಟೆಂಡೆಂಟ್ ದಫ್ತರ್ ರೆಸಿಟೆಂಟ್ ವಝೀರಾಬಾದ್
13. ಖಾನ್ ಬಹಾದ್ದೂರ್ ಮುಹಮ್ಮದ್ ಅಲಿ ಖಾನ್
    ನೇಗ್‌ಶ್ ಪೊಲಿಟಿಕಲ್ ಆಫಿಸರ್ ಕೋಹಾಟ್
14. ಖಾನ್ ಸಾಹಿಬ್ ಚೌಧರಿ ನೆಲತ್ತುಲ್ಲಾ ಖಾನ್
    ಸಬ್ ಜಜ್ ಬೇಗಮ್ ಪೂರ್
15. ರಶೀದ ಬೇಗಮ್ ಎಹ್ಲಿಯ ಚೌಧರಿ ಝುಫ್ರುಲ್ಲಾ ಖಾನ್ ಬೆರಿಶ್ಟರ್ ಲಾಹೋರ್
16. ಅಖ್ವಿಂದ್ ಮುಹಮ್ಮದ್ ಅಫ್‌ಝುಲ್ ಖಾನ್
    ಅಫ್ಘಾನ್ ಫಲ್ಟ್ಹಾಈ ಡೇರ ಗಾಝಿಖಾನ್
17. ದೌಲತ್ ಖಾತೂನ್,
    ಎಹ್ಲಿಯಾ ಅಖ್ವಿಂದ್ ಮುಹಮ್ಮದ್ ಅಫ್‌ಝುಲ್ ಖಾನ್
18. ಅಲ್ತಾಫ್ ಮುಹಮ್ಮದ್ ಖಾನ್
    ಪಿಸರ್ ಅಖ್ವಂದ್ ಮುಹಮ್ಮದ್ ಅಫ್ಝಲ್ ಖಾನ್
19. ಕುರೈಶಿ ಮುಖ್ತಾರ್ ಅಹ್ಮದ್
    ಸುಪ್ರಿಟೆಂಡೆಂಟ್ ಮುನ್ಸಿಪಲ್ ಎಜುಕೇಶನ್ ದೆಹಲಿ
20. ಮರಿಯಮ್ ಸಿದ್ದೀಖ
    ಎಹ್ಲಿಯ ಬಾಬು ಮುಹಮ್ಮದ್ ಶಫೀ ನೌ ಶಹರ್ ಸಿಯಾಲ್ಕೋಟ್ ಜಿಲ್ಲೆ
21. ಖಾಝಿ ಸಯ್ಯದ್ ಅಮೀರ್ ಹುಸೇನ್ ಖಾದಿಯಾನ್
22. ಮೌಲವಿ ಮಯಹಮ್ಮದ್ ಸೀದ್ ಹೈದರಬಾದ್ ದಕ್ಕನ್
23. ಮಿಸ್ತ್ರಿ ಶದಿ ಖಾನ್ ಖಾದಿಯಾನ್
24. ಮೌಲ್ವಿ ಮುಹಮ್ಮದ್ ಅಲಿ ಎಂ.ಎ, ಎಲ್.ಎಲ್.ಬಿ
25. ಶೇಖ್ ನಯಾಝ್ ಅಹ್ಮದ್ ತಾಜಿರ್, ವಝೀರಬಾದ್
26. ಮಿಸ್ತ್ರಿ ಅಬ್ದುಲ್ ಅಝೀಝ್ ಪಟ್ವಾರಿ ಖಾದಿಯಾನ್
27. ಹಾಜಿ ಸೇಠ್ ಅಬ್ದುರ್ರಹ್ಮಾನ್ ಸೌದಾಗರ್ ಮದ್ರಾಸ್.
28. ಸೇಠ್ ಅಲಿ ಮುಹಮ್ಮದ್ ಸೌದಾಗರ್ ಬೆಂಗಳೂರು
29. ಹಾಜಿ ಸೇಠ್ ಸಾಲೆಹ್ ಮುಹಮ್ಮದ್ ಸೌದಾಗರ್ ಮದ್ರಾಸ್.
30. ಸೇಠ್ ಅಹ್ಮದ್ ಸೌದಾಗರ್ ನದ್ರಾಸ್
31. ಸೇಠ್ ವಾಲ್ಜಿ ಲಾಲ್ಜಿ ಸೌದಾಗರ್ ಮದ್ರಾಸ್
32. ಮೌಲವಿ ಝುಹೂರ್ ಅಲಿ ವಕೀಲ್ ಹೈದರಾಬಾದ್
33. ಮೀರ್ ಹಾಮಿದ್ ಶಾಹ್ ಸಿಯಾಲ್ಕೋಟ್
34. ನವಾಬ್ ಸಯ್ಯದ್ ರಿಝ್ವಿ ಬಂಬೈ
35. ಮುಫ್ತಿ ಮುಹಮ್ಮದ್ ಸಾದಿಖ್ ಖಾದಿಯಾನ್
36. ಮಿಸ್ತರಿ ಅಹ್ಮದ್ ದೀನ್ ಭೇರ
37. ಡಾ॥ ಖಲೀಫ ರಶಿದುದ್ದೀನ್ ಖಾದಿಯಾನ್
38. ಖಲೀಫ ನೂರುದ್ದೀನ್ ಜಮ್ಮೂ
39. ಹಾಫಿಝ್ ಮುಹಮ್ಮದ್ ಇಸ್ಹಾಖ್ ಹೈದರಬಾದ್
40. ಸಯ್ಯದ್ ನಾಸಿರ್ ಶಹ್ ಖದಿಯಾನ್
41. ಸಯ್ಯದ್ ಫಝುಲ್ ಶಾಹ್ ಖಾದಿಯಾನ್.
42. ಸಯ್ಯದ್ ಗುಲಾಮ್ ಗೌಸ್ ಖಾದಿಯಾನ್.
43. ಡಾ॥ ರಹ್ಮತ್ ಅಲಿ ಆಫ್ರಿಕ
44. ಬಾಬು ಮುಹಮ್ಮದ್ ಅಫ್‌ಝುಲ್ ಎಡಿಟರ್ ಅಖ್ಬಾರ್ ಬದರ್
45. ಡಾ॥ ಮುಹಮ್ಮದ್ ಇಸ್ಮಾಈಲ್ ಖಾನ್ ಗಡ್ಯಾನಿ
46. ಪೀರ್ ಬರ್ಕತ್ ಅಲಿ ರನ್ಮಲ್
47. ಶೇಖ್ ನಬಿ ಸೇಠಿ ಖಾದಿಯಾನ್
48. ಮೌಲವಿ ಶೇರ್ ಅಲಿ ಬಿ.ಎ. ಖಾದಿಯಾನ್
49. ಮೌಲವಿ ಅಬ್ದುಲ್ಲಾ ಸನ್ನೊರಿ
50. ಮಿಯಾಂ ರಹ್ಮತುಲ್ಲಹ್ ಸನ್ನೋರಿ
51. ಮಿಯಾಂ ಅಬ್ದುರ್ರಹೀಮ್ ಸನ್ನೋರಿ
52. ಮಿಯಾಂ ಹಬೀಬುಲ್ಲಾಹ್ ಸನ್ನೋರಿ
53. ಸೂಫಿ ಅಬ್ದುಲ್ ಖದೀರ್ ಬಿ.ಎ ಸನ್ನೋರಿ
54. ಮಾಸ್ಟರ್ ಖದಿರ್ ಬಖ್ಶ್ ಲುಧಿಯಾನ
55. ಮೌಲವಿ ಅಬ್ದುರ್ರಹೀಮ್ ದರ್ದ್ ಎಂ.ಎ ಖಾದಿಯಾನ್
56. ಬಾಬು ಗುಲಾಬ್ ಖಾನ್ ಪೆನ್‌ಶನರ್ ಸಿಯಾಲ್ಕೋಟ್
57. ಮಿಯಾಂ ಮುಹಮ್ಮದ್ ದೀನ್ ಜಿಲ್ದ್‌ಸಾಝ್ ಸಿಯಾಲ್ಕೋಟ್
58. ಮಾಸ್ಟರ್ ಖಮರುದ್ದೀನ್ ಲುಧಿಯಾನ
59. ಮೌಲವಿ ಅಬ್ದುಲ್ ಖಾದಿರ್ ಮನ್ಸೂರಾ ಲುಧಿಯಾನ ಜಿಲ್ಲ
60. ಮುನ್‌ಶಿ ಮುಹಮ್ಮದ್ ಅಕ್ಬರ್ ಠೆಕೆದಾರ್ ಬಟಾಲ
61. ಹಕೀಮ್ ಮುಹಮ್ಮದ್ ಹುಸೈನ್ ಖುರೈಶಿ ಲಾಹೋರ್
62. ಮುನ್‌ಶಿ ಮುಹಮ್ಮದ್ ಜಾನ ಔಜಲ
63. ಚೌಧರಿ ಹಾಕಿಮ್ ಅಲಿ ಖಾದಿಯಾನ್
64. ಮಿಯಾಂ ಮುಹಮ್ಮದ್ ಸಿದ್ದೀಖ್ ಸೇಖ್ವಾನ
65. ಮಿಯಾಂ ಇಮಾಮುದ್ದೀನ್ ಸೇಖ್ವಾನಿ
66. ಮಿಯಾಂ ಜಮಾಲುದ್ದೀನ್ ಸೇಖ್ವಾನಿ
67. ಮೌಲವಿ ಇಮಾಮ್ ಶಾಹ್‌ಜಹಾಂಪೂರಿ

68. ಮಿಯಾಂ ಖೈರುದ್ದೀನ್ ಸೇಖ್ವಾನಿ
69. ಸೂಫಿ ನಬಿ ಬಖ್ಶ್ ಕ್ಲರ್ಕ್ ಮಮ್‌ಬಾಸ
70. ಶೇಖ್ ಅಬ್ದುರ್ರಹ್ಮಾನ್ ಕ್ಲರ್ಕ್ ಮಮ್ಬಾಸ
71. ಶೇಖ್ ಮುಹಮ್ಮದ್ ಕರಮ್ ಇಲಾಹಿ ವಕೀಲ್ ಪಟ್ಯಾಲ
72. ಬಾಬು ರೌಶನ್ ದೀನ್ ಪೆನ್‌ಶೆನರ್ ಸಿಯಾಲ್ಕೋಟ್
73. ಬಾಬು ಶಾಹ್‌ದೀನ್ ಸ್ಟೇಶನ್ ಮಾಸ್ಟರ್ ಡೋಮೇಲಿ
74. ಹಾಜಿ ಮುಲ್ಲಾಂ ಇಮಾಮ್ ಬಖ್‌ಶ್
75. ಸೇಠ್ ಮೂಸ ಬಿನ್ ಉಸ್ಮಾನ್ ಜಾಮ್‌ನಗರ್
76. ಡಾ॥ ರಾಮಾನಂದ್ ಗಢ್ವಾಲ್ ಜಿಲ್ಲೆ
77. ಶೇಖ್ ಯಾಖೂಬ್ ಅಲಿ ಎಡಿಟರ್ ಅಖ್ಬಾರ್ ಅಲ್‌ಹಕಮ್ ಖಾದಿಯಾನ್
78. ಎಹ್ಲಿಯ ಶೇಖ್ ಯಾಖೂಬ್ ಅಲಿ
79. ಮಹ್ಮೂದ ದುಖ್ತರ್ ಶೇಖ್ ಯಾಖೂಬ್ ಅಲಿ
80. ಶೇಖ್ ಗುಲಾಮ್ ಗೌಸ್ ಬಿರಾದರ್ ಶೇಖ್ ಯಾಖೂಬ್ ಅಲಿ
81. ಹಾಜಿ ಗುಲಾಮ್ ಅಹ್ಮದ್ ಕರ್‍ಯಾಮ್
82. ಮುನ್ಶಿ ಹಬೀಬುರ್ರಹ್ಮಾನ್ ಹಾಜಿಪುರಃ
83. ಖಾರಿ ಮೀರ್ ಹಸನ್ ಅಲಿ ಪೂರ್ ಮುಲ್ತಾನ್
84. ಮೌಲ್ವಿ ಉಮರುದ್ದೀನ್ ಸರೀಹ್
85. ಎಹ್ಲಿಯ ಉಮರುದ್ದೀನ್ ಸರೀಹ್
86. ಬಾಬು ಜಮಾಲುದ್ದೀನ್ ಗುಜ್ರಾಂವಾಲ
87. ಮೌಲವಿ ಅಹ್ಮದ್ ಶೇರ್ ಖಾನ್ ಹೈದ್ರಬಾದ್ ದಕ್ಕನ್
88. ಸೇಠ್ ಶೇಖ್ ಹಸನ್ ಯಾದಗಿರಿ
89. ಮುನ್‌ಶಿ ನಾದಿರ್ ಖಾನ್ ಸರ್‌ಕಾಲಿ ಜೆಹೆಲಮ್ ಜಿಲ್ಲೆ
90. ನಾದಿರ್ ಖಾನ್ ಸರ್‌ಕಲಿ ಜೆಹೆಲಮ್
91. ಮಿರ್ಝಾ ಮುಹಮ್ಮದ್ ಸಾದಿಖ್ ಲಾಹೋರ್
92. ಹಕೀಮ್ ಫಝುಲ್‌ದೀನ್ ಭೈರವಿ ಖಾದಿಯಾನ್
93. ಮುನ್‌ಶಿ ರುಸ್ತಮ್ ಅಲಿ ಕೋರ್ಟ್ ಇನ್ಸ್‌ಪೆಕ್ಟರ್
94. ಮಿಯಾಂ ನಬಿ ಬಖ್ಶ್ ಸೌದಾಗರ್ ಪಶ್ಮೀನ ಅಮೃತ್ಸರ್
95. ಮಿಯಾಂ ಚಿರಾಗ್ ದೀನ್ ಲಹೋರ್
96. ಮೌಲವಿ ಗುಲಾಮ್ ಹುಸೈನ್ ಪೇಶಾವರಿ
97. ಶೇಖ್ ರಹಮತುಲ್ಲಾಹ್ ತಾಜಿರ್ ಲಾಹೋರ್
98. ಶೇಖ್ ಅಬ್ದುರ್ರಹ್ಮಾನ್ ಪೆನ್‌ಶನರಿ ಎ.ಸಿ. ಲಾಹೋರ್
99. ಮಾಸ್ಟರ್ ಗುಲಾಮ್ ಮುಹಮ್ಮದ್ ಬಿ.ಎ. ಸಿಯಾಲ್ಕೋಟ್
100. ಶೇಖ್ ಫಝುಲ್ ಹಖ್ ಬಟಾಲ
101. ಶೇಖ್ ಮೌಲ ಬಖ್ಶ್ ಬೂಟ್ ಮರ್ಚೆಂಟ್ ಸಿಯಾಲ್ಕೋಟ್
102. ಮುನ್‌ಶಿ ಅಲ್ಲಾಹ್ ದತ್ತ ಮೆನೆಜರ್ ಸಿಯಾಲ್ಕೋಟ್
103. ಶೇಖ್ ಗುಲಾಮ್ ಹೈದರ್ ಟೆಪ್ಟಿ ಇನ್ಸ್‌ಪೆಕ್ಟರ್ ಪೋಲೀಸ್ ಸಿಯಾಲ್ಕೋಟ್
104. ಮೌಲವಿ ಅಝೀಝ್ ಬಖ್ಶ್ ಬಿ.ಎ
105. ಮಾಸ್ಟರ್ ಮುಹಮ್ಮದ್ ಇಸ್ಮಾಈಲ್ ಟೈಲರ್ ಮಾಸ್ಟರ್ ಸಿಯಾಲ್ಕೋಟ್
106. ಶೇಖ್ ಮುಹಮ್ಮದ್ ಜಾನ್ ಸೌದಾಗರ್ ಮಝೀರಬಾದ್
107. ಹಕೀಮ್ ಇಝ್ಝ್ ಖುದಾ ಬಖ್ಶ್ ಲಾಹೋರ್
108. ಮುನ್ಶಿ ಮೆಹೆರ್ ದೀನ್ ಪಟ್ವಾರಿ ಕೋಹ್ಲಿಯಾಂ ಶುಕರ್‌ಗಡ್
109. ಮುನ್ಶಿ ಖಸಿಮ್ ಲಾಲ ಮೂಸ
110. ಹಾಜಿ ಮುಫ್ತಿ ಗುಲ್‌ಝಾರ್ ಮುಹಮ್ಮದ್ ಬಟಾಲ
111. ಮಿರ್ಝಾ ಹುಸೈನ್ ಬೇಗ್ ಖರ್ಕ ಜಿಲ್ಲೆ ಗುಜ್ರಾತ್
112. ಸೂಫಿ ಮುಹಮ್ಮದ್ ಯಾಖೂಬ್ ನಮ್ಬರ್‌ದಾರ್ ಕೇಢಿ ಅಫ್‌ಗಾನ
113. ಬಾಬು ಫಖ್ರುದ್ದೀನ್ ಕ್ಲರ್ಕ್ ಜೀ ಸಪ್ಲೈ ಡಿಪೋ
114. ಡಾ॥ ಅತಾವುಲ್ಲಾಹ್ ಖಾನ್ ಧರಮ್ ಕೋಟ್ ಭಗ್ಗ
115. ಬಾಬು ನಿಝಾಮುದ್ದೀನ್ ಮಾಹಿಲ್ಪೂರ್
116. ಮಾಸ್ಟರ್ ಅಬ್ದುಲ್ ಅಝೀಝ್ ಟೇಲರ್ ಮಾಸ್ಟರ್ ಸಿಯಾಲ್ಕೋಟ್
117. ಬಾಬು ಮುಹಮ್ಮದ್ ವಝೀರ್ ಖಾನ್ ಖಾದಿಯಾನ್
118. ಮೌಲವಿ ಖುದ್ರತುಲ್ಲಾಹ್ ಸನ್ನೋರಿ
119. ಮಿಯಾಂ ಅಲ್ಲಾಹ್ ದೀನ್ ಟೇಕ್ರಿಯಾಂ ಜಿಲ್ಲ ರಾವಲ್ಪಿಂಡಿ
120. ರಾಜ ಅಲಿ ಮುಹಮ್ಮದ್ ಇ.ಎ.ಸಿ. ಚಹೂನಬಿ ಜಿಲ್ಲ ಜೇಲಮ್
121. ಖಾನ್ ಬಹದ್ದೂರ್ ಶೇಖ್ ಮುಹಮ್ಮದ್ ಹುಸೈನ್ ಪೆನ್ಶನರಿ ಜಜ್ ಅಲಿಗಡ್
122. ಡಾ॥ ಸಯ್ಯದ್ ವಿಲಾಯತ್ ಶಾಹ್ ಆಫ್ರೀಕ ಖಾದಿಐಆನ್
123. ಮುನ್‌ಶಿ ಗೌಹರ್ ಅಲಿ ಕೋಟ್ಲ ಅಫ್‌ಗಾನ
124. ಶೇಖ್ ಮುಶ್ತಾಖ್ ಹುಸೈನ್ ಗುಜ್ರಾಂವಾಲ
125. ಖಾನ್ ಸಾಹಿಬ್ ಮುನ್ಶಿ ಫರ್‌ಝುಂದ್ ಅಲಿ ಖಾದಿಯಾನ್
126. ಖದೀಜ ಬೇಗಮ್ ಎಹ್ಲಿಯ ಮುನ್ಶಿ ಫರ್‌ಝುಂದ್ ಅಲಿ ಖಾದಿಯಾನ್
127. ಅಮತುಲ್ಲಹ್ ಬೇಗಮ್ ಎಹ್ಲಿಯ ಮುನ್‌ಶಿ ಫರ್‌ಝುಂದ್ ಅಲಿ ಖಾದಿಯಾನ್
128. ಡಾ॥ ಸಯ್ಯದ್ ಅಬ್ದುಸ್ಸತ್ತಾರ್ ಶಾಹ್ ಖಾದಿಯಾನ್
129. ಸಯ್ಯದಹ್ ಸೀದತುನ್ನಿಸಾ, ಎಹ್ಲಿಯ ಅಬ್ದುಸ್ಸತ್ತಾರ್ ಶಾಹ್ ಖಾದಿಯಾನ್
130. ಡಾ॥ ಹಶ್ಮತುಲ್ಲಾಹ್ ಖಾದಿಯಾನ್
131. ಖಾನ್ ಸಾಹಿಬ್ ಮುನ್ಶಿ ಬರ್ಕತ್ ಅಲಿ ಶಿಮ್ಲ
132. ಮೌಲವಿ ಅಬ್ದುರ್ರಹೀಮ್ ನಯ್ಯರ್ ಖಾದಿಯಾನ್
133. ಜಮಾಅತ್ ಅಹ್ಮದಿಯಾ ಲೇಗೂಸ್ ಖಾದಿಯಾನ್
134. ಮೌಲವಿ ಆಲಮ್‌ಗೀರ್ ಖಾನ್ ಗಮ್ಬಟ್ ಸಿಂಧ್
135. ಮಿಸ್ತ್ರಿ ಅಲಿ ಬಖ್ಶ್ ಫರೀದ್ ಕೋಟ್
136. ಎಹ್ಲಿಯ ಮಿಸ್ತ್ರಿ ಅಲಿ ಬಖ್‌ಶ್ ಫರೀದ್ಕೋಟ್
137. ಡಾ॥ ಜಮಾದಾರ್ ಅಬ್ದುಲ್ ಕರೀಮ್ ಗುಜರ್‌ವಾಲ್, ಲುಧಿಯಾನ
138. ಶೇಖ್ ಅಲಿ ಝಫರ್
139. ಮುನ್ಶಿ ಮುಹಮ್ಮದ್ ದೀನ್ ಖಾರಿಯಾಂ
140. ಮಿಯಾಂ ಗುಲಾಮ್ ನಬಿ ಮಾಹಿಲ್ಪೂರ್
141. ಶೇಖ್ ಫಝುಲ್ ಅಹ್ಮದ್ ಬಟಾಲ
142. ಎಹ್ಲಿಯ ಶೇಖ್ ಫಝುಲ್ ಅಹ್ಮದ್ ಬಟಾಲ
143. ಡಾ॥ ಸಯ್ಯದ್ ಮುಹಮ್ಮದ್ ಹುಸೈನ್ ಶಾಹ್ ಧರಮ್‌ಕೋಟ್ ರಂಧಾವ
144. ಬಚ್ಚಾನ್ ಡಾ॥ ಸಯ್ಯದ್ ಮುಹಮ್ಮದ್ ಹುಸೈನ್ ಶಾಹ್
145. ಡಾ॥ ಫಝುಲ್‌ದೀನ್, ವೆಟರ್‌ನರಿ ಅಸಿಸ್ಟೆಂಟ್ ಖಾದಿಯಾನ್
146. ಎಹ್ಲಿಯ ಡಾ॥ ಫಝುಲ್‌ದೀನ್, ವೆಟರ್‌ನರಿ ಅಸಿಸ್ಟೆಂಟ್ ಖಾದಿಯಾನ್
147. ಬಚ್ಚಾನ್ ಡಾ॥ ಫಝುಲ್‌ದೀನ್, ವೆಟರ್‌ನರಿ ಅಸಿಸ್ಟೆಂಟ್ ಖಾದಿಯಾನ್
148. ಶೇಖ್ ಅಹ್ಮದುಲ್ಲಾಹ್ ನೌಶೇಜ್ರ ಚಹಾವನಿ
149. ಖಾಝೀ ಅಬ್ದುಲ್ಲಾ ಬಿ.ಎ ಖಾದಿಯಾನ್
150. ಸೂಫಿ ಮುಹಮ್ಮದ್ ಅಲಿ ಜಂಜೂಅ ಜಲಾಲ್ ಪೂರ್ ಜಟ್ಟಾನ್
151. ಬಾಬು ಮುಹಮ್ಮದ್ ಅಬ್ದುಲ್ಲಾ ಕ್ಲರ್ಕ್ ಫೇರೋಝ್ಪೂರ್
152. ಡಾ॥ ಫಝುಲ್ ಕರೀಂ ಖಾದಿಯಾನ್
153. ಸೇಠ್ ಅಬ್ದುಲ್ಲಾ ಭಾಇ ಸಿಕಂದರ್‌ಆಬಾದ್
154. ಎಹ್ಲಿಯಾ ಸೇಠ್ ಅಬ್ದುಲ್ಲಾ ಭಾಇ ಸಿಕಂದರ್‌ಆಬಾದ್
155. ಸೇಠ್ ಅಲಾಉದ್ದೀನ್ ಸಿಕಂದ್ರಬಾದ್
156. ಬಾಬು ಮುಹಮ್ಮದ್ ಶಫೀ ಸಬ್ ಓವರ್‌ಸರ್ ಖಾದಿಯಾನ್
157. ಮಾಸ್ಟರ್ ಮುಹಮ್ಮದ್ ದೀನ್ ಬಿ.ಎ. ಹೆಡ್‌ಮಾಸ್ಟರ್ ಖಾದಿಯಾನ್
158. ಬಚ್ಚಾನ್ ಮಾಸ್ಟರ್ ಮುಹಮ್ಮದ್ ದೀನ್ ಬಿ.ಎ. ಹೆಡ್‌ಮಾಸ್ಟರ್ ಖಾದಿಯಾನ್
159. ಹಾಫಿಝ್ ಸಯ್ಯದ್ ಅಬ್ದುಲ್ ವಹೀದ್ ತಾಜಿರ್ ಮನ್ಸೂರ್
160. ಹಾಫಿಝ್ ಸಯ್ಯದ್ ಅಬ್ದುಲ್ ಮಜೀದ್ ತಾಜಿರ್ ಮನ್ಸೂರಿ
161. ಬಾಬು ಎಜಾಝ್ ಹುಸೈನ್ ದೆಹಲಿ
162. ಶೇಖ್ ಅಬ್ದುರ್ರಹ್ಮಾನ್ ಖಾದಿಯಾನಿ
163. ಸೂಬೆದಾರ್ ಗುಲಾಮ್ ಹುಸೈನ್ ಚಕ್ ನಂಬರ್ 181 ಪಾಕ್ಪಟನ್
164. ಮಾಸ್ಟರ್ ಮುಹಮ್ಮದ್ ತುಫೀಲ್ ಖಾದಿಯಾನ್
165. ಡಾ॥ ಶಾಹ್ನವಾಝ್ ಸಿಯಾಲ್ಕೋಟ್
166. ಪೀರ್ ಮನ್‌ಝೂರ್ ಮುಹಮ್ಮದ್ ಖಾದಿಯನ್
167. ಮುನ್ಶಿ ಗುಲ್ ಮುಹಮ್ಮದ್ ಮಿಸಲ್‌ಖ್ವಾಂ ತಲ್ಲ ಗಂಗ್ ಕೇಂಬಲ್ಪೂರ್ ಜಿಲ್ಲೆ
168. ಶೇಖ್ ನಯಾಝ್ ಮುಹಮ್ಮದ್ ಸಬ ಇನ್ಸಪೆಕ್ಟರ್ ಪೋಲೀಸ್ ಗುಜ್ರಾಂವಾಲ
169. ಶೇಖ್ ಗುಲಾಮ್ ಹುಸೈನ್ ಲುಧಿಯಾನ್ವಿ
170. ಸೇಠ್ ಅಲಿ ಮುಹಮ್ಮದ್ ಎಂ.ಎ ಸಿಕಂದ್ರಬಾದ್
171. ಫಾತಿಮ ಬೇಗಮ್ ಸುಪುತ್ರಿ ಸೇಠ್ ಅಬ್ದುಲ್ಲಾ ಭಾಇ ಸಿಕಂದ್ರಬಾದ್
172. ಬಾಬು ಫಝುಲ್‌ದೀನ್ ಸಬ್ ಒವರ್‌ಸೀರ್ ಮರ್‌ದಾನ್
173. ಸೇಠ್ ಇಸ್ಮಾಈಲ್ ಆದಮ್ ಬಂಬೈ
174. ಡಾ॥ ಗುಲಾಮ್ ಮುಸ್ತಫ ಖಾರಿಯಾಂ
175. ಸಯ್ಯದ್ ಗುಲಾಮ್ ಹುಸೈನ್ ಡೆಪ್ಟಿ ಸುಪರಿಂಟೆಂಡೆಂಟ್ ವೆಟರ್‌ನರಿ ಡಿಪಾರ್ಟ್ಮೆಂಟ್
176. ಸಯ್ಯದಃ ಜಮೀಲ ಖಾತೂನ್, ಬಿನ್ತ್ ಸಯ್ಯದ್ ಅಹ್ಮದ್ ಹಸನ್ ಮುಝಫ್ಫರ್ ನಗರ್

177. ಮಾಸ್ಟರ್ ಮುಹಮ್ಮದ್ ಇಬ್ರಾಹೀಮ್ ಸೆಕ್ರೇಟರಿ ನನ್‌ಕಾನ ಸಾಹಿಬ್
178. ಮಿಯಂ ಮುಹಮ್ಮದ್ ಶರೀಫ್ ಇ.ಎ.ಸಿ ಲಾಹೋರ್
179. ಅಮತುರ್ರಹ್ಮನ್ ಬಿನ್ತ್ ಖಾಝಿ ಝಿಯಾ ಉದ್ದೀನ್ ಭೈರ
180. ಖಾನ್ ಬಹಾದ್ದೂರ್ ಚೌಧರಿ ಮುಹಮ್ಮದ್ ದೀನ್ ರಿಟೈರ್‌ಡ್ ಡೆಪ್ಟಿ ಕಮಿಶ್ನರ್
181. ಮಲಕ್ ಮೌಲಾ ಬಖ್ಶ್ ಅಮೃತ್ಸರಿ
182. ಬಬು ಸಿರಾಜುದ್ದೀನ್ ಸ್ಟೇಶನ್ ಮಾಸ್ಟರ್
183. ಖುರೈಶಿ ಮುಹಮ್ಮದ್ ಉಸ್ಮಾನ್ ಇಂಜಿನಿಯರ್ ಕರ್‌ನಾಲ್
184. ಮಿರ್ಝ ಬರ್‌ಕತ್ ಅಲಿ ಆಬಾದಾಂ
185. ಅಮತುರ್ರಹೀಮ್ ಖಾನಂ ಎಹ್ಲಿಯ ಮಿರ್ಝ ಬರ್‌ಕತ್ ಅಲಿ
186. ಇಬ್ರಾಹೀಂ ಯೂಸುಫ್ ಬರ್‌ದಾಲಿ
187. ಬಾಬು ಅಬ್ದುರ್ರಹ್ಮನ್ ಅಂಬಾಲಿ
188. ಹಾಜಿ ಮಿಯಾಂಬಖ್‌ಶ್ ಅಂಬಾಲ
189. ಮಿಯಾಂ ಖುದಾ ಬಖ್ಶ್ ಹಾಂಡೊ
190. ಚೌಧರಿ ಸಾದಿಖ್ ಅಲಿ ತಹಶೀಲ್‌ದಾರ್ ಬಹಾವಲ್‌ಪೂರ್ ಗುಜ್ರಾತ್ ಜಿಲ್ಲೆ
191. ಹಕೀಮ್ ಫಝ್ಲುರ್ರಹ್ಮಾನ್ ಮುಬಲ್ಲಿಗ್ ಆಫ್ರೀಕ
192. ಡಾ॥ ಮಲಕ್ ಮುಹಮ್ಮದ್ ರಮಝಾನ್ ಸ್ರೀಗೋಬೊಂದ್‌ಪುರ
193. ಚೌಧರಿ ಮುಹಮ್ಮದ್ ಇಸ್ಮಾಈಲ್ ಇ.ಎ.ಸಿ. ಖೇವೊ ಭಾಜ್ವ ಸಿಯಾಲ್ಕೋಟ್ ಜಿಲ್ಲೆ
194. ಈ ಮಲಕ್ ಮುಝಫ್ಫರ್‌ಪುರ್
195. ಬಾಬು ಅಲಿ ಹುಸೈನ್ ಸನ್ನೋರಿ, ಹೇಡ್ ಡ್ರಾಫ್ಟ್‌ಮೆನ್
196. ಫಹ್ಮೀದ ಬೇಗಮ್ ಬಿನ್ತ್ ಮದದ್ ಅಲಿ ಶಾಹ್‌ಜಹಾನ್ಪುರ್
197. ಎಹ್ಲಿಯ ಚೌಧರಿ ಮುಬಾರಕ್ ಅಹ್ಮದ್ ಕೋಹಾಟ್
198. ಚೌಧರಿ ಫತಹ್ ಮುಹಮ್ಮದ್ ಸಿಯಾಲ್ ಎಂ.ಎ ಖಾದಿಯಾನ್
199. ಡಾ॥ ಬದ್ರುದ್ದೀನ್ ಅಹ್ಮದ್ ಆಫ್ರೀಕ
200. ಮೌಲವಿ ಅಬ್ದುಲ್‌ಗಫೂರ್ ಮೌಲ್ವಿ ಫಾಝಿಲ್ ಖಾದಿಯಾನ್
201. ಫಾತಿಮತುಝ್ಝೊಹ್ರ ಎಹ್ಲಿಯ ಮೌಲವಿ ಅಬ್ದುಲ್‌ಗಫೂರ್ ಮೌಲ್ವಿ ಫಾಝಿಲ್ ಖಾದಿಯಾನ್
202. ಸರ್‌ದಾರ್ ಮುಹಮ್ಮದ್ ಅಲಿ ಜೋಡಕರ್‌ನನ
203. ಪ್ರೊಫೇಸರ್ ಅಬ್ದುಲ್ಲತೀಫ್ಪಟಾಗಾಂಗ್
204. ಸಯ್ಯದ್ ಮುಹಮ್ಮದ್ ಪತೀಫ್ ಚಕ್ ಖಾಝಿಯಾಂ ಗುರ್‌ದಸ್ಪೂರ್ ಜಿಲ್ಲೆ
205. ರಸೂಲ್ ಬಿಬಿ ತಲ್ವಂಡಿ ಮೂಸ
206. ಸಯ್ಯದ್ ಅಬ್ದುಲ್ ಹಲೀಮ್ ಕಟ್ಕಿ
207. ಬಾಬು ವಝೀರ್ ಮುಹಮ್ಮದ್ ಲಾಹೋರ್
208. ಮೌಲವಿ ಫಝ್ಲುದ್ದೀನ್ ವಕೀಲ್ ಖಾದಿಯಾನ್
209. ಚೌಧರಿ ನೂರ್ ಅಹ್ಮದ್ ಖಾನ್ ಮುಹರ್ರರ್ ಖಾದಿಯಾನ್
210. ಶೇಖ್ ಅಬ್ದುಲ್ ಹಮೀದ್ ಶಿಮ್ಲ
211. ಝೈನಬ್ ಬಿಬಿ ಎಹ್ಲಿಯ ಭಾಈ ಮಹ್ಮೂದ್ ಅಹ್ಮದ್ ಖಾದಿಯಾನ್
212. ಮೌಲವಿ ಅಬ್ದುಲ್ ಗನೀ ಖಾನ್
213. ಗುಲಾಮ್ ಮುಹಮ್ಮದ್ ವಲ್ದ್ ಮಿಯಾಂ ಮುರಾದ್ ಬಖ್ಶ್ ರಾಜ್ಪೂತ್ ಸಯ್ಯದ್‌ವಾಲ ಶೇಖುಪುರ
214. ಸೂಬೇದಾರ್ ಮುಹಮ್ಮದ್ ಅಬ್ದುಲ್ಲ ಇಂಡಿಯನದ ಆರ್ಮಿ ಖಾದಿಯಾನ್
215. ಸಯ್ಯದ್ ಝೈನುಲ್ ಆಬಿದೀನ್ ವಲಿವುಲ್ಲಾಹ್ ಶಾಹ್
216. ಮಿಯಾಂ ಮುಹಮ್ಮದ್ ಇಸ್ಮಾಈಲ್ ಚಕ್ ನಂಬರ್ 537 ಮಿಯಾಂ ನವಾಲಿ ಶೇಖುಪುರ
217. ಚೌಧರಿ ಸುಲ್ತಾನ್ ಅಲಿ ಮಂಘೋವಾಲ್ ಗುಜ್ರಾತ್ ಜಿಲ್ಲೆ
218. ಮೌಲವಿ ಅಬ್ದುಲ್ ಕರೀಮ್ ತಹಾಲ್ ಗುಜ್ರಾತ್ ಜಿಲ್ಲೆ
219. ಹಾಫಿಝ್ ಸಯ್ಯದ್ ಅಬ್ದುಲ್ ಹಮೀದ್ ಮನ್ಸೂರಿ
220. ಮುಹಮ್ಮದ್ ಮದದ್ ಅಲಿ ಇನ್ಸಪೆಕ್ಟರ್ ಆಫ್ ವರ್ಕ್‌ಸ್ ರೈಲ್ವೆ ಖಾನ್ಪೂರ್ ಬಹಾವಲ್ಪುರ
221. ಮೌಲವಿ ಮುಹಮ್ಮದ್ ಅಲಿ ಬದ್ದು ಮಲ್ಲವಿ ಖಾದಿಯಾನ್
222. ಚೌಧರಿ ಅಬ್ದುಲ್ ವಾಹಿದ್ ವೀರೂನಿ
223. ಮಾಸ್ಟರ್ ಅಬ್ದುಲ್ ಅಝೀಝ್ ಪೆನ್ಶನರ್ ನೌಶೇಹ್ರ, ಪಿಸ್ರೋ ಸಿಯಾಲ್ಕೋಟ್ ಜಿಲ್ಲೆ
224. ಫಾತಿಮ ಬಿಬಿ ಎಹ್ಲಿಯ ಮಾಸ್ಟರ್ ಅಬ್ದುಲ್ ಅಝೀಝ್ ಪೆನ್ಶನರ್ ನೌಶೇಹ್ರ, ಪಿಸ್ರೋ ಸಿಯಾಲ್ಕೋಟ್ ಜಿಲ್ಲೆ
225. ಅಖ್ತರ್ ಬೇಗಮ್ ಉರ್ಫ್ ಫರ್‌ಖುಂದಃ ಅಖ್ತರ್ ಬಿನ್ತ್ ಮಾಸ್ಟರ್ ಅಬ್ದುಲ್ ಅಝೀಝ್ ಪೆನ್ಶನರ್ ನೌಶೇಹ್ರ, ಪಿಸ್ರೋ ಸಿಯಾಲ್ಕೋಟ್ ಜಿಲ್ಲೆ
226. ಶೇಖ್ ಅಬ್ದುರ್ರಶೀದ್ ಸದರ್ ಬಾಜಾರ್ ಮೀರಠ್
227. ಡಾ॥ ಶೇರ್ ಮುಹಮ್ಮದ್ ಹಾಲಿ ಸಿಯಾಲ್ಕೋಟ್
228. ಶೇಖ್ ಅಬ್ದುಲ್ ಗನಿ ಗಡ್ಸ್ ಕ್ಲರ್ಕ್ ಪೇಶಾವರ್
229. ಡಾ॥ ಗುಲಾಮ್ ಅಲಿ ಸಬ್ ಅಸಿಸ್ಟೆಂಟ್ ಸರ್ಜನ್ ಚಹೂರ್ 117 ಶೇಖುಪುರ ಜಿಲ್ಲೆ
230. ಝೈನಬ್ ಬೇಗಮ್ ಎಹ್ಲಿಯ ಡಾ॥ ಗುಲಾಮ್ ಅಲಿ ಸಬ್ ಅಸಿಸ್ಟೆಂಟ್ ಸರ್ಜನ್ ಚಹೂರ್ 117 ಶೇಖುಪುರ ಜಿಲೆ
231. ಸರ್ದಾರ್ ಅಬ್ದುರ್ರಹ್ಮಾನ್ ಬಿ.ಎ.ನೌ ಮುಸ್ಲಿಮ್ ಖಾದಿಯಾನ್
232. ಗುಲಾಮ್ ಫಾತಿಮ ಎಹ್ಲಿಯ ಸರ್ದಾರ್ ಅಬ್ದುರ್ರಹ್ಮಾನ್ ಬಿ.ಎ.ನೌ ಮುಸ್ಲಿಮ್ ಖಾದಿಯಾನ್
233. ಅಝೀಝ್ ಬಿಬಿ ಎಹ್ಲಿಯ ಬಾಬು ಗುಲಾಮ್ ರಸೂಲ್ ಠೇಕೆದಾರ್ ಖಾದಿಯಾನ್
234. ಚೌಧರಿ ನಝೀರ್ ಅಹ್ಮದ್ ತಾಲಿಬ್‌ಪುರ್ ಭಂಗ್ವಾಂ ಜಿಲ್ಲೆ ಗುರ್‌ದಾಸ್ಪುರ್
235. ಮಾಸ್ಟರ್ ಮೌಲಾ ಬಖ್ಶ್ ಖಾದಿಯಾನ್
236. ರಹ್ಮತ್ ಬಿಬಿ ಎಹ್ಲಿಯ ಮಾಸ್ಟರ್ ಮೌಲಾ ಬಖ್ಶ್ ಖಾದಿಯಾನ್
237. ಚೌಧರಿ ಆಝಿಮ್ ಅಲಿ ಸಬ್ ಜಜ್ ಕರ್‌ತು ಜಿಲ್ಲ ಶೇಖುಪುರ
238. ಸೆಮತ್ ಬಿಬಿ ಎಹ್ಲಿಯ ಚೌಧರಿ ನೂರ್ ಅಹ್ಮದ್ ಖಾನ್ ಖಾದಿಯಾನ್
239. ಸಿರಾಜ್ ಬೇಗಮ್ ಎಹ್ಲಿಯ ಡಾ॥ ಬದ್ರುದ್ದೀನ್ ಖಾದಿಯಾನ್
240. ಸೂಫಿ ಕರಮ್ ಇಲಾಹಿ ಕಮ್ಪೂಝಿಟರ್ ವ ಶಿಮ್ಲ ಅಲಾಉದ್ದೀನ್ ಗೋರ್‌ಮೆಂಟ್ ಪ್ರೆಸ್ ಶಿಮ್ಲ
241. ಸೇಠ್ ಅಬೂಬಕ್ಕರ್ ಯೂಸುಫ್(ಜಿದ್ದಃ) ಖಾದಿಯಾನ್
242. ಸೇಠ್ ಮುಹಮ್ಮದ್ ಗೌಸ್ ಹೈದ್ರಬಾದ್ ದಕ್ಕನ್.
243. ಹಲೀಮ ಬೆಗಮ್ ಎಹ್ಲಿಯ ಸೇಠ್ ಮುಹಮ್ಮದ್ ಗೌಸ್ ಹೈದ್ರಬಾದ್ ದಕ್ಕನ್.
244. ಹಸೀನ್ ಬಿಬಿ ವಾಲಿದಃ ಆನರೇಬಲ್ ಸರ್ ಝಫ್ರುಲ್ಲಾಹ್ ಖಾನ್ ಡಸ್ಕ ಸಿಯಾಲ್ಕೋಟ್ ಜಿಲ್ಲೆ
245. ಹಕೀಮ್ ಮುಹಮ್ಮದ್ ಉಮರ್ ಖಾದಿಯಾನ್
246. ಬಾಬು ಮುಹಮ್ಮದ್ ಫಾಝಿಲ್ ಸಬ್ ಒವರ್‌ಸೀರ್ ಫೇರೋಝ್ಪುರ್
247. ಝೈನಬ್ ಬಿಬಿ ಎಹ್ಲಿಯ ಬಾಬು ಮುಹಮ್ಮದ್ ಫಾಝಿಲ್ ಸಬ್ ಒವರ್‌ಸೀರ್ ಫೇರೋಝ್ಪುರ್
248. ಚೌಧರಿ ಗುಲಾಮ್ ಅಹ್ಮದ್ ಖಾನ್ ರಾಜ್ಪೂತ್ ಸಡೋಅ ಹೋಶಿಯಾರ್ಪುರ್ ಜಿಲ್ಲೆ ಅಡ್ವೋಕೇಟ್ ಹೈಕೋರ್ಟ್ ಲಾಹೋರ್
249. ಮಲಕ್ ಇಮಾಮುದ್ದೀನ್ ವಲ್ದ್ ಮಲಕ್ ಗುಲಾಬುದ್ದೀನ್ ಸಕ್ನ ಸಂಬ್ರಿಯಾಲ್ ಸಿಯಾಲ್ಕೋಟ್ ಜಿಲ್ಲೆ
250. ಮಲಕ್ ಉಮರ್ ಅಲಿ ವಲ್ದ್ ಮಲಕ್ ರಹೀಮ್ ಬಖ್ಶ್ ಖೋಕರ್ ರೀಸ್ ಮುಲ್ತಾನ್
251. ಮಾಸ್ಟರ್ ಖೈರುದ್ದೀನದ ಸುಪ್ರಿಟೆಂಡೆಂಟ್ ಉರ್ದು ನಾರ್ಮಲ್ ಸ್ಕೂಲ್ ಅಮ್ರಾವತಿ ಬರಾರ್
252. ಮುಝಫ್ಫರ್ ಬೇಗ, ಬಿನ್ತ್ ಮಿರ್ಝ ಮುಹಮ್ಮದ್ ಅಶ್ರಫ್, ಮಾಜಿ ನಾಝಿಮ್ ಜಾಏದಾದ್ ಖಾದಿಯಾನ್
253. ಹಮೀದುನ್ನಿಸ ಖಾನಮ್ ಎಹ್ಲಿಯ ಚೌಧರಿ ಅಬುಲ್‌ಹಾಶಿಮ್ ಖಾನ್ ನಾಟೂರ್ ಜಿಲ್ಲೆ ರಾಜ್‌ಶಾಹಿ ಬಂಗಾಲ್
254. ಮಾಸ್ಟರ್ ಫಝುಲ್ ಕರೀಮ್ ಹೆಡ್ ಮಾಸ್ಟರ್ ರಾಮ್‌ಗಡ್ ಸರ್‌ದಾರಾಂ ಲುಧಿಯಾನ ಜಿಲ್ಲೆ
255. ಹಾಫಿಝ್ ಅಬ್ದುಲ್ ಅಲಿ ಬಿ.ಎ ವಲ್ದ್ ನಿಝಾಮುದ್ದೀನ್ ಸಕ್ನ ಶಾಹಪುರ್ ಜಿಲ್ಲೆ
256. ಅಬ್ದುರ್ರಹೀಮ್ ವಲ್ದ್ ಶೇಖ್ ಮೀರ್ ಮುಹಮ್ಮದ್ ನೌಶೇಹ್ರ ಸಿಯಾಲ್ಕೋಟ್ ಜಿಲ್ಲೆ
257. ಮುಹಮ್ಮದ್ ಇಸ್ಮಾಈಲ್ ಮುತಬರ್ ಇಬ್ನೆ ಗುಲಾಮ್ ಖಾದಿರ್ ಮಲ್ಯಾನಿ ಖಾದಿಯಾನ್
258. ಝೈನಬ್ ಬೇಗಮ್ ಎಹ್‌ಲಿಯ ಮಹಮೂದ್ ಹಸನ್ ಐ.ಸಿ.ಎಸ್ ಕ್ಲರ್ಕ್
259. ಸಯ್ಯದಃ ನುಸ್ರತ್ ಬಾನು ಎಹ್ಲಿಯ ಡಾ॥ ಅತರುದ್ದೀನ್ ಬಮ್‌ಬೈ
260. ಸರ್‌ದಾರ್ ಬೇಗಮ್ ನೌ ಮುಸ್ಲಿಮ ಪತ್ನಿ ಮಲಕ್ ಫಝುಲ್ ಹುಸೈನ್ ಧಾಮಾಂ ಗುಜ್ರಾತ್ ಜಿಲ್ಲೆ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

## ಹಝ್ರತ್ ಮಸೀಹ್ ಮೌಊದ್(ಅ) ರವರ ಪರವಾಗಿ ಸಾಹಿತ್ಯ ಮತ್ತು ಧಾರ್ಮಿಕ ಚರ್ಚೆಗಳ ನಡುವೆ ದೊರೆತ ವಿಶ್ವಾಸವರ್ಧಕ ಘಟನೆಗಳ ದೃಶ್ಯ.

*ತನ್ವೀರ್ ಅಹ್ಮದ್ ನಾಸಿರ್ ಉಪ ಸಂಪಾದಕರು **'ಬದರ್'**ವಾರಪತ್ರಿಕೆ ಖಾದಿಯಾನ್*

ಹಝ್ರತ್ ಮೌಲ್ವಿ ಅಬ್ದುಲ್ ಕರೀಮ್ ಸಿಯಾಲ್ಕೋಟಿ(ರ) ತನ್ನ ಗ್ರಂಥ "ಸೀರತ್ ಹಝ್ರತ್ ಮಸೀಹ್ ಮೌಊದ್" ನಲ್ಲಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್ ಅಲ್–ಮುಸ್ಲಿಹ್ ಮೌಊದ್(ರ) ರವರ ಬಾಲ್ಯದ ಒಂದು ಅದ್ಭುತಕರ ಘಟನೆ ಬರೆಯುತ್ತಾರೆ. ಮುಹಮ್ಮದ್ ಒಂದು ನಾಲ್ಕು ವರ್ಷದವರಾಗಿರಬಹುದು. (ಹಝ್ರತ್ ಮಸೀಹ್ ಮೌಊದ್ ರವರ ಅನಿಸಿಕೆ) ಮಾಮೂಲಿಯಂತೆ ಒಳಗೆ ಕುಳಿತುಕೊಂಡಿದ್ದರು. ಮಿಯಾ ಮಹ್‌ಮೂದ್ ಬೆಂಕಿಪೊಟ್ಟಣ ತೆಗೆದುಕೊಂಡು ಅಲ್ಲಿಗೆ ಬಂದರು. ಅವರ ಜೊತೆಯಲ್ಲಿ ಮಕ್ಕಳ ಒಂದು ಗುಂಪು ಸಹ ಇತ್ತು. ಮೊದಲು ಸ್ವಲ್ಪ ಸಮಯ ಆಟವಾಡುತ್ತ, ಜಗಳವಾಡುತ್ತ ಇದ್ದರು. ನಂತರ ಅವರ ಮನಸ್ಸಿನಲ್ಲಿ ಏನಾಯಿತೋ ಗೊತ್ತಿಲ್ಲ, ಆ ಗ್ರಂಥದ ಹಾಳೆಗಳಿಗೆ ಬೆಂಕಿ ಹಚ್ಚಿ. ಸಂತೋಷಪಡುತ್ತಿದ್ದರು ಮತ್ತು ಚಪ್ಪಾಳೆ ತಟ್ಟುತ್ತಿದ್ದರು. ಹಝ್ರತ್ ಸಾಹಿಬರು ಬರೆಯುವುದರಲ್ಲಿ ಮಗ್ನರಾಗಿದ್ದರು. ಏನಾಗುತ್ತಿದ್ದೆ ಎಂಬುದನ್ನು ತಲೆ ಎತ್ತಿಯೂ ನೋಡಲಿಲ್ಲ, ಅಷ್ಟರಲ್ಲಿ ಬೆಂಕಿ ಆರಿ ಹೋಯಿತು. ಮತ್ತು ಬೆಲೆಯುಳ್ಳ ಗ್ರಂಥದ ಕಾಗದಗಳು ಬೂದಿಯಾಗಿ ಬಿಟ್ಟಿದ್ದವು. ಮಕ್ಕಳ ಗುಂಪು ಇನ್ನೊಂದೆಡೆ ಹೋಯಿತು. ಹಝ್ರತ್ ಸಾಹಿಬರಿಗೆ ಅವಶ್ಯಕತೆ ಬಿದ್ದ ಕಾರಣ ಹಿಂದಿನ ಪುಟಗಳನ್ನು ನೋಡುವ ಅಗತ್ಯ ಉಂಟಾಯಿತು. ಆ ಗ್ರಂಥದ ಪುಟಗಳ ಬಗ್ಗೆ ಅವರನ್ನು ವಿಚಾರಿಸುತ್ತಾರೆ ಮೌನ, ಇವರನ್ನು ವಿಚಾರಿಸುತ್ತಾರೆ, ಮೌನ. ಕೊನೆಗೆ ಒಂದು ಮಗು ಹೇಳಿತು. ಮಿಯಾ ಮಹ್ಮೂದ್ ಎಲ್ಲ ಕಾಗದಗಳನ್ನು ಸುಟ್ಟು ಹಾಕಿದ್ದಾರೆ. ಮಹಿಳೆಯರು, ಮಕ್ಕಳು, ಮತ್ತು ಮನೆಯ ಎಲ್ಲ ಜನರು ಗಾಬರಿಗೊಂಡರು ಮತ್ತು ಯೋಚಿಸತೊಡಗಿದರು. ಈಗ ಏನಾಗಬಹುದು! ಆದರೆ ಹಝ್ರತ್ ಸಾಹಿಬರು ಮುಗುಳ್ನಗುತ್ತ ಹೇಳಿದರು. ಒಳ್ಳೆಯದಾಯಿತು. ಅದರಲ್ಲಿ ಅಲ್ಲಾಹನ ಏನಾದರೂ ಹಿಕಮತ್ ಇದ್ದಿರಬಹುದು. ಅಲ್ಲಾಹನು ಇದೀಗ ಅದಕ್ಕಿಂತ ಉತ್ತಮ ವಿಷಯ ಬರೆಸಬಹುದಾಗಿದೆ. ಏಕೆಂದರೆ ಅವನು ಎಲ್ಲವನ್ನು ಬಲ್ಲವಾಗಿದ್ದಾನೆ. (ಹಝ್ರತ್ ಮಸೀಹ್ ಮೌಊದ್(ಅ) ಪುಟ 23, ಮುದ್ರಣ ಕೆನೆಡ)

ಈ ಘಟನೆಯಿಂದ ಒಂದೆಡೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಅತ್ಯಂತ ಸುಂದರವಾದ ಕ್ಷಮಿಸುವ ಗುಣ ಬಹಿರಂಗಗೊಂಡರೆ ಅವರ ಮೇಲೆ ಅವತರಿಸುತ್ತಿರುವ ಜ್ಞಾನ ಭಂಡಾರ ಅಲ್ಲಾಹನು ಅವರಿಗೆ ಒಂದು ವಿಶೇಷ ಜಾಣ್ಮೆಯಿಂದ ದಯಪಾಲಿಸುತ್ತಿದ್ದನು ಎಂಬುದಾಗಿದೆ. ಅವರು ಆಗಮಿಸಿದ ಕಾಲದಲ್ಲಿ ಇಸ್ಲಾಮ್ ಧರ್ಮವು ನಾಲ್ಕೂ ಕಡೆಯಿಂದ ಇಸ್ಲಾಮ್ ವಿರೋಧಿಗಳ ಆರೋಪ ಪ್ರತ್ಯಾರೋಪಗಳಿಂದ ಸುತ್ತುವರಿದಿತ್ತು. ವಿಶೇಷವಾಗಿ ಕ್ರೈಸ್ತರಿಂದ ಮತ್ತು ಆರ್ಯ ಸಮಾಜದವರಿಂದ ಅತ್ಯಂತ ಅಶ್ಲೀಲ ಮತ್ತು ಪ್ರಚೋದನಾತ್ಮಕ ಬರಹಗಳು ಪ್ರಕಟವಾಗುತ್ತಿದ್ದವು.

ಈ ಪರಿಸ್ಥಿತಿಗಳನ್ನು ನೋಡಿ ಅವರ ಹೃದಯವು ನೀರಿನಿಂದ ಹೊರದಬ್ಬಲ್ಪಟ್ಟ ಮೀನಿನ ಹಾಗೆ ಸಂಕಟಪಡುತಿತ್ತು. ಅವರ ನೋವಿನ ಈ ಸಂಗತಿ ಅವರ ಈ ದುಆದಿಂದ ತಿಳಿಯಬಹುದಾಗಿದೆ. ಅವರು ಹೇಳುತ್ತಾರೆ. ಓ ನನ್ನ ಪ್ರಭುವೇ! ನನಗೆ ಇಂತಹ ಪದಗಳನ್ನು ನೀಡು ಎಂತಹ ಭಾಷಣಗಳನ್ನು ನನ್ನ ಹೃದಯದ ಮೇಲೆ ಅವತರಿಸು ಎಂದರೆ ಅವು ತನ್ನ ಪ್ರಕಾಶವನ್ನು ಅವರ ಹೃದಯಗಳ ಮೇಲೆ ಬೀರುವಂತಾಗಲಿ ಮತ್ತು ತನ್ನ ಅಮೃತ ಗುಣಗಳಿಂದ ಅವರ ವಿಶವು ದೂರವಾಗುವಂತಾಗಲಿ." (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ–6, ಪುಟ–398).

ಅಲ್ಲಾಹನು ಅವರ ಪ್ರಾರ್ಥನೆಗಳು ಸ್ವೀಕರಿಸಿದನು. ಅವರ ವ್ಯಾಕುಲತೆಯನ್ನು ಆಲಿಸಿದನು ಮತ್ತು ಇಸ್ಲಾಮ್ ವಿರೋದಿಗಳ ಆಕ್ಷೇಪಗಳನ್ನು ರದ್ದುಗೊಳಿಸಲು, ಅರಬಿ, ಫಾರ್ಸಿ ಮತ್ತು ಉರ್ದು ಭಾಷೆಗಳಲ್ಲಿ ಅವರಿಗೆ ಪಾಂಡಿತ್ಯವನ್ನು ದಯಪಾಲಿಸಿದನು. ಮತ್ತು ಎಂತಹ ಪ್ರೌಡಿಮೆ ದಯಪಾಲಿಸಿದನೆಂದರೆ ಎಂತಹುದೇ ವಿಷಯವಿರಲಿ. ಅವರು ಬಹು ಸುಲಭವಾಗಿ ಸೂಕ್ತ ಪುರಾವೆಗಳೊಂದಿಗೆ ಅತ್ಯುತ್ತಮ ಲೇಖದ ಬರೆಯುತ್ತಿದ್ದರು. ಅದು ಯಾವ ಭಾಷೆಯಲ್ಲಿ ಆದರೂ ಬರೆಯಲಿ. ಅತ್ಯಂತ ಸೂಕ್ತ ರೀತಿಯಲ್ಲಿ ಪದಗಳನ್ನು ಮುತ್ತಿನಂತೆ ಜೋಡಿಸಿದತಾಗುತ್ತಿತ್ತು. ಅವರು ಸಾಹಿತ್ಯದಲ್ಲಿ ಅಲ್ಲಾಹನ ಅಗೋಚರ ಪುಷ್ಠಿಯ ಕುರಿತು ಹೇಳುತ್ತಾರೆ:

"ನಾನು ಸಾಹಿತ್ಯದಲ್ಲೂ ಅಲ್ಲಾಹನ ವಿಶೇಷ ರೀತಿಯ ಸಹಕಾರ ಪುಷ್ಟಿ ತಡೆಯುವುದನ್ನೂ ಕಾಣುತ್ತಿದ್ದೇನೆ. ಏಕೆಂದರೆ ನಾನು ಅರಬಿ ಅಥವಾ ಉರ್ದುವಿನಲ್ಲಿ ಯಾವುದೇ ಬರಹ ಬರೆಯುವಾಗ ಆಂತರಿಕವಾಗಿ ಒಂದು ಶಕ್ತಿ ನನಗೆ ಶಿಕ್ಷಣ ನೀಡುವಂತೆ ಅನುಭವಿಸುತ್ತಿದ್ದೇನೆ. ನನ್ನ ಬರಹ ಉರ್ದು ಅಥವಾ ಫಾರ್ಸಿ ಅಥವಾ ಅರಬಿಯಲ್ಲಾಗಲೀ ಎರಡು ವಿಧಗಳಲ್ಲಿ ವಿಭಜಿಸಲ್ಪಡುತ್ತದೆ. 1) ಮೊದಲನೆಯದಾಗಿ ನಾನು ಬರೆಯುತ್ತಿರುವಾಗ ನನಗೆ ತನ್ನ ಕಡೆಯಿಂದ ಯಾವ ಕಠಿಣತೆಯೂ ದೋಚುವುದಿಲ್ಲ. ಬದಲು ತುಂಬ ಸರಳ ರೀತಿಯಲ್ಲಿ ಆ ಪದಗಳು ಅದರ ಅರ್ಥಗಳ ನನ್ನ ಮುಂದೆ ಬಂದುಬಿಡುತ್ತವೆ........2) ಎರಡನೆಯದಾಗಿ ಹೇಳಬೇಕಾದರೆ ನನ್ನ ಬರಹಗಳು ಪವಾಡ ಸದೃಶ್ಯವಾಗಿ ಕಂಡುಬರುತ್ತವೆ. ಅದು ಹೇಗೆಂದರೆ, •ಉದಾಹರಣೆಗೆ ನಾನು ಅರಬಿ ಬರಹ ಬರೆಯಲು ಹೊರಟರೆ ಬರಹದಲ್ಲಿ ಕೆಲವೊಂದು ನನಗೆ ತಿಳಿಯದಂತಹ ಪದಗಳಿರುತ್ತವೆ. ಆ ಬಗ್ಗೆ ಅಲ್ಲಾಹನು ನನಗೆ ಮಾರ್ಗದರ್ಶನ ನೀಡುತ್ತಾನೆ. ಆ ಪದಗಳನ್ನು ಪವಿತ್ರ ವಹಿಯಂತೆ ರೂಹುಲ್–ಖುದ್ದುಸ್ ನನ್ನ ಹೃದಯದಲ್ಲಿ ಅವತರಿಸುತ್ತದೆ ಮತ್ತು ನಾಲಿಗೆಯ ಮೇಲೆ ಜಾರಿಗೊಳಿಸುತ್ತಾನೆ. ಉದಾಹರಣೆಗೆ...... ಅರಬಿ ಬರವಣಿಗೆಯ ಸಂಧರ್ಭ ನನಗೆ ಒಂದು ಪದದ ಅಗತ್ಯವಿದ್ದಿತು. ಅದು ಉರ್ದುವಿನಲ್ಲಿ "ಬಸಿಯಾರಿಯೆ ಅಯಾಲ್" ಆಗಿತ್ತು. ಅದು ನನಗೆ ಗೊತ್ತಿರಲಿಲ್ಲ. ಅಷ್ಟರಲ್ಲಿ ದೇವವಾಣಿಯ ಮೂಲಕ ನನ್ನ ಅರಿವಿಗೆ ಬಂತು. "ಝುಫಫ್" ಎಂದು ಅದು "ಬಿಸ್‌ಯಾರಿಯೇ ಅಯಾಲಿನ್" ಗೆ ಸರಿಯಾದ ಅನುವಾದಿತ ಅರಬಿ ಪದವಾಗಿತ್ತು. ಅದೇ ರೀತಿ ನನಗೆ "ಘಮ್ ವ ಗುಸ್ಸ" ಉರ್ದು ಪದದ ಅರ್ಥ ಕೊಡುವ ಅರಬಿ ಪದದ ಅಗತ್ಯವಿತ್ತು. ಅದು ನಾನಗೆ ತಿಳಿದಿರಲಿಲ್ಲ. ಅಷ್ಟರಲ್ಲಿ ವಹಿ (ದೇವವಾಣಿ) ಆಯಿತು "ವಜೂಮ್" ಎಂದು. ಅಂತಹುದೇ ಅರಬಿ ಪದಗಳ ಗಶ ಆಗಿದೆ. ಅರಬಿ ಬರಹದ ಸಮಯದಲ್ಲಿ ನೂರಾರು ಪದಗಳು ದೇವವಾಣಿಯ ಮೂಲಕ ಅವತರಿಸಲ್ಪಟ್ಟಿವೆ. ಅಥವಾ ಕೆಲವೊಮ್ಮೆ ದೇವದೂರರ ಮೂಲಕ ಒಂದು ಕಾಗದದ ಮೇಲೆ ನನಗೆ ಬೇಕಾದ ಪದಗಳನ್ನು ಬರೆದು ತೋರಿಸಲಾಗುತ್ತಿತ್ತು. ಕೆಲವೊಂದು ಖುರ್‌ಆನ್‌ನ ವಚನಗಳಾಗುತ್ತಿದ್ದವು. ಅಥವಾ ಅದೇ ಅರ್ಥ ಕೊಡುವಂತಹದ್ದಾಗುತ್ತಿದ್ದವು. ಅಂದ ಹಾಗೆ ಅದೇ ಒಂದು ರಹಸ್ಯವಾಗಿದೆ. ಆ ಮೂಲಕ ಲೋಕದ ಮುಂದೆ ಸಾಹಿತ್ಯದ ಅರಬಿ ಪ್ರಸ್ತುತಪಡಿಸಲು ನಾನು ಶಕ್ತನಾಗುತ್ತೇನೆ. ಇಲ್ಲವಾದರೆ ಮನುಷ್ಯನ ಯಾವ ಸಾಮರ್ಥ್ಯ ಮತ್ತು ಇಬ್ನು ಆದಂ ಏನು ಮಾಡಬಲ್ಲನು. ಅವನಿಗೆ ಒಂದು ಲೋಕವನ್ನೇ ತನ್ನ ಎದುರಿಗೆ ಆಹ್ವಾನಿಸಲು ಹೇಗೆ ಸಾಧ್ಯವಾಯಿತು?" (ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–434–436)

### ಕಾಲದ ಉಲಮಾಗಳಿಗೆ ಲಿಖಿತ ರೂಪದಲ್ಲಿ ಚರ್ಚಿಸಲು ಆಹ್ವಾನ ಮತ್ತು ಮಹೋನ್ನತವಾದ ದೈವಿಕ ಸಹಕಾರ ಹಾಗೂ ನೆರವು

ಹಝ್ರತ್ ಮಸೀಹ್ ಮೌಊದ್(ಅ) ಲೂಧಿಯಾನದಿಂದ 26 ಮಾರ್ಚ್ 1891 ರಂದು ಒಂದು ಜಾಹೀರಾತಿನ ಮೂಲಕ ಎಲ್ಲ ಹೆಸರಾಂತ ಮೌಲ್ವಿಗಳಿಗೆ ಲಿಖಿತ ಚರ್ಚೆಯ ಪಂಥಾಹ್ವಾನ ನೀಡಿದರು. ಅದರಲ್ಲಿ ಬರೆದರು. ನನ್ನ ವಾದವು ಖಂಡಿತವಾಗಿಯೂ ಖಾಲಲ್ಲಾಹ್ ಮತ್ತು ಖಾಲರಸೂಲರ ವಿರುದ್ಧವಿಲ್ಲ. ನೀವು ಸಾಹೇಬರುಗಳು ಸ್ಥಳ ಮತ್ತು ತಾರೀಖು ನಿಗದಿಗೊಳಿಸಿ ಒಂದು ಸಾರ್ವಜನಕ ಸಭೆಯನ್ನು ಏರ್ಪಡಿಸಿ ನನ್ನೊಂದಿಗೆ ಚರ್ಚೆ ಮಾಡಲಿಲ್ಲ ಎಂದರೆ ನೀವು ಅಲ್ಲಾಹ್ ಮತ್ತು ಅವನ ಸಜ್ಜನ ದಾಸರ ದೃಷ್ಟಿಯಲ್ಲಿ ತಪ್ಪಿತಸ್ಥರನ್ನಾಗಿ ಉಳಿಯುವಿರಿ.

ಹಝ್ರತ್ ಮಸೀಹ್ ಮೌಉದ್(ಅ) ರವರ ಈ ಜಾಹೀರಾತಿನ ನಂತರ ಯಾರು ಸಹ ಮುಂದೆ ಬರಲಿಲ್ಲ. ಆದರೆ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರು ಹೇಳತೊಡಗಿದರು. ಮಿರ್ಝಾ ಸಾಹಿಬರು ನನ್ನೊಡನೆ ಚರ್ಚೆ ಮಾಡಲಿ.

ಈ ಚರ್ಚಾಕೂಟವು ಲಿಖಿತವಾಗಿತ್ತು. 20 ರಿಂದ 29 ಜಲ್ಸಾ 1891 ರವರೆಗೆ ಜಾರಿಯಲ್ಲಿತ್ತು. ಹಝ್ರತ್ ಅಖದಸ್ ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್‌ರೊಡನೆ ಈ ಚರ್ಚೆ ಪ್ರಾರಂಭವಾಯಿತು. ಇದು ಲಿಖಿತ ರೂಪದಲ್ಲಿ ನಡೆದಿತ್ತು. 20 ರಿಂದ 29 ಜುಲೈ 1891 ರವರೆಗೆ ಅಂದರೆ ಹತ್ತು ದಿನಗಳವರೆಗೆ ಜಾರಿಯಲ್ಲಿತ್ತು. ಚರ್ಚೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಬುಖಾರಿ ಶರೀಫ್ ಇಟ್ಟುಕೊಳ್ಳುತ್ತಿದ್ದರು. ಮತ್ತು ಆಗಿಂದಾಗ್ಗೆ ಬರೆಯುತ್ತಿದ್ದರು. ಪ್ರಬಂಧ ತಯಾರಾದಾಗ ಓದಿ ಹೇಳುತ್ತಿದ್ದರು. ಆದರೆ ಅಲ್ಲಿ ತುಂಬ ಕಷ್ಟಪಟ್ಟು ಪ್ರಬಂಧ ತಯಾರಿ ಮಾಡುತ್ತಿದ್ದರು ಮತ್ತು ತುಂಬ ಕಷ್ಟದಿಂದ ಮೌಲ್ವಿ ಮುಹಮ್ಮದ್ ಹುಸೇನ್ ತನ್ನ ಪ್ರಬಂಧ ತಯಾರು ಮಾಡುತ್ತಿದ್ದರು.

**ಒಂದು ಪವಾಡ :** (ಹಝ್ರತ್ ಪೀರ್ ಸಿರಾಜುಲ್ ಹಖ್ ಸಹಿಬ್‌ರವರ ವರದಿಯ ಪ್ರಕಾರ ಈ ಚರ್ಚೆಯ ನಡುವೆ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬಟಾಲ್ವಿ ಅವರು ಬುಖಾರಿಯ ಒಂದು ಪುರಾವೆ ಕೇಳಿದರು. ಆ ಸಮಯ ಆ ಪುರಾವೆ ಹಝ್ರತ್ ಅಖದಸ್ ಅವರಿಗೆ ನೆನಪಿರಲಿಲ್ಲ. ಅವರ ಶಿಷ್ಯಂದಿರಲ್ಲಿಯೂ ಯಾರಿಗೂ ನೆನಪಿರಲಿಲ್ಲ. ಆದರೂ ಹಝ್ರತ್ ಅಖದಸ್ ಬುಖಾರಿಯ ಒಂದು ಪ್ರತಿ ತರಿಸಿದರು ಮತ್ತು ಪುಟಗಳನ್ನು ತಿಳಿಸುತ್ತ ಹೋದರು. ಬೇಗ ಬೇಗ ಅದರ ಒಂದೊಂದು ಪುಟ ತಿರಿವುತ್ತಿದ್ದರು. ಕೊನೆಗೆ ಒಂದು ಜಾಗದಲ್ಲಿ ಹೋಗಿ ನಿಲ್ಲಿಸಿದರು ಮತ್ತು ನಿಂತು ಹೇಳಿದರು. ನೋಡಿರಿ. ಇದನ್ನು ನೋಡಿರಿ. ನೋಡುವವರು ಎಲ್ಲರೂ ಬೆರಗಾದರು. ಇದು ಹೇಗೆ ಸಾಧ್ಯವಾಯಿತು ಎಂದು ಅದಲ್ಲೊಬ್ಬರು ಹಝ್ರತ್ ಮಸೀಹ್ ಮೌಊದ್(ಅ) ರೊಡನೆ ಕೇಳಿದರು. ಆಗ ಅವರು ಹೇಳಿದರು. ನಾನು ಗ್ರಂಥವನ್ನು ಕೈಯಲ್ಲಿ ತೆಗೆದುಕೊಂಡು ಪುಟಗಳು ತಿರುವಿ ಹಾಕುತ್ತಿರುವಾಗ ಎಲ್ಲ ಪುಟಗಳು ಖಾಲಿ ಇದ್ದಂತೆ ಕಾಣುತ್ತಿದ್ದವು. ಅಂದರೆ ಅದರ ಮೇಲೆ ಏನೂ ಬರೆದಿಲ್ಲವೆಂಬಂತೆ. ಆದುದರಿಂದ ನಾನು ಬೇಗ ಬೇಗ ತಿರುವುತ್ತಿದ್ದೆ. ಕೊನೆಗೆ ಒಂದು ಪುಟ ಸಿಕ್ಕಿತು. ಅದರ ಮೇಲೆ ಏನೋ ಬರೆದಿತ್ತು. ಆಗ ನನಗೆ ಖಚಿತವಾಯಿತು. ನಮಗೆ ಬೇಕಾದ ಪುರಾವೆ ಇದೇ ಆಗಿರಬಹುದು ಎಂದು. ಅಂದರೆ ಅಲ್ಲಾಹನು ಪವಾಡ ಸದೃಶ್ಯವಾಗಿ ಒಂದು ಸ್ಥಳ ಹೊರತುಪಡಿಸಿ ಎಲ್ಲ ಪುಟಗಳನ್ನು ಖಾಲಿ ಕಾಣುವಂತೆ ಮಾಡಿದನು. (ತಾರೀಖೆ ಅಹ್ಮದಿಯತ್, ಸಂಪುಟ–1, ಪುಟ 408).

ಈ ಚರ್ಚೆಯಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಬಹಳಷ್ಟು ಕುತಂತ್ರಗಳನ್ನು ನಡೆಸಿದರು. ಆದರೆ ಅದೆಲ್ಲ ಅವರಿಗೆ ತಿರುಗುಬಾಣವಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಅವರನ್ನು ಖುರ್‌ಆನ್‌ನ ಕಡೆ ಎಳೆದು ತರುತ್ತಿದ್ದರು. ಆದರೆ ಅವರು ತನ್ನ ರಕ್ಷಣೆಗಾಗಿ ಹದೀಸಿನತ್ತ ಧಾವಿಸುತ್ತಿದ್ದರು. ಚರ್ಚೆಯ ಅಸಲು ಉದ್ದೇಶ ಮಸೀಹ್(ಅ) ರವರ ಜೀವಿತ ಹಾಗೂ ಮರಣ ಕುರಿತಾಗಿತ್ತು. ಆದರೆ ಅದರಿಂದಲೂ ಅವರು ಪಲಾಯನ ಮಾಡುತ್ತಿದ್ದರು. ಅಂತಿಮ ದಿನ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಬರಹ ಓದಲು ಪ್ರಾರಂಭಿಸಿದಾಗ ಮೌಲ್ವಿ ಸಾಹಿಬರ ಮುಖ ಮಸಿ ಬಡಿದಂತಾಯಿತು. ಮತ್ತು ಹೇಗೆ ಗಾಬರಿಗೊಂಡರೆಂದರೆ ಅವರಿಗೆ ಏನೂ ದೋಚುತ್ತಿರಲಿಲ್ಲ. ಟಿಪ್ಪಣಿ ಬರೆಯಲು ಲೇಖನಿ ಎತ್ತಿಕೊಂಡರು. ನೆಲಕ್ಕೆ ಅಪ್ಪಳಿಸುತ್ತಿದ್ದರು. ಮಸಿಕುಡಿಕೆ ಇದ್ದ ಹಾಗೆಯೇ ಇದ್ದಿತ್ತು. ಲೇಖನಿ ನೆಲಕ್ಕೆ ಅಪ್ಪಳಿಸುತ್ತಿದ್ದ ಕಾರಣ ಮುರಿದು ಹೋಯಿತು. ರಸೂಲುಲ್ಲಾಹ್(ಸ) ಅವರ ಹದೀಸ್ ಯಾವ ಹದೀಸ್ ಖುರ್‌ಆನ್‌ಗೆ ತಾಳೆಯಾಗುವುದಿಲ್ಲವೋ ಅದನ್ನು ಬಿಟ್ಟುಬಿಡಬೇಕು. ಮತ್ತು ಖುರ್‌ಆನ್ ತೆಗೆದುಕೊಳ್ಳಬೇಕು. ಬರುತ್ತಲೇ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಕೋಪ್ರೋದ್ರೇಕರಾದರು ಮತ್ತು ಹೇಳಿದರು. ಈ ಹದೀಸು ಬುಖಾರಿಯಲ್ಲಿ ಇಲ್ಲ, ಇದು ಬುಖಾರಿಯಲ್ಲಿ ಇದೆ ಎಂದಾದರೆ ನನ್ನ ಎರಡೂ ಪತ್ನಿಯರ ಮೇಲೆ ತಲಾಖ್ ಇದೆ. ಈ ತಲಾಖ್ ಪದ ಉಪಯೋಗಿಸಿದಂತೆಯೇ ಎಲ್ಲ ಜನರು ನಗತೊಡಗಿದರು. ಮೌಲ್ವಿ ಸಾಹಿಬರು ನಾಚಿಕೆಯಿಂದ ತಲೆ ತಗ್ಗಿಸದೇ ಏನೂ ಮಾಡಲಾಗಲಿಲ್ಲ. ನಂತರ ಎಷ್ಟೋ ದಿನಗಳವರೆಗೆ ಜನರೊಡನೆ ಹೇಳುತ್ತಿದ್ದರು. ಇಲ್ಲ ಇಲ್ಲ, ನನ್ನ ಇಬ್ಬರು ಪತ್ನಿಯರ ಮೇಲೆ ತಲಾಖ್ ಆಗಲಿಲ್ಲ. ನಾನು ತಲಾಖ್ ಹೆಸರೇ ಎತ್ತಲಿಲ್ಲ. ಮೊದಲು ಕೆಲವರಿಗೆ ಮಾತ್ರ ಈ ವಿಷಯ ತಿಳಿದಿತ್ತು. ಆದರೆ ಇದೀಗ ಮೌಲ್ವಿ ಸಾಹಿಬ್ ಸ್ವಯಂ ಸಾವಿರಾರು ಜನರಿಗೆ ಸುದ್ದಿ ತಲುಪಿಸಿದರು.

ಹಲವು ತಿಂಗಳ ನಂತರ ಈ ಚರ್ಚಾ ವಿಷಯ ಮುದ್ರಿತಗೊಂಡಿತ್ತು. ದಿಲ್ಲಿಯಲ್ಲಿ ಒಂದು ಸಭೆ ಏರ್ಪಡಿಸಲಾಗಿತ್ತು. ಅದರಲ್ಲಿ ಹಲವು ಉಲಮಾಅಗಳು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬರ ಮೇಲೆ ಬಲವಾಗಿ ಖಂಡನೆ ವ್ಯಕ್ತಪಡಿಸಿದರು.

ನೀವು ಲೂಧಿಯಾನದಲ್ಲಿ ಮಿರ್ಝಾ ಸಾಹಿಬರ ಚರ್ಚಾಕೂಟದಲ್ಲಿ ಏನು ಸಾಧಿಸಿದ್ದೀರಿ. ವಾಸ್ತವದಲ್ಲಿ ನಿಮಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಬಟಾಲ್ವಿ ಸಾಹಿಬ್ ಹೇಳಿದರು. ನನಗೆ ಚರ್ಚೆ ಮಾಡಲು ಹೇಗೆ ಸಾಧ್ಯವಿತ್ತು. ಪವಿತ್ರ ಖುರ್‌ಆನ್‌ನಲ್ಲಿ ಮಸೀಹರ ಜೀವಿತ ಕುರಿತು ಅಥವಾ "ರಫಾ ಇಲಸ್ಸಮಾಅ" ಆಕಾಶಕ್ಕೆ ಎತ್ತಲ್ಪಟ್ಟ ವಿಷಯವು ಪ್ರಸ್ತಾಪಿಸಲ್ಪಡಲೇ ಇಲ್ಲ. ಹದೀಸುಗಳಿಂದ ಕೇವಲ "ನುಝೂಲ್" ಅವತರಿಸುವರು" ಎಂದಷ್ಟೇ ಸಾಬೀತಾಗುತ್ತದೆ. ನಾನು ಮಿರ್ಝಾ ಸಾಹಿಬರನ್ನು ಹದೀಸುಗಳ ಕಡೆ ಬರೆಯುತ್ತಿದ್ದೆ. ಅವರು ಖುರ್‌ಆನಿನ ಕಡೆಗೆ ಎಳೆಯುತ್ತಿದ್ದರು. (ಅದೇ ಪುಟ 410).

### ಗದ್ಯ ಸಾಹಿತ್ಯದ ಮಹೋನ್ನತ ದೃಷ್ಟಾಂತ

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ತನ್ನ ದಾವೆಯ ಪ್ರಚಾರಕ್ಕಾಗಿ ದೆಹಲಿಗೂ ಆಗಮಿಸುತ್ತಿದ್ದರು. 29 ಸೆಪ್ಟೆಂಬರ್ 1891 ರಂದು ದಿಲ್ಲಿ ತಲುಪಿದರು. ಮಲೇಯರಾಂ ಓಣಿಯಲ್ಲಿರುವ ನವಾಬ್ ಲೋಹಾರೋಕಿ ಅವರ ಎರಡು ಅಂತಸ್ತಿನ ಮಹಡಿಯ ಮನೆಯಲ್ಲಿ ತಂಗಿದ್ದರು. ಸಯ್ಯದ್ ನಝೀರ್ ಹುಸೇನ್ ಸಾಹಿಬ್ ದೆಹಲಿ ಮತ್ತು ಶಮಸುಲ್ ಉಲಮ ಮೌಲ್ವಿ ಅಬ್ದುಲ್ ಹಖ್ ಸಾಹಿಬ್‌ರವರನ್ನು ಮಸೀಹ(ಅ) ರವರ ಮರಣದ ಕುರಿತು ಲಿಖಿತ ಚರ್ಚೆಗಾಗಿ ಆಹ್ವಾನಿಸಿದರು. ಮೌಲ್ವಿ ಅಬ್ದುಲ್ ಹಖ್ ಸಾಹಿಬ್ ಕ್ಷಮೆ ಯಾಚಿಸಿಕೊಂಡರು. ಆದರೆ ಮೌಲ್ವಿ ನಝೀರ್ ಹುಸೇನ್ ಸಾಹಿಬ್ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರ ಪ್ರಚೋದನೆ ಮೇರೆಗೆ ಚರ್ಚೆಗೋಸ್ಕರ ಸಿದ್ಧರಾದರು. ಅನಂತರ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಮತ್ತು ಅವರ ಸಂಗಡಿಗರ ಇಂಗಿತಗಳ ಹಾಗೂ ಸಂಚುಗಳ ಪರಿಣಾಮವಾಗಿ ಜುಮುಅ ಮಸೀದಿ ದೆಹಲಿಯಲ್ಲಿ ಆದ ಅರ್ಭಟ ಮತ್ತು ಅಲ್ಲಾಹನ ಈ ಸಿಂಹ ಜಾಮಿಯ ಮಸೀದಿ ದೆಹಲಿಯಲ್ಲಿ ಮೌಲ್ವಿ ನಝೀರ್ ಹುಸೇನ್‌ರನ್ನು ಆಹ್ವಾನಿಸಿದ ರೀತಿ ಅಹ್ಮದಿಯಾ ಇತಿಹಾಸದಲ್ಲಿ ಒಂದು ತೆರೆದ ಅಧ್ಯಾಯವಾಗಿದೆ. ಮೌಲ್ವಿ ನಝೀರ್ ಹುಸೇನ್ ಸಾಹಿಬ್ ಈ ಕಹಿ ಕಶಾಯ ಕುಡಿಯುವುದರಿಂದ ಬಚಾವಾದರು. ಆದರೆ ಮೌಲ್ವಿ ಮುಹಮ್ಮದ್ ಬಶೀರ್ ಸಾಹಿಬ್ ಚರ್ಚೆಗೋಸ್ಕರ ಸಿದ್ಧರಾದರು. 23 ಅಕ್ಟೋಬರ್ 1891 ರಂದು ಚರ್ಚೆ ಆರಂಭವಾಯಿತು.

ಹಝ್ರತ್ ಮಸೀಹ್ ಮೌಊದ್(ಅ) ಚರ್ಚೆ ಪ್ರಾರಂಭವಾಗುವ ಮೊದಲು ತನ್ನ ದಾವೆಯ ಕುರಿತು ಮೌಲ್ವಿ ಮುಹಮ್ಮ್ದ್ ಬಶೀರ್ ಸಾಹಿಬ್ ಮತ್ತು ಅವರ ಸಂಗಡಿಗರನ್ನು ಸಂಬೋಧಿಸಿ ಒಂದು ಆಧ್ಯಾತ್ಮಿಕ ಜ್ಞಾನದಿಂದ ತುಂಬಿದ ಭಾಷಣ ಮಾಡಿದರು. ಹುಝೂರ್(ಅ) ಈ ಭಾಷಣ ಇನ್ನೂ ಜಾರಿಯಲ್ಲಿಯೇ ಇತ್ತು. ಮೌಲ್ವಿ ಮುಹಮ್ಮದ್ ಬಶೀರ್ ಸಾಹಿಬ್ ಭಾಷಣದ ಮಧ್ಯೆಯಲ್ಲಿಯೇ ಹೇಳಿದರು. ನೀವು ಅನುಮತಿ ಕೊಟ್ಟರೆ ಅಂಗಳದ ಆಚೆ ಹೋಗಿ ಕುಳಿತುಕೊಂಡು ಕೆಲ ವಿಷಯ ಬರೆಯುತ್ತೇನೆ.

ಹಝ್ರತ್ ಅಖದಸ್ ಹೇಳಿದರು. ಒಳ್ಳೆಯದು! ಅಂದ ಹಾಗೆ ಮೌಲ್ವಿ ಸಾಹಿಬ್ ಅಂಗಳದ ಆಚೆ ಒಂದು ಬದಿಯಲ್ಲಿ ಕುಳಿತುಕೊಂಡರು. ಯಾರು ಮೊದಲೇ ಬರೆಯಬಾರದು ಎಂಬ ಶರತ್ತು ವಿಧಿಸಲಾಗಿತ್ತು. ಅಂದರೆ ಏನೆಲ್ಲ ಬರೆಯಲಿಕ್ಕಿದೆ ಅದು ಸಭೆಯಲ್ಲಿಯೇ ಚರ್ಚಾ ಸಮಯದಲ್ಲಿ ಬರೆಯಬೇಕು ಎಂಬ ಶರತ್ತು ಇತ್ತು. ಅದನ್ನು ಕಡೆಗಣಿಸಿದ ಪ್ರಯುಕ್ತ ಮೌಲಾನಾ ಅಬ್ದುಲ್ ಕರೀಮ್ ಸಾಹಿಬ್ ಹೇಳಿದರು. ಇದು ಶರತ್ತಿಗೆ ವಿರುದ್ಧವಾಗಿದೆ. ಪೀರ್ ಸಿರಾದುಲ್ ಹಕ್ ಸಾಹಿಬ್ ನೋಮಾನಿ ಅವರು ಹಝ್ರತ್ ಅಖ್‌ದಸರೊಡನೆ ಅನುಮತಿ ಕೋರಿದರು. ನಾನು ಮೌಲ್ವಿ ಸಾಹಿಬರೊಡನೆ ಹೇಳಲಿ. ಅವರು ಬರೆದು ತಂದದ್ದೆ ಕೊಟ್ಟು ಬಿಡಲಿ. ಏಕೆಂದರೆ ನಾವು ಅದರ ಉತ್ತರ ಬರೆಯಬಹುದು. ಹಝ್ರತ್ ಅಖದಸ್(ಅ) ಅನುಮತಿ ಕೊಟ್ಟರು. ಅವರು ಎದ್ದು ನಿಂತು ಹೇಳಿದರು. ಮೌಲ್ವಿ ಸಾಹಿಬ್ ಬರೆದ ವಿಷಯವನ್ನೇ ನಕಲು ಮಾಡಿಸುವ ಅಗತ್ಯವೇನಿದೆ. ಅನವಶ್ಯಕ ತಡವಾಗುತ್ತದೆ. ಬರೆದ ವಿಷಯವೇ ಕೊಟ್ಟುಬಿಡಿ. ನಾವು ಅದಕ್ಕೆ ಉತ್ತರವಾದರೂ ಬೇಗನೇ ಬರೆದು ಕೊಡಬಹುದು. ಮೌಲ್ವಿ ಸಾಹೇಬರು ಈ ಮಾತು ಕೇಳುತ್ತಲೇ ಗಾಬರಿಗೊಂಡು ಈ ಉತ್ತರ ನೀಡಿದರು. ಇಲ್ಲ, ಇಲ್ಲ! ನಾನು ಪ್ರಬಂಧವೇನು ಬರೆದು ತರಲಿಲ್ಲ. ಕೇವಲ ನೋಟ್ಸ್ ಬರೆದು ತಂದಿದ್ದೇನೆ. ಅದನ್ನು ಉಲ್ಲೇಖಿಸಿ ಬರೆಯುತ್ತಿದ್ದೇನೆ. ಅದಾಗ್ಯೂ ಅವರು ಆ ವಿಷಯ ಅಕ್ಷರಶ: ಬರೆಸುತ್ತಿದ್ದರು. ಅದರ ಉತ್ತರವಾಗಿ ಪೀರ್ ಸಾಹಿಬ್ ಕೆಲ ಮಾತು ಹೇಳಬಯಸುತ್ತಿದ್ದರು. ಆದರೆ ಹಝ್ರತ್ ಅಖದಸ್ ಅವರನ್ನು ತಡೆದರು. ಮತ್ತು ಹುಝೂರ್ ಮುನ್ಶಿ ಝುಫರ್ ಅಹ್ಮದ್ ಸಾಹಿಬರಿಗೆ ಹೇಳಿದರು. ಮೌಲ್ವಿ ಸಾಹಿಬ್ ಪ್ರಬಂಧ ಬರೆದುಕೊಟ್ಟ ನಂತರ ನನಗೆ ಒಪ್ಪಿಸಿರಿ. ಮೇಲಿನ ಅಂತಸ್ತಿಗೆ ಮರಳಿದರು. ಮೌಲ್ವಿ ಸಾಹಿಬ್ ಪ್ರಬಂಧ ಕೊಟ್ಟ ನಂತರ ಮುನ್ಶಿ ಸಾಹಿಬ್ ಅದನ್ನು ಹುಝೂರರ ಸೇವೆಯಲ್ಲಿ ಅರ್ಪಿಸಿದರು. ಹಝ್ರತ್ ಅಖದಸ್ ಮೌಲ್ವಿ ಸಾಹಿಬರ ಪ್ರಬಂಧದ ಮೊದಲನೇ ಪುಟದಿಂದ ಹಿಡಿದು ಕೊನೆಯ ಪುಟದವರೆಗೆ ಅತ್ಯಂತ ವೇಗದಿಂದ ದೃಷ್ಟಿ ಹಾಯಿಸಿದರು. ಮತ್ತು ಉತ್ತರ ಬರೆಯಲು ಪ್ರಾರಂಭಿಸಿದರು. ಪ್ರಬಂಧದ ಎರಡು ಪುಟಗಳು ಸಿದ್ಧಗೊಂಡ ನಂತರ ಹುಝೂರ್ ಮುನ್ಶಿ ಝುಫರ್ ಅಹ್ಮದ್ ಸಾಹಿಬರಿಗೆ ಕೆಳಗೆ ನಕಲು ಮಾಡಲು ಕೊಟ್ಟು ಬಂದರು. ಒಂದೊಂದು ಪುಟ ತೆಗೆದುಕೊಂಡು ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಮತ್ತು ಅಬ್ದುಲ್ ಖುದ್ದೂಸ್ ಸಾಹಿಬ್ ನಕಲು ಮಾಡಲು ಪ್ರಾರಂಭಿಸಿದರು. ಅದೇ ರೀತಿ ಮುನ್ಶಿ ಸಾಹಿಬ್ ಹಝ್ರತ್ ಸಾಹಿಬ್ ಬರೆದ ಕಾಗದಗಳನ್ನು ಓದುತ್ತಿದ್ದರು. ಮತ್ತು ಇವರಿಬ್ಬರು ನಕಲು ಮಾಡುತ್ತಿದ್ದರು. ಹಝ್ರತ್ ಅಖದಸ್ ಎಷ್ಟೊಂದು ವೇಗವಾಗಿ ಬರೆಯತೊಡಗಿದ್ದರೆಂದರೆ, ಅಬ್ದುಲ್ ಖುದ್ದೂಸ್ ಸಾಹಿಬ್ ಸ್ವಯಂ ಒಳ್ಳೆಯ ಬರಹಗಾರರಾಗಿದ್ದರು. ಅಚ್ಚರಿಗೊಂಡರು ಮತ್ತು ಹುಝೂರರ ಬರಹದ ಮೇಲೆ ನೆರಳು ತಾಗಿಸಿ ಮಸಿ ನೋಡಿದರು. ಇದು ಮೊದಲೇ ಬರೆದದ್ದಂತೂ ಅಲ್ಲ, ಮುನ್ಶಿ ಝುಫರ್ ಅಹ್ಮದ್ ಸಾಹಿಬ್ ಹೇಳಿದರು. ಹೀಗಾದರೆ ಇದೊಂದು ಮಹೋನ್ನತ ದೃಷ್ಟಾಂತವೇ ಸರಿ. ಉತ್ತರ ಮೊದಲೇ ಬರೆದದ್ದಾಗಿದೆ. ಹಝ್ರತ್ ಅಖದಸ್‌ರವರ ಇದೊಂದು ಅದ್ಭುತಕರ ಗ್ರಂಥರಚನೆಯೇ ಸರಿ. ನೋಡಿ

ಮೌಲ್ವಿ ಮುಹಮ್ಮದ್ ಬಶೀರ್ ಸಾಹೇಬರಿಗೆ ಹುಝೂರರ ಸೇವೆಯಲ್ಲಿ ಹಾಜರಾಗಿ ಹೇಳಬೇಕಾಯಿತು. ತಾವು ಅನುಮತಿ ಕೊಟ್ಟರೆ ನಾಳೆ ತಮ್ಮ ಸ್ವಗೃಹದಿಂದಲೇ ಉತ್ತರ ಬರೆದು ತರುವೆನು. ಹುಝೂರ್ ತಕ್ಷಣ ಅನುಮತಿ ನಿಡಿದರು. ಮತ್ತೆ ಮೌಲ್ವಿ ಸಾಹೇಬರು ಚರ್ಚೆ ಅಂತ್ಯಗೋಳ್ಳುವವರೆಗೆ ಅದೇ ರೀತಿ ಮಾಡಿದರು. ಹಝ್ರತ್ ಅಖದಸ್ ಅವರ ಪ್ರಬಂಧದ ಉತ್ತರ ದೊರೆತ ಮೇಲೆ ಹುಝೂರರಿಂದ ಅನುಮತಿ ಪಡೆದು ತಮ್ಮ ಸ್ವಗೃಹಕ್ಕೆ ಹೋಗಿ ಪ್ರಬಂಧಕ್ಕೆ ಅಲ್ಲಿಂದಲೇ ಉತ್ತರ ಬರೆದು ತರುತ್ತಿದ್ದರು. ಅವರು ಎಂದೂ ಮುಂದೆ ಕುಳಿತುಕೊಂಡು ಉತ್ತರ ಬರೆಯಲಿಲ್ಲ. ಈ ಚರ್ಚೆಯ ಸಂಪೂರ್ಣ ವರದಿ **"ಅಲ್‌ಹಖ್ ದೆಹಲಿ"** ಪತ್ರಿಕೆಯಲ್ಲಿ ಪ್ರಕಟವಾಯಿತು.

**(ತಾರೀಖ್ ಅಹ್ಮದಿಯತ್, ಸಂಪುಟ-1, ಪುಟ-421-432)**

**ಒಂದು ರಾತ್ರಿಯಲ್ಲಿ ಅರಬ್ಬಿ ಭಾಷೆಯ 40000 ಶಬ್ಧಗಳ ಕಲಿಕೆ**

ಹಝ್ರತ್ ಮಸೀಹ್ ಮೌದ್(ಅ) ಅವರು 1893 ರಲ್ಲಿ ಆಯೀನಾ ಎ ಕಮಾಲಾತೆ ಇಸ್ಲಾಂ ಗ್ರಂಥವನ್ನು ರಚಿಸಿದರು. ಅದರಲ್ಲಿ ಹಲವು ಮುಖ್ಯ ಚರ್ಚೆ ಉದಾಹರಣೆಗೆ ಮಖಾಮೆ ಫನ (ನಾಶ ಹೊಂದುವುದು), ಬಖ್ವ (ಶಾಶ್ವತ), ಮತ್ತು ಮಲಾಎಕಗಳ ಹಾಗೂ ಜಿನ್‌ಗಳ ಅಸ್ತಿತ್ವದ ಬಗ್ಗೆ ಆಧುನಿಕ ದೃಷ್ಟಿಕೋನಗಳಿಂದ ಪ್ರಕಾಶ. ಜನವರಿ 1893 ರಂದು ಗ್ರಂಥದ ಉರ್ದು ಭಾಗ ಪರಿಪೂರ್ಣ ಗೊಂಡನಂತರ ಮೌಲಾನ ಅಬ್ದುಲ್ ಕರೀಮ್ ಸಾಹೇಬ್ ಸಿಯಾಲ್ಕೋಟಿ ಯವರು ಒಂದು ಸಭೆಯಲ್ಲಿ ಹಝ್ರತ್ ಅಖ್‌ದಸ್(ಅ) ಅವರಿಗೆ ಹೇಳಿದರು. ಈ ಗ್ರಂಥದ ಜೊತೆಯಲ್ಲಿ ಮುಸಲ್ಮಾನ ದರ್ವೇಶರಿಗೆ, ಪೀರ್‌ಜಾದ್‌ಗಳಿಗೆ ನ್ಯಾಯ ಪೂರ್ತಿಕರಣಕ್ಕಾಗಿ ಒಂದು ಪತ್ರವು ಪ್ರಕಟಿಸಬೇಕು. ಹುಝೂರ್(ಅ) ಈ ಸಲಹೆ ತುಂಬಾ ಮೆಚ್ಚಿದರು. ಅವರ ಇರಾದೆಯು ಈ ಪತ್ರವನ್ನು ಉರ್ದುವಿನಲ್ಲಿ ಬರೆಯುವುದಾಗಿತ್ತು. ಆದರೆ ರಾತ್ರಿಯಲ್ಲಿ ಕೆಲವು ಸಂಕೇತಗಳ ಮೂಲಕ ಅವರಿಗೆ ಅರಬ್ಬಿಯಲ್ಲಿ ಬರೆಯುವ ಆಗ್ರಹವಾಯಿತು. ಅಲ್ಲಾಹನು ಹುಝೂರ್ ದುಆ ಮಾಡಿದ ಪರಿಣಾಮವಾಗಿ ಅವರಿಗೆ ರಾತ್ರೋರಾತ್ರಿ ಅರಬ್ಬಿ ಭಾಷೆಯ 40,000 ಶಬ್ದಗಳನ್ನು ಕಲಿಸಿಕೊಟ್ಟನು. ಅಂದಹಾಗೆ ಅವರು ಈ ದೇವವಾಣಿಯ ಮೂಲಕ **'ಅತ್ತಬ್‌ಲೀಗ್"** ಹೆಸರಿನ ಸಾಹಿತ್ಯ ರೂಪದಲ್ಲಿ ಅರಬ್ಬಿಯಲಿ ಒಂದು ಪತ್ರವನ್ನು ಬರೆದರು. ಅದರಲ್ಲಿ ಅವರು ಭಾರತ, ಅರೇಬಿಯ, ಇರಾನ್, ತುರ್ಕಿ, ಈಜಿಪ್ಟ್ ಮತ್ತು ಇತರ ದೇಶಗಳ ಫಿರ್‌ಔನ್‌ಗಳಿಗೆ, ಸಜ್ಜಾದ ನಶೀನರಿಗೆ, ಸೂಫಿಗಳಿಗೆ ಮತ್ತು ಸಜ್ಜನರಿಗೆ ಈ ಸಂದೇಶವನ್ನು ತಲುಪಿಸಿದರು. ಅತ್ತಬ್‌ಲೀಘ್ ನಂತರ ಅರಬ್ಬಿ ಭಾಷೆಯಲ್ಲಿ ಹುಝೂರ್ ಒಂದು ಅದ್ವಿತಿಯ ಸಾಹಿತ್ಯ ಪ್ರಕಟಿಸಿದರು. ಅದನ್ನು ಕಂಡು ಅರೇಬಿಯರ ಹಾಗೂ ಅರಬಿಯೇತರರ ನಾಲಿಗೆಗಳು ಮೂಖವಾದವು. **'ಅತ್ತಬ್‌ಲೀಗ್'** ಕುರಿತು ಒಬ್ಬ ಅರೇಬಿ ಪಂಡಿತನು ಹೀಗೆ ಹೇಳಿದನು. ಅದನ್ನು ಓದಿ ನಾನು ಬೆರಗಾದೆನು. ಮತ್ತು ಶಿರಭಾಗಿ ನೃತ್ಯ ಮಾಡುತ್ತಾ ಕಾದಿಯಾನಿಗೆ ಹೋಗಬೇಕೆಂಬ ಮನಸಾಯಿತು. ತರಾಬುಲ್‌ಸಿನ ಓರ್ವ ಖ್ಯಾತ ಆಲಿಮರಾದ ಅಸಯ್ಯದ್ ಮೊಹಮ್ಮದ್ ಸಈದಿ ಶಾಮಿ ಅವರು ಅದನ್ನು ಓದುತ್ತಲೇ ಹೇಳಿದರು. ವಲ್ಲಾಹ್: ಇಂತಹ ಬರಹವು ಒಬ್ಬ ಅರೇಬಿಯನಿಂದಲೂ ಬರೆಯಲು ಸಾಧ್ಯವಿಲ್ಲ. ಅಂತಿಮವಾಗಿ ಅದರಿಂದ ಪ್ರಭಾವಿತರಾಗಿ ಅಹ್ಮದಿಯತ್ ಸ್ವೀಕರಿಸಿದರು. ಹಝ್ರತ್ ಅಕ್‌ದಸ್ ಹೇಳುತ್ತಿದ್ದರು. ಅರೇಬಿಯಾ ಭಾಷೆಯಲ್ಲಿ ಇರುವ ಎಲ್ಲಾ ಬರಹಗಳು ಒಂದೇ ರೀತಿಯ ದೈವಿಕ ಸಹಾಯ ಪಡೆದಿವೆ. ಏಕೆಂದರೆ ಅವೆಲ್ಲಾ ದೇವನ ಆದೇಶ ಹಾಗೂ ನೆರವಿನಿಂದ ಬರೆಯಲ್ಪಟ್ಟಿವೆ.

ಹೇಳಿದರು. ಕೆಲವೊಮ್ಮೆ ಎಷ್ಟೋ ಪದಗಳು ಮತ್ತು ವಾಕ್ಯಗಳು ಬರೆದು ಬಿಡುತ್ತೇನೆ. ಆದರೆ ನನಗೆ ಅದರ ಅರ್ಥ ತಿಳಿದಿರುವುದಿಲ್ಲ. ಮತ್ತೆ ಬರೆದ ನಂತರ ನಿಘಂಟು ನೋಡುತ್ತೇನೆ. ಆಗ ಅರ್ಥ ತಿಳಿಯುತ್ತದೆ.

ಈ ಗ್ರಂಥಗಳ ಸಾಹಿತಿಕ ಪವಾಡ ನೋಡಿ ವಿರೋಧಿ ಉಲಮಾಗಳಿಗೆ ಇದು ಅವರದ್ದೇ ಗ್ರಂಥವಾಗಿದೆ ಎಂದು ನಂಬಲಾಗುತ್ತಿರಲಿಲ್ಲ. ಅವರು ಭಾವಿಸುತ್ತಿದ್ದರು. ಈ ಉದ್ದೇಶಕ್ಕಾಗಿ ಒಂದು ಉಲುಮಾಗಳ ತಂಡವನ್ನು ಗೌಪ್ಯವಾಗಿ ಇಟ್ಟುಕೊಂಡಿರಬಹುದು. ಅಂದಹಾಗೆ ಒಂದು ಸಲ ಓರ್ವ ಮೌಲ್ವಿ ಸಾಹೇಬರು ಈ ಗೌಪ್ಯ ತಂಡವನ್ನು ಪತ್ತೆಹಚ್ಚಲು ಖಾಧಿಯಾನಿಗೆ ಬಂದರು ಮತ್ತು ರಾತ್ರಿಯ ಸಮಯ ಮಸ್ಜಿದ್ ಮುಬಾರಕ್‌ಗೆ ಹೋದರು. ಆ ಸಮಯ ಮುನ್ಷಿ ಜ್ಹಫರ್ ಅಹ್ಮದ್ ಸಾಹೇಬ್. ಕಪೊರ್ತ್ ಹಲ್ವಿ, ಮಸ್ಜಿದ್ ಮುಬಾರಕ್‌ಗೆ ಒಳಗೊಂಡ ಒಂದು ಕೋಣೆಯಲ್ಲಿ ವಾಸ ಮಾಡುತ್ತಿದ್ದರು. ಮೌಲ್ವಿ ಸಾಹೇಬರು ಹಝ್ರತ್ ಮುನ್ಷಿ ಸಾಹೇಬರಿಗೆ ಕೇಳಿದರು. ಮೀರ್ಝಾ ಸಾಹೇಬರು ಬರೆದಂತಹ ಅರೇಬಿ ಗ್ರಂಥಗಳು ಯಾರೂ ಬರೆಯಲು ಸಾಧ್ಯವಿಲ್ಲ. ಅಗತ್ಯವಾಗಿ ಮೀರ್ಝಾ ಸಾಹೇಬರಿಗೆ ಕೆಲವು ಉಲಮಗಳು ನೆರವು ನೀಡುತ್ತಿರಬಹುದು ಎಂದು ನಾವು ಭಾವಿಸುತ್ತೇವೆ. ಆ ಸಮಯ ರಾತ್ರಿಯೇ ಆಗಿರಬಹುದು. ಆಗ ಅವರ ನೆರವು ಪಡೆಯುತ್ತಿರಬಹುದೆಂದು ನಾವು ಭಾವಿಸುತ್ತೇವೆ. ಇಂತಹ ಕೆಲವು ಪಂಡಿತರು ನಿಮಲ್ಲಿದ್ದಾರೆಯೇ ಹಝ್ರತ್ ಮುನ್ಷಿ ಸಾಹೇಬರು ಹೇಳಿದರು. ಮೌಲ್ವಿ ಮುಹಮ್ಮದ್ ಚರಾಘ್ ಸಾಹೇಬ್ ಮತ್ತು ಮೌಲ್ವಿ ಮುಹೀನ್ ಸಾಹೇಬ್ ಅವಶ್ಯವಾಗಿ ನಿಮ್ಮಲ್ಲಿರಬಹುದು. ಅವರೇ ನಿಮಗೆ ನೆರವು ನೀಡುತ್ತಿರಬಹುದು. ಹಝ್ರತ್ ಅಖ್‌ದಸ್ ಅವರಿಗೆ ಮುನ್ಷಿ ಸಾಹೇಬರ ಈ ಧ್ವನಿ ಕೇಳಿಸಿತು. ಆಗ ಹುಝೂರ್ ತುಂಬಾ ನಕ್ಕರು. ಏಕೆಂದರೆ ಮೌಲ್ವಿ ಮುಹಮ್ಮದ್ ಚರಾಘ್ ಸಾಹೇಬ್ ಮತ್ತು ಮೌಲ್ವಿ ಮುಹೀನುದ್ದೀನ್ ಸಾಹೇಬ್ ಇಬ್ಬರೂ ಸಹ ಹುಝೂರರ ಅನಕ್ಷರಸ್ಥ ಸೇವಕರಾಗಿದ್ದರು. ಅನಂತರ ಮೌಲ್ವಿ ಸಾಹೇಬರು ಅಲ್ಲಿಂದ ಎದ್ದು ಹೋದರು. ಮರುದಿನ ಅಸರ್ ನಮಾಜಿನ ವೇಳೆ ಹುಝೂರ್ ಮಸೀದಿಗೆ ಬಂದಿದ್ದರು. ಮೌಲ್ವಿ ಸಾಹೇಬರು ಅಲ್ಲಿದ್ದರು. ಹುಝೂರ್(ಅ) ಮುನ್ಷಿ ಸಾಹೇಬರತ್ತ ನೋಡಿ ಮುಗುಳು ನಕ್ಕರು ಮತ್ತು ಹೇಳಿದರು. ಆ ರಾತ್ರಿವೇಳೆ ಬಂದ ಮೌಲ್ವಿಗಳು ಎಲ್ಲಿದ್ದಾರೆ. ತೋರಿಸಿ. ಆ ಸಮಯ ಹುಝೂರ್ ಮೌಲಾನ ಅಬ್ದುಲ್ ಕರೀಮ್ ಸಾಹೇಬರಿಗೂ ರಾತ್ರಿಯ ಘಟನೆ ಹೇಳಿದರು. ಅವರು ಸಹ ನಗಲಾರಂಭಿಸಿದರು. ಹಝ್ರತ್ ಮುನ್ಷಿ ಸಾಹೇಬರು ಮೊಹಮ್ಮದ್ ಚರಾಘ್ ಮತ್ತು ಮುಹಿನುದ್ದೀನ್ ಅವರಿಗೆ ಕರೆಯಿಸಿ ಮೌಲ್ವಿ ಸಾಹೇಬರ ಮುಂದೆ ನಿಲ್ಲಿಸಿದರು. ಆ ಮೌಲ್ವಿ ಸಾಹೇಬ್ ಇವರಿಬ್ಬರು ಉಲಮಗಳನ್ನು ನೋಡಿ ಹೊರಟು ಹೋದರು. ಒಂದು ದೊಡ್ಡ ಪಾತ್ರೆಯಲ್ಲಿ ಸಿಹಿ ತಂದರು ಮತ್ತು ತನ್ನ 12 ಸಂಗಡಿಗರೊಂದಿಗೆ ಹುಝೂರರ ಶುಭಹಸ್ಥದಲ್ಲಿ ಬಯ್ಯತ್ ಮಾಡಿದರು.

**(ತಾರೀಖ್ ಅಹ್ಮದಿಯತ್, ಸಂಪುಟ-1, ಪುಟ-472-475)**

********************

*(ಪುಟ 8ರ ಉಳಿದ ಭಾಗ)*

261. ಚೌಧರಿ ಗುಲಾಮ್ ಹಸನ್ ಸಫೀದ್ ಪೋಶ್ ಮುಹಾಜಿರ್ ಖಾದಿಯಾನ್ ಮುಹಲ್ಲ ದಾರುಲ್ ಫಝ್ಲ್ ಹಸನ್ ಮನ್‌ಝಿಲ್
262. ಚೌಧರಿ ಅಲಿ ಅಹ್ಮದ್ ಕೋಟ್ ಕರಮ್ ಬಖ್ಷ್ ಸಿಯಾಲ್ಕೋಟ್ ಜಿಲ್ಲೆ
263. ಮೆಹರ್ ಅಲಿ ಸಬ್ ಅಸಿಸ್ಟೆಂಟ್ ಸರ್ಜನ್ ಬಸಾಲ್ ರಾಜ್ಯ ಬಹಾವಲ್ಪೂರ್
264. ಡಾ॥ ನಝೀರ್ ಅಹ್ಮದ್ ಖಾನ್ ಗಗ್ಗೂ ಡಿಸ್ಪೆಂಸರಿ ಮನ್ಟ್‌ಗಮ್ರಿ ಸಡೋಅ ಹೋಶ್ಯಾರ್‌ಪುರ್
265. ಮಲಕ್ ಮುಹಮ್ಮದ್ ಇಸ್ಮಾಈಲ್ ಶ್ರೀ ಗೋವಿಂದಪುರ ಸೌದಾಗರ್ ಮವೇಶಿ ಬಿರಾದರ್ ಅಕ್ಬರ್ ಡಾ॥ ಮಲಕ್ ಮುಹಮ್ಮದ್ ರಮಝಾನ್
266. ಡಾ॥ ಮುಹಮ್ಮದ್ ಇಬ್ರಾಹೀಮ್ ಖಾನ್ ಬಸ್ತಿ ದಾನಿಶ್ಮಂದಾಂ ಜಾಲಂಧರ್
267. ಹಾಜಿ ಬಕಾಉಲ್ಲಾಹ್ ಅಕೌಂಟ್ ಆಫಿಸ್ ಭೋಪಾಲ್
268. ಅಝೀಝ್ ಬೇಗಮ್ ಅಹ್ಲಿಯ ಖಾನ್ ಸಾಹಿಬ್ ಬರ್ಕತ್ ಅಲಿ ಸಕ್ನ ಬಸ್ತಿ ಶೇಖ್ ಜಾಲಂಧರ್ ನಾಝಿರ್ ಸದರ್ ಅಂಜುಮನ್ ಅಹ್ಮದಿಯ ಖಾದಿಯಾನ್
269. ರಝಿಯ ಬೇಗಮ್ ಹಮ್ಶೀರ ಮೌಲವಿ ಮುಹಮ್ಮದ್ ಯಾಖುಬ್ ಮೌಲವಿ ಫಾಝಿಲ್ ಖಾದಿಯಾನ್
270. ಅನ್ವರ್ ಬೇಗಮ್ ಎಹ್ಲಿಯ ಮೌಲವಿ ಮುಹಮ್ಮದ್ ಯಾಖುಬ್ ಮೌಲವಿ ಫಾಝಿಲ್ ಖಾದಿಯಾನ್
271. ಹಿಕ್ಮತ್ ಬೇಗಮ್ ತಾಯಿ ಅಬ್ದುಲ್ ಮುಗ್ನಿ ಖಾನ್ ನಾಝಿರ್ ಸದರ್ ಅಂಜುಮನ್ ಅಹ್ಮದಿಯ ಸಕ್ನ ಖಾಏಮ್ ಗಂಜ್ ಫರ್ರುಖಬಾದ್ ಜಿಲ್ಲೆ
272. ಖಾನ್ ಗುಲಾಮ್ ಮುಹಮ್ಮದ್ ಖಾನ್ ಐ.ಎಸ್. ಮಿಯಾಂನವಾಲಿ
273. ಚೌಧರಿ ದಿಲ್ ಮುಹಮ್ಮದ್ ಮೌಲ್ವಿ ಫಾಝಿಲ್ ಮುಬಲ್ಲಿಗ್ ಖಾದಿಯಾನ್
274. ಮಿಯಾಂ ಅಲ್ಲಾಹ್ ದಿತ್ತ ವಾಲಿದ್ ಮಾಹಿಯ ಸಕ್ನ ಪಲ್ಲಾಃ ವಾಲ ಜಮ್ಮೂ ರಾಜ್ಯ
275. ಚೌಧರಿ ನೂರುದ್ದೀನ್ ಝೈಲ್ದಾರ್ ಚಕ್ 6/6-7ಮಂಟ್‌ಗಮ್ರಿ ಜಿಲ್ಲೆ ಮಳ ಝೌಜ್ಹಾನ್
276. ಫೈರೋಝ್ ಝಗರ್ ಮರ್‌ಹೂಮ್ ಕನದಿ ಹಾಜಿ ಖೈಲ್ ಮೌಝು ತೆಹ್ಕಾಲ್ ಬಲ ಪೇಶಾವರ್ ಜಿಲ್ಲೆ
277. ಖಾಝಿ ಮುಹಮ್ಮದ್ ರಶಿದ್ ಅಸಿಸ್ಟೆಂಟ್ ಫೇರೋಝ್ಪೂರ್ ಆರ್ಸ್ನಲ್
278. ಪೀರ್ ಸಲಾಹುದ್ದೀನ್ ಬಿ.ಎ ಪ್ಲೀಡರ್ ಫೈರೋಝ್‌ಪೂರ್
279. ತಾಯಿ ಮಸ್‌ಊದ್ ಅಹ್ಮದ್ ಅಮೃತ್ಸರಿ
280. ಸಹೋದರಿ ಮಸ್‌ಊದ್ ಅಹ್ಮದ್ ಅಮೃತ್ಸರಿ
281. ಸೀದಃ ಬೇಗಮ್ ಬಿನ್ತ್ ಗೌಸ್ ಹೈದರಬಾದ್
282. ಸಲೀಮ ಬೇಗಮ್ ಬಿನ್ತ್ ಸೇಠ್ ಮುಹಮ್ಮದ್ ಗೌಸ್ ಹೈದ್ರಬಾದ್ ದಕ್ಕನ್
283. ಅಮತುಲ್ ಹಫೀಝ್ ಬೇಗಮ್ ಬಿನ್ತ್ ಸೇಠ್ ಮುಹಮ್ಮದ್ ಗೌಸ್ ಹೈದ್ರಬಾದ್ ದಕ್ಕನ್
284. ಸೇಠ್ ಮುಹಮ್ಮದ್ ಆಝಮ್ ಹೈದ್ರಬಾದ್ ದಕ್ಕನ್
285. ಸಝೀಝ್ ಬೇಗಮ್ ಎಹ್ಲಿಯ ಸೇಠ್ ಮುಹಮ್ಮದ್ ಆಝಮ್ ಹೈದ್ರಬಾದ್

*(ಪುಟ ಸಂಖೆ 15 ರಲ್ಲಿ ಮುಂದುವರಿಸಲಾಗಿದೆ)*

# ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಸೂರ್ಯ, ಚಂದ್ರ ಗ್ರಹಣಗಳ ಭವಿಷ್ಯವಾಣಿಗಳ ಪ್ರಕಾಶದಲ್ಲಿ.

*ಹಾಫಿಝ್ ಸಯ್ಯದ್ ರಸೂಲ್ ನಿಯಾಝ್, ಮುಬಲ್ಲಿಗ್ ಸಿಲ್‌ಸಿಲ ನಝಾರತ್ ನಶ್‌ರೋ ಇಶಾಅತ್ ಖಾದಿಯಾನ್*

ಹಝ್ರತ್ ಅಖದಸ್ ಮುಹಮ್ಮದ್ ಮುಸ್ತಫಾ(ಸ) ಮುಸಲ್ಮಾನರ ದುಸ್ಥಿತಿ ಮತ್ತು ಇಸ್ಲಾಮ್ ಧರ್ಮದ ಅವನತಿ ಕುರಿತು ಮಾಡಿರುವ ಭವಿಷ್ಯವಾಣಿಯ ಜೊತೆಯಲ್ಲಿ ತನ್ನ ಸಮುದಾಯಕ್ಕೆ ಇಂತಹ ಕಷ್ಟಕಾಲದಲ್ಲಿ ಇಸ್ಲಾಂ ಧರ್ಮದ ಪುನಶ್ಚೇತನಕ್ಕಾಗಿ ಮತ್ತು ವಿಜಯಕ್ಕಾಗಿ ನೀಡಿದ್ದರು. ಆ ಮಹದಿಯನ್ನು ಗುರುತಿಸಲು ರಸೂಲುಲ್ಲಾಹ್(ಸ) ಕೆಲವು ದೃಷ್ಟಾಂತಗಳ ಬಗ್ಗೆಯೂ ವಿವರ ನೀಡಿದ್ದರು. ಏಕೆಂದರೆ ಆ ಮೂಲಕ ಮುಸಲ್ಮಾನರು ಆ ಇಮಾಮ್ ಮಹದಿಯವರ ಬೈಅತ್ ಮಾಡಿ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸುವಂತಾಗಲಿ ಎಂದು.

**ಸೂರ್ಯ ಚಂದ್ರ ಗ್ರಹಣಗಳ ಮಹೋನ್ನತವಾದ ಭವಿಷ್ಯವಾಣಿ**

ದಾರ್ ಖುತ್ನಿಯವರು ತಾನು ರಚಿಸಿದ ಹದೀಸ್ ಗ್ರಂಥ **"ಸುನನ್ ದಾರ್ ಖುತುನಿ"**ಯಲ್ಲಿ ಈ ಕೆಳಗಿನಂತೆ ವರದಿ ಮಾಡಿರುವರು. **ಇನ್ನ ಲಿಮಹ್‌ದಿಯಿನ ಆಯತೈನಿ ಲಮ್ ತಕೂನು ಮುನ್‌ಝು ಖಲಖಿಸ್ಸಮಾವಾತಿ ವಲ್‌ಅರ್‌ಝಿ, ಯನ್‌ಕಸಿಫುಲ್ ಖಮರು ಲಿಅವ್ವಲಿತಿ ಲೈಲತಿಮ್ಮಿನ್ ರಮಝಾನಿ, ವ ತನ್‌ಕಸಿಫುಶ್ಶಮ್‌ಸು ಫಿನ್ನಿಸ್‌ಫಿ ಮಿನ್‌ಹು, ವಲಮ್ ತಕೂನ ಮುನ್‌ಝು ಖಲಖಲ್ಲಾಹುಸ್ಸಮಾವಾತಿ ವಲ್‌ಅರ್ಝ್** (ಸುನನ್ ದಾರುಲ್ ಖುತ್‌ನು, ಕಿತಾಬುಲ್ ಈದೈನ್, ಸಫ ಸಲಾತುಲ್ ಖುಸೂಫಿ ವಲ್‌ಕುಸೂಫ್) ಅನುವಾದ: ಮುಹಮ್ಮದ್ ಬಿನ್ ಅಲಿ ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿದರು. ನಿಶ್ಚಯವಾಗಿಯೂ ನಮ್ಮ ಮಹದಿಯರ ಕುರಿತು ಎರಡು ದೃಷ್ಟಾಂತಗಳಿವೆ. ಅವು ಭೂಮ್ಯಾಕಾಶ ಸೃಷ್ಟಿಯಾದಾಗಿನಿಂದ ಇಲ್ಲಿಯವರೆಗೆ ಘಟಿಸಲಿಲ್ಲ. ರಮಝಾನಿನ ಪ್ರಾಥಮಿಕ ರಾತ್ರಿಗಳಲ್ಲಿ ಚಂದ್ರ, ಗ್ರಹಣ ಮತ್ತು ಅದರ ಅರ್ಧ ಭಾಗದಲ್ಲಿ ಸೂರ್ಯ ಗ್ರಹಣ, ಇವು ಭೂಮ್ಯಾಕಾಶ ಸೃಷ್ಟಿಯಾದಾಗಿನಿಂದ ಇಲ್ಲಿಯವರೆಗೂ ಘಟಿಸಲಿಲ್ಲ.

ಗತ ಗ್ರಂಥಗಳಲ್ಲಿಯೂ ಈ ದೃಷ್ಟಾಂತದ ಕುರಿತು ಭವಿಷ್ಯವಾಣಿಗಳಿವೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲೂ ಈ ದೃಷ್ಟಾಂತದ ವಿವರ ನೀಡಿದೆ. **ವ ಖಸಫಲ್ ಖಮರು. ವಜುಮಿಅಶ್ಶಮ್‌ಸು ವಲ್ ಖಮರು** (ಅಲ್‌ಖಿಯಾಮಹ್: 9,10) ಅಂದರೆ ಚಂದ್ರಗ್ರಹಣ ಉಂಟಾಗುವುದು, ಹಾಗೂ ಸೂರ್ಯ ಮತ್ತು ಚಂದ್ರ ಗ್ರಹಣಕ್ಕೆ ಸಂಬಂಧಿಸಿ, ಒಂದುಗೂಡಿಸಲ್ಪಡುವುದು.

ಅದಲ್ಲದೆ ಮುಸ್ಲಿಮರ ಎರಡು ದೊಡ್ಡ ಪಂಥಗಳಾದ ಶಿಯಾ ಮತ್ತು ಸುನ್ನಿ ಎರಡು ಹದೀಸು ಗ್ರಂಥಗಳಲ್ಲೂ ಚಂದ್ರ ಸೂರ್ಯ ಗ್ರಹಣದ ದೃಷ್ಟಾಂತವನ್ನು ಮಹದಿಯರ ಆಗಮನದ ದೃಷ್ಟಾಂತ ಎಂದು ಪರಿಗಣಿಸಿದೆ.

**ಸೂರ್ಯ ಚಂದ್ರ ಗ್ರಹಣ ಉಂಟಾಗುವಿಕೆ**

ಮುಸಲ್ಮಾನರು ವಿಶೇಷವಾಗಿ ಉಲಮಾಅಗಳು ಹಝ್ರತ್ ಮಸೀಹ್ ಮೌಊದ್(ಅ) ರನ್ನು ಧಿಕ್ಕರಿಸತೊಡಗಿದಾಗ ದೈವಿಕ ನೆರವಿಗಾಗಿ ಅವರು ಅತ್ಯಂತ ನಮ್ರತೆಯಿಂದ ಅಲ್ಲಾಹನ ಬಳಿ ಒಂದು ದೀರ್ಘವಾದ ದುಆ ಮಾಡಿದರು. (ನೂರುಲ್ ಹಖ್ ಭಾಗ, ರೂ. ಖ ಸಂ 8, ಪುಟ 184) ಈ ದುಆ ಮಾಡಿ ಇನ್ನು ಒಂದು ತಿಂಗಳು ಸಹ ಕಳೆದಿರಲಿಲ್ಲ. ಅಲ್ಲಾಹನು ಅವರ ಈ ದುಆವನ್ನು ಸ್ವೀಕರಿಸಿದನು ಮತ್ತು ಅವರ ಸತ್ಯತೆಯ ಪ್ರತೀಕವಾಗಿ ಸೂರ್ಯ, ಚಂದ್ರನನ್ನು ಎರಡು ದೈವಿಕ ದೃಷ್ಟಾಂತವನ್ನಾಗಿ ಸಾಕ್ಷ್ಯವಾಗಿಸಿದನು. ಅಂದ ಹಾಗೆ 14ನೇ ಶತಮಾನಕ್ಕೆ ಸರಿಯಾಗಿ ಚಂದ್ರಗ್ರಹಣಕ್ಕೆ ನಿಗದಿಯಾದ ತಾರೀಖುಗಳು (13,14,15) ಅದರಲಿ ಮೊದಲ ರಾತ್ರಿಯನ್ನು ಅಂದರೆ 13 ರಮಝಾನ್ 1311 ಹಿ. 21 ಮಾರ್ಚ್ 1894 ರಂದು ಗ್ರಹಣ ಉಂಟಾಯಿತು. ಮತ್ತು ಸೂರ್ಯ ಗ್ರಹಣಕ್ಕೆ ನಿಗದಿತ ತಾರೀಖುಗಳಲ್ಲಿ (27, 28, 29) ಮಧ್ಯದ ತಾರೀಖಿಗೆ ಅಂದರೆ 28 ರಮ್‌ಝಾನ್, 6 ಏಪ್ರಿಲ್ 1894 ರಂದು ಗ್ರಹಣ ಉಂಟಾಯಿತು. ಮುಂದಿನ ವರ್ಷ ಅಂದರೆ 1895 ರಲ್ಲಿ ಅದೇ ಮಹೋನ್ನತವಾದ ದೃಷ್ಟಾಂತವು ಅಮೇರಿಕಾದಲ್ಲೂ ಉಂಟಾಯಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ಅತ್ಯಂತ ದೃಢಚಿತ್ತದಿಂದ ತನ್ನ ಸತ್ಯಕ್ಕೆ ಸಾಕ್ಷ್ಯವಾಗಿಸಿದ ಈ ದೃಷ್ಟಾಂತವಾಗಿದೆ ಎನ್ನುತ್ತ ಬರೆದರು. "ಈ 13 ನೂರು ವರ್ಷಗಳಲ್ಲಿ ಹಲವಾರು ಮಹದಿ ಆಗುವ ದಾವೆಯನ್ನು ಹೂಡಿರುತ್ತಾರೆ. ಆದರೆ ಯಾರಿಗಾದರೂ ಈ ದೈವಿಕ ದೃಷ್ಟಾಂತ ಪ್ರಕಟವಾಗಲಿಲ್ಲ. ನನಗೆ ಆ ದೇವವಾಣಿ ಯಾರ ಕೈಯಲ್ಲಿ ನನ್ನ ಜೀವವಿದೆಯೋ. ಅವನು ತನ್ನ ಸತ್ಯತೆಗೋಸ್ಕರ ಈ ದೃಷ್ಟಾಂತ ಪ್ರಕಟಪಡಿಸಿರುವನು.

ನಾನು ಕಅಬದಲ್ಲಿ ನಿಂತು ಪ್ರಮಾಣ ವಹಿಸಿ ಹೇಳುವೆನು. ಈ ದೃಷ್ಟಾಂತದಿಂದ 14ನೇ ಶತಮಾನದ ನಿಗದಿಯು ಖಚಿತಗೊಂಡಿದೆ. ಏಕೆಂದರೆ ಈ ದೃಷ್ಟಾಂತವು ಒಬ್ಬ ವ್ಯಕ್ತಿಯ ಸತ್ಯಾಗ್ರಿ ಸಾಕ್ಷ್ಯ ರೂಪದಲ್ಲಿ ಪ್ರಕಟವಾಗಿದೆ ಎಂದರೆ ನಿಶ್ಚಿತವಾಯಿತು. ಹಝ್ರತ್ ರಸೂಲುಲ್ಲಾಹ್(ಸ) ಮಹದಿಯರ ಆಗಮನಕ್ಕಾಗಿ 14ನೇ ಶತಮಾನವೇ ನಿಗದಿಪಡಿಸಿದ್ದರು. (ತೊಹಫ ಗೊಲಡ್ವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–142)

ಅವರು ತನ್ನ ಕವನ ಸಂಕಲನದಲ್ಲಿ ಹೇಳುತ್ತಾರೆ.

**ಇಸ್ಮಊ ಸೌತಸ್ಸಮಾಅ ಜಾಅಲ್ ಮಸೀಹ್ ಜಾಅಲ್ ಮಸೀಹ್,**
**ನೀಝ್ ಬಶ್‌ನು ಅಝ್ ಝುಮೀನ್ ಆಮದ್ ಇಮಾಮ್ ಕಾಮ್ಗಾರ್**

**ಖಾದಿಯಾನಿನಲ್ಲಿ ಸೂರ್ಯ ಗ್ರಹಣದ ದೃಶ್ಯ**

ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತ ಪ್ರಕಟವಾದಾಗ ವಿಶೇಷವಾಗಿ ಮಕ್ಕಾ ನಿವಾಸಿಗಳು ಸಂತಸದಿಂದ ಬೀಗತೊಡಗಿದರು. ಈಗ ಇಸ್ಲಾಮಿನ ಉನ್ನತಿಯ ಪರ್ವ ಬಂದಿದೆ ಎಂದು. ಮತ್ತು ಇಮಾಮ್ ಮಹದಿಯರು ಆಗಮಿಸಿದ್ದಾರೆಂದು. ಅಷ್ಟೇ ಅಲ್ಲದೇ ಸರ್ವ ಇಸ್ಲಾಮಿ ರಾಷ್ಟ್ರಗಳಲ್ಲಿಯೂ ಸಂತಸವನ್ನು ಹಂಚಿಕೊಂಡರು. ಚಂದ್ರ ಗ್ರಹಣ ಉಂಟಾದ ನಂತರ ಸೂರ್ಯ ಗ್ರಹಣದ ವೀಕ್ಷಣೆಗಾಗಿ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರೊಂದಿಗೆ ಸೂರ್ಯ ಗ್ರಹಣ ನಿಮಿತ್ತ ನಮಾಝ್ ನಿರ್ವಹಿಸುವ ಇರಾದೆಯಿಂದ ಹಲವು ಸಹಾಬರು ಖಾದಿಯಾನ್ ಆಗಮಿಸಿದ್ದರು. ಅಂದ ಹಾಗೆ ಹಝ್ರತ್ ಮಿರ್ಝಾ ಅಯ್ಯೂಬ್ ಬೇಗ್ ಸಾಹಿಬ್ ಹೇಳುತ್ತಾರೆ.

"ರಮ್‌ಝಾನ್ ತಿಂಗಳಿನಲ್ಲಿ ಸೂರ್ಯ ಚಂದ್ರಕ್ಕೆ ಗ್ರಹಣ ಹಿಡಿಯುವ ಭವಿಷ್ಯವಾಣಿಯು ದಾರು ಖುತುನಿ ಇತ್ಯಾದಿ ಹದೀಸುಗಳಲ್ಲಿ ಮಹದಿಯ ದೃಷ್ಟಾಂತದ ನೆಲೆಯಲ್ಲಿ ವರ್ಣಿಸಲ್ಪಟ್ಟಿದೆ. ಮಾರ್ಚ್ 1894 ರಲ್ಲಿ ಮೊದಲು ಚಂದ್ರಕ್ಕೆ ರಮಝಾನ್ ತಿಂಗಳಿನಲ್ಲಿ ಗ್ರಹಣ ಹಿಡಿಯಿತು. ಅದೇ ರಮಝಾನಿನಲ್ಲಿ ಸೂರ್ಯಕ್ಕೆ ಗ್ರಹಣ ಹಿಡಿಯುವ ಸಮಯ ಸಮೀಪಕ್ಕೆ ಬಂದಾಗ ನಾವಿಬ್ಬರು ಸಹೋದರರು ಹಜ್‌ರತ್ ಮಸೀಹ್ ಮೌಊದ್(ಅ) ರವರ ಜೊತೆಯಲ್ಲಿ ಈ ದೃಷ್ಟಾಂತ ಕಾಣುವ ಇರಾದೆಯಿಂದ ಮತ್ತು ಸೂರ್ಯ ಗ್ರಹಣದ ನಮಾಝ್ ನಿರ್ವಹಿಸುವ ಉದ್ದೇಶದಿಂದ, ಶನಿವಾರ ರಾತ್ರಿಯಲ್ಲಿಯೇ ಹೊರಟು ಸುಮಾರು 11 ಗಂಟೆ ರಾತ್ರಿಗೆ ಬಟ್ವಾಲ ತಲುಪಿದೆವು ಮರು ದಿನ (6 ಏಪ್ರಿಲ್ 1814ಕ್ಕೆ) ಬೆಳ್ಳಬೆಳ್ಳಿಗ್ಗೆ ಗ್ರಹಣ ಹಿಡಿಯಲಿಕ್ಕಿತ್ತು. ಬಿರುಗಾಳೀ ಬೀಸುತ್ತಿತ್ತು. ಮೋಡಗಳು ಗರ್ಜಿಸುತ್ತಿದ್ದವು ಮತ್ತು ಬೆಳಕು ಮಿಂಚುತಿತ್ತು. ಗಾಳಿಯು ವೇಗವಾಗಿ ಬೀಸುತಿತ್ತು. ಮತ್ತು ಕಣ್ಣುಗಳಲ್ಲಿ ಮಣ್ಣು ಬೀಳುತಿತ್ತು. ಹೆಜ್ಜೆಗಳು ಮುಂದಿಡಲು ಕಷ್ಟವಾಗುತಿತ್ತು. ಗುಡುಗು ಮಿಂಚಿನಿಂದಾಗಿ ರಸ್ತೆ ಸರಿಯಾಗಿ ಕಾಣುತ್ತಿರಲಿಲ್ಲ. ಅದರ ಜೊತೆಯಲ್ಲಿ ಸ್ವಗ್ರಾಮದ ಸ್ನೇಹಿತ ಮೌಲ್ವಿ ಅಬ್ದುಲ್ ಅಲಿ ಸಾಹಿಬ್ ಸಹ ಇದ್ದರು. ಎಲ್ಲರು ನಿಶ್ಚಯ ಮಾಡಿಕೊಂಡರು. ಏನೇ ಆಗಲಿ ರಾತ್ರಿಯಲ್ಲಿಯೇ ಖಾದಿಯಾನಿಗೆ ತಲುಪಬೇಕು. ಅಂದ ಹಾಗೆ ಮೂವರು ಸೇರಿ ರಸ್ತೆಯಲ್ಲಿ ನಿಂತು ಅತ್ಯಂತ ಕಳಕಳಿಯಿಂದ ದುಆ ಮಾಡಿದರು. ಓ ಅಲ್ಲಾಹನೇ! ಭೂಮ್ಯಾಕಾಶಗಳ ಒಡೆಯ ನೀನು, ನಾವು ನಿನ್ನ ವಿನೀತ ದಾಸರಾಗಿದ್ದೇವೆ. ನಿನ್ನ ಮಸೀಹನ ದರ್ಶನ ಪಡೆಯಲು ಹೋಗುತ್ತಿದ್ದವು. ನಾವು ಕಾಲ್ನಡಿಗೆಯಲ್ಲಿ ನಡೆಯುತ್ತಿದ್ದೇವೆ. ಚಳಿಯೂ ಇದೆ, ನೀನೇ ನಮ್ಮ ಮೇಲೆ ಕರಣೆ ತೋರು. ನಮಗಾಗಿ ಮಾರ್ಗವನ್ನು ಸರಳವಾಗಿಸು ಮತ್ತು ಬಿರುಗಾಳಿಯನ್ನು ಈ ಎದುರಾಗಿ ಬೀಸುತ್ತಿರುವ ಗಾಳಿಯನ್ನು ದೂರ ಮಾಡು. ಇನ್ನು ಈ ಅಂತಿಮ ಪದಗಳು ಬಾಯಿಯಿಂದ ಹೊರಟಿದ್ದೆ ತಡ ಗಾಳಿಯು ತಮ್ಮ ದಿಕ್ಕು ಬದಲಿಸಿ ಎದುರಾಗಿ ಬರುವ ಬದಲು ನಮ್ಮ ಬೆನ್ನ ಹಿಂದಿನಿಂದ ಬರತೊಡಗಿತು. ಹೀಗೆ ಪ್ರಯಾಣದಲ್ಲಿ ನೆರವಾಗುವಂತಾಯಿತು. ಗಾಳಿಯಲ್ಲಿ ಹಾರಾಡಿ ಹೋಗುವಂತೆ ಭಾಸವಾಗುತಿತ್ತು. ಸ್ವಲ್ಪವೇ ಹೊತ್ತಿನಲ್ಲಿ ಕಾಲುವೆಗೆ ತಲುಪಿದೆವು. ಈ ಸ್ಥಳದಲ್ಲಿ ಮಳೆಯ ಕೆಲ ಹನಿಗಳು ಉದುರಿದವು ಕಾಲುವೆಯ ಬಳಿ ಒಂದು ಬಿಡಾರವಿತ್ತು. ಅದರಲ್ಲಿ ಹೋದೆವು ಆ ದಿನಗಳಲ್ಲಿ ಗುರುದಾಸಪುರ ಜಿಲ್ಲೆಯಲ್ಲಿ ರಸ್ತೆಗಳ ಮೇಲೆ ನೋಡಿದರೆ ಬಿಡಾರ ಖಾಲಿಯಿತ್ತು. ಅದರಲ್ಲಿ ಎರಡು ಸೆಗಣಿ ತಟ್ಟೆ ಮತ್ತು ಒಂದು ಇಟ್ಟಿಗೆ ಬಿದ್ದಿತ್ತು. ಪ್ರತಿಯೊಬ್ಬರು ಒಂದೊಂದನ್ನು ತಲೆದಿಂಬನ್ನಾಗಿ ಮಾಡಿಕೊಂಡು ನೆಲದ ಮೇಲೆಯೇ ಮಲಗಿದೆವು. ಸ್ವಲ್ಪ ಹೊತ್ತಿನಲ್ಲಿ ಕಣ್ಣು ತೆರೆದಾಗ ನಕ್ಷತ್ರಗಳು ಉದಯಗೊಂಡಿದ್ದವು. ಆಕಾಶ ನಿರಾಳವಾಗಿತ್ತು ಮತ್ತು ಗುಡುಗು ಮಿಂಚಿನ ಯಾವ ಕುರುಹ ಸಹ ಇರಲಿಲ್ಲ. ಹಾಗೆ ಮತ್ತೆ ಹೊರಟೆವು ಮತ್ತು ಮುಂಜಾವಿನಲ್ಲಿ ಹಜ್‌ರತ್ ಮಸೀಹ್ ಮೌಊದ್(ಅ) ರವರ ಜೊತೆಯಲ್ಲಿ ಊಟ ಮಾಡಿದೆವು.

ಮುಂಜಾನೆ ಹಝ್ರತ್ ಅಖದಸ್‌ರವರ ಜೊತೆಯಲ್ಲಿ ಕಸೂಫ್ ನಮಾಝ್ (ಸೂರ್ಯ ಗ್ರಹಣ ನಿಮಿತ್ತ ನಮಾಝ್) ನಿರ್ವಹಿಸಿದೆವು ಮೌಲ್ವಿ ಮುಹಮ್ಮದ್ ಅಹದಿಸನ್ ಸಾಹಿಬ್ ಅಮ್ರೋಹಿ ಮಸ್ಜಿದ್ ಮುಬಾರಕ್ಕಿನ ಮಾಳಿಗೆಯ ನೇತೃತ್ವ (ಇಮಾಮರ) ವಹಿಸಿಕೊಂಡು ನಮಾಝ್

ನಿರ್ವಹಿಸಿಕೊಟ್ಟರು.

ಸುಮಾರು ಮೂರು ಗಂಟೆಯವರೆಗೆ ಈ ನಮಾಝ್ ಜಾರಿಯಲ್ಲಿತ್ತು. ಹಲವು ಮಿತ್ರರು ಗಾಜಿನ ಮೇಲೆ ಮಸಿ ಹಾಕಿ ಗ್ರಹಣ ನೋಡುವ ತವಕದಲ್ಲಿದ್ದರು. ಇನ್ನೂ ಅಲ್ಪ ಮಾತ್ರದ ಗ್ರಹಣ ಕಾಣತೊಡಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಯಾರೊ ಒಬ್ಬರು ಗ್ರಹಣ ಹಿಡಿದ ಸುದ್ದಿ ತಿಳಿಸಿದರು. ಅವರು ಆ ಗಾಜಿನಿಂದ ನೋಡಿದರು. ಇದು ತುಂಬ ಅಂಶಿಕ ಗ್ರಹಣವಾಗಿದೆ. ಜನರಿಗೆ ಸರಿಯಾಗಿ ನೋಡಲು ಸಾಧ್ಯವಾಗಲಿಕ್ಕಿಲ್ಲ. ಹೀಗೆ ಇಇದೊಂದು ಮಹೋನ್ನತವಾದ ಭವಿಷ್ಯವಾಣಿ ಸಂಶಯಕ್ಕೆ ಒಳಗಾಗಬಹುದೇನು ಎಂದು ವ್ಯಥೆ ಪಟ್ಟರು. ಹುಝೂರ್(ಅ) ಹಲವು ಸಲ ಇದನ್ನು ಪುನರುಚ್ಚರಿಸಿದರು. ಅದರ ಸ್ವಲ್ಪ ಹೊತ್ತಿನಲ್ಲೇ ಗ್ರಹಣ ಹೆಚ್ಚಾಗತೊಡಗಿತು. ಎಲ್ಲಿಯವರೆಗೆಂದರೆ ಸೂರ್ಯದ ಬಹುಭಾಗವು ಕತ್ತಲೆಯಿಂದ ಆವರಿಸಿತು. ಆಗ ಹುಝೂರ್(ಅ) ಹೇಳೀದರು. ನಾವು ಇಂದು ಸ್ವಪ್ನದಲ್ಲಿ ಈರುಳ್ಳೀ ಕಂಡಿದ್ದೆವು. ಅದರರ್ಥ ದು:ಖ ಎಂದಾಗಿರುತ್ತದೆ. ಅಂದರೆ ಪ್ರಾರಂಬಿಕ ಅವಸ್ಥೆಯು ಅದಕ್ಕೆ ಕಾರಣವಾಯಿತು. (ಅಸ್‌ಹಾಬೆ ಅಹ್ಮದ್, ಸಂಪುಟ–1, ಪುಟ–92–94, ವರದಿಗಾರರು ಹಝ್ರತ್ ಮಿರ್ಝ ಅಯ್ಯೂಬ್ ಬೇಗ್ ಸಾಹಿಬ್(ರ))

**ಸೂರ್ಯ ಗ್ರಹಣ ದೃಷ್ಟಾಂತವನ್ನು ಕಂಡು ಬೈಅತ್ ಮಾಡಿರುವ ಸಹಾಬರುಗಳ (ರ) ವಿವರ**

ಇಮಾಮ್ ಮಹದಿಯ ಸತ್ಯತೆಯ ನಿಮಿತ್ತ ಈ ಭವಿಷ್ಯವಾಣಿ ತುಂಬ ಪ್ರಸಿದ್ಧಿ ಪಡೆದಿತ್ತು. ಅಂದ ಹಾಗೆ ಈ ದೃಷ್ಟಾಂತ ಗೋಚರ ಆದ ಮೇಲೆ ಡಾಂಬಿಕ ಮೌಲ್ವಿಗಳು ತಮ್ಮ ನಡತೆಯ ಪ್ರಕಾರ ತಿರಸ್ಕಾರ ಮಾಡ ಹೊರಟರು. ಮತ್ತು ಸಾರ್ವಜನಿಕವಾಗಿ ಮುಸಲ್ಮಾನರಿಗೆ ಈ ಸತ್ಯತೆಯಿಂದ ದೂರ ಮಾಡಲು ಭಗಿರಥ ಪ್ರಯತ್ನ ಮಾಡಿದರು. ಆದರೂ ಸಾವಿರಾರು ಸಾತ್ವಿಕ ಜನರು ಅಹ್ಮದಿಅತ್ ಸ್ವೀಕರಿಸುವ ಭಾಗ್ಯ ಪಡೆದರು. ಅಂದ ಹಾಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನಮಗಾಗಿ ಸೂರ್ಯ ಚಂದ್ರ ಗ್ರಹಣ ಉಂಟಾಯಿತು ಮತ್ತು ನುರಾರು ಜನರು ಅದನ್ನು ಕಂಡು ನಮ್ಮ ಜಮಾಅತಿಗೆ ಸೇರಿದರು. ಈ ಸೂರ್ಯ ಚಂದ್ರ ಗ್ರಹಣದಿಂದಾಗಿ ನಮಗೆ ಸಂತೋಷ ಹಾಗೂ ವಿರೋಧಿಗಳಿಗೆ ಅವಮಾನ ದೊರೆಯಿತು. ಅವರು ಪ್ರಮಾಣ ಮಾಡಿ ಹೇಳಬಹುದೆ. ನಾವು ಮಹದಿ ಮೌಊದ್ (ವಾಗ್ದತ್ತ ಮಹದಿ) ಯ ದಾವೆ ಹೂಡುವ ಸಮಯ ಈ ಸೂರ್ಯ ಚಂದ್ರ ಗ್ರಹಣ ದೃಷ್ಟಾಂತ ಉಂಟಾಗಲೆಂದು ಅವರ ಹೃದಯಗಳು ಬಯಸುತ್ತಿತ್ತು ಎಂದು, ಅರಬ್ ಆದ ಕಾರಣದಿಂದಲೇ ಅವರ ಮನಗಳು ನೊಂದಿವೆ ಮತ್ತು ಅದರಲ್ಲಿ ಅವರು ತಮ್ಮ ಅವಮಾನವನ್ನು ಕಾಣುತಿದ್ದಾರೆ. (ಅನ್ವರುಲ್ ಇಸ್ಲಾಮ್, ರೂಹಾನಿ ಖಝಾಈನ್ ಸಂಪುಟ–9, ಪುಟ–33)

ಈ ಭವ್ಯವಾದ ದೃಷ್ಟಾಂತವನ್ನು ಕಂಡು ಅಥವಾ ಆ ಕಾರಣದಿಂದ ಅಹ್ಮದಿಯತ್ತಿಗೆ ಸೇರಿರುವ ಸಾತ್ವಿಕ ಮನುಷ್ಯರ ಅಸಂಖ್ಯಾತ ಘಟನೆಗಳು ಅಹ್ಮದಿಯತ್ತಿನ ಇತಿಹಾಸದಲ್ಲಿ ಕಾಣಸಿಗುತ್ತವೆ. ಉದಾಹರಣೆಗಾಗಿ ಎರಡು ಘಟನೆಗಳು ಈ ಕೆಳಗಿನಂತಿವೆ.

(1) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಸ್ವಯಂ ತನ್ನ ಅನುಭವ ವಿವರಿಸುತ್ತ ಹೇಳುತ್ತಾರೆ.

"ತುಂಬ ಹಳೆಯ ಮಾತಾಗಿದೆ. ಸುಮಾರು 1966ರ ಈ ಮಾತು. ನಾನು ಸರ್‌ಗೋಧ ಕ್ಷೇತ್ರದಲ್ಲಿ ವಖ್ಫೆ ಆರ್‌ಝಿಗೋಸ್ಕರ ಹೋದಾಗ ಒಂದು ದೂರದ ಊರಿಗೆ ಹೊಗಿದ್ದೆ. ಅಲ್ಲಿ ಓರ್ವ ವೃದ್ದೆಯೊಡನೆ ಭೇಟಿಯಾಯಿತು ನಾನು ಅವರಿಗೆ ನಾವು ರಬ್ವಾದಿಂದ ಬಂದಿರುತ್ತೇವೆ. ಅಹ್ಮದಿಯರಾಗಿದ್ದೇವೆ ಎಂದು ಪರಿಚಯ ಮಾಡಿಕೊಟ್ಟಾಗ ಅವರು ಹೇಳಿದರು. ನಾನು ಅಹ್ಮದಿ ಆಗಿದ್ದೇನೆ. ನಾವು ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತವನ್ನು ನೋಡಿ ಅಹ್ಮದಿಯಾಗಿರುತ್ತೇವೆ. ನಾನು ಸಣ್ಣವಳಾಗಿದ್ದೆ. ನನ್ನ ಹೆತ್ತವರು ಆ ಸಮಯದಲ್ಲಿದ್ದರು. ಅ ಕ್ಷೇತ್ರಲ್ಲಿ ಬರೀ ಕಾಡಿತ್ತು. ಹಳ್ಳಿಯಾಗಿತ್ತು. ಹಳ್ಳಿಯ ಅನಕ್ಷರಸ್ತರು ಸಹ ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತವನ್ನು ನೋಡಿ ಅಹ್ಮದಿಯರಾದರು. ಅಂದರೆ ಅಲ್ಲಾಹನು ಹಲವರಿಗೆ ಆ ಕಾಲದಲ್ಲಿಯೂ ಈ ದೃಷ್ಟಾಂತದ ಮೂಲಕ ಮಾರ್ಗದರ್ಶನವನ್ನು ದಯಪಾಲಿಸಿದನು." (ಖುತ್‌ಬ ಜುಮುಅ, 30 ಜೂನ್ 2006)

(2) ಹಝ್ರತ್ ಗುಲಾಂ ಮುಹಮ್ಮದ್ ಸಾಹಿಬ್ (ರ) ಹೇಳುತ್ತಾರೆ. ಈ ವಿನೀತನ ಊರಿನಲ್ಲಿ ಮೊದಮೊದಲು ಮೌಲ್ವಿ ಬದ್ರುದ್ದೀನ್ ಸಾಹಿಬ್ ಎಂಬುವರು ಇರುತ್ತಿದ್ದರು. ಆಗ ನನ್ನ ವಯಸ್ಸು ಸುಮಾರು 15 ವರ್ಷಗಳಾಗಿದ್ದಿತು. ನಾನು ಮೌಲ್ವಿ ಬದ್ರುದ್ದೀನ್ ಸಾಹಿಬರ ಮನೆಯ ಮುಂದೆ ಅವರ ಜೊತೆಯಲ್ಲಿ ನಿಂತುಕೊಂಡಿದ್ದೆ. ಹಗಲಿನಲ್ಲಿ ಸೂರ್ಯ ಗ್ರಹಣವಾಯಿತು. ಮೌಲ್ವಿ ಸಾಹಿಬ್ ಹೇಳಿದರು. ಸುಬ್‌ಹಾನಲ್ಲಾಹ್! ಮಹದಿ ಸಾಹಿಬರ ಕುರುಹುಗಳು ಗೋಚರವಾಗಿವೆ. ಅವರ ಆಗಮನದ ಸಮಯ ಬಂದಿದೆ. ಇನ್ನು ಸ್ವಲ್ಪ ಅವಧಿಯ ನಂತರ ಮೌಲ್ವಿ ಸಾಹಿಬ್ ಅಹ್ಮದಿಯಾದರು. ಮೌಲ್ವಿ ಸಾಹಿಬ್ ಅತ್ಯಂತ ಆತ್ಮೀಯರು ಮತ್ತು ಸಜ್ಜನರಾಗಿದ್ದರು. ಅವರು ತಮ್ಮ ಮಾತಾಪಿತರನ್ನು ಮತ್ತು ಪತ್ನಿಯನ್ನು ಒಂದು ವರ್ಷದ ಸಮೀಪ ಪ್ರಯತ್ನಪಟ್ಟು ಅಹ್ಮದಿಯರನ್ನಾಗಿಸಿದರು. (ಖುತ್‌ಬ ಜುಮುಅ, 20–03–2015)

**ಸೂರ್ಯ ಚಂದ್ರ ಗ್ರಹಣ ದೃಷ್ಟಾಂತ ನಿರಾಕರಣೆ, ಅಲ್ಲಾಹನ ಪ್ರಕೋಪಕ್ಕೆ ಆಹ್ವನಿಸಿದಂತೆ**

ಈ ಮಹೋನ್ನತವಾದ ದೃಷ್ಟಾಂತ ಪ್ರಕಟವಾಗಿ ಇಂದಿಗೆ ಸುಮಾರು 125 ವರ್ಷಗಳು ಸಂದಿವೆ. ಆದರೆ ಅಕಟಾಕಟ. ಇಂದು ಸಹ ಮುಸಲ್ಮಾನರು ಮತ್ತು ಇತರ ಧರ್ಮಿಯರು ಇನ್ನು ಸಹ ವಾಗ್ದತ್ತ ಜಗದ್ದೋದ್ಧಾರಕನ ನಿರೀಕ್ಷೆಯಲ್ಲಿದ್ದಾರೆ. ಅಂದ ಹಾಗೆ ಅಲ್ಲಾಹನ ಆ ವಾಗ್ದತ್ತನ ನಿರಾಕರಣೆಯು ಅಲ್ಲಾಹನ ಪ್ರಕೋಪ ಆಹ್ವಾನಿಸಿದಂತೆಯೇ ಸರಿ. ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಹೇಳುತ್ತಾರೆ. ಇವೆಲ್ಲ ದೃಷ್ಟಾಂತಗಳು ಪೂರ್ಣಗೊಳ್ಳುತ್ತದೆಯಾದರೆ ಇನ್ನೇಕೆ ಮಸೀಹನ ನಿರೀಕ್ಷೆಯಲ್ಲಿದ್ದಾರೆ. ಮಸೀಹನನ್ನು ಏಕೆ ಅಂತ್ಯ ದಿನಕ್ಕೆ ಜೋಡಿಸುತ್ತಿದ್ದಾರೆ. ಕೇವಲ ಒಂದು ಹಟವಿದೆ. ಅಲ್ಲಾಹನೇ ಅವರಿಗೆ ಸದ್ಬುದ್ಧಿ ನೀಡಬೇಕು. ಮಸೀಹನ ಆಗಮನದ ದೃಷ್ಟಾಂತ ಕುರಿತು ಒಂದು ಹದೀಸಿದೆ ಆ ಹದೀಸು ಹೇಗಿದೆ ಎಂದರೆ ಅದನ್ನು ಎಂದೆಂದೂ ಅಹ್ಮದಿಯರು ಅವರ ಮುಂದೆ ಪ್ರಸ್ತುತಪಡಿಸುತ್ತಾರೆ. ವಿರೋದಿಯರ ಬಳಿ ಅದನ್ನು ರದ್ದುಪಡಿಸಲು ಆಗುತ್ತಿಲ್ಲ. ಆ ದೃಷ್ಟಾಂತವಾಗಿದೆ. ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತ, ಆದುದರಿಂದ ಈ ದೃಷ್ಟಾಂತವನ್ನು ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಯ ರೂಪದಲ್ಲಿ ಪ್ರಸ್ತುತ ಪಡಿಸುತ್ತೇವೆ. ಅಂದ ಹಾಗೆ ಮಹಾತ್ಮರುಗಳು ಕುರ್‌ಆನ್ ಹದೀಸುಗಳಿಂದ ಜ್ಞಾನ ಪಡೆದು ಹೇಳಿದರು. ವಾಗ್ದತ್ತ ಮಸೀಹನ ಆಗಮನ ಕಾಲ ಅದಾಗಿರುವುದು, ಗತ ಉಲಮಾಗಳು ಮತ್ತು ಪ್ರಸಕ್ತ ಉಲಮಾಗಳು ಹೇಳಿದರು. ಈ ಕಾಲದ ಆಗುಹೋಗುಗಳು, ಮುಸಲ್ಮಾನರ ದುಸ್ಥಿತಿ ನಬಿಯನ್ನು ಬಯಸುವಂತಿದೆ. ಪವಿತ್ರ ಖುರ್‌ಆನ್ ದೃಷ್ಟಾಂತಗಳನ್ನು ವಿರಿಸಿದೆ. ಅದರಲ್ಲಿ ಕೆಲವನ್ನು ನಾನು ವಿವರಿಸಿದ್ದೇನೆ. ಅಂತಿಮ ಕಾಲಕ್ಕೆ ಸಂಬಂದಿಸಿದ ಮಾತುಗಳಾಗಿವೆ. ಇವೆಲ್ಲಾ ಮಾತುಗಳಾಗುತ್ತಿವೆ ಎಂದರೆ ತಿಳಿದುಕೊಳ್ಳಬಹುದು. ಇದು ವಾಗ್ಧತ್ತ ಮಸೀಹನ ಕಾಲವೇ ಆಗಿದೆ ಎಂದು. ಮತ್ತೆ ಅತ್ಯಂತ ಸ್ಪಷ್ಟವಾದ ಭವ್ಯವಾದ ಒಂದು ದೃಷ್ಟಾಂತ ಅದನ್ನು ಪಂಥ್ವಾನ ರೂಪದಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಅದರ ವಿವರ ಇಮಾಮ್ ಬಾಖಿರ್ ಹೀಗೆ ನೀಡಿದರು. ಅದು ಮಸೀಹ್ ಮೌಊದ್ (ವಾಗ್ದತ್ತ ಮಸೀಹ್) ನ ಕಾಲದಲ್ಲಿ ಉಂಟಾಗುವ ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತವಾಗಿದೆ.

ಹೀಗಿರುವಾಗ ಇನ್ನು ವಾಗ್ದತ್ತ ಮಸೀಹನ ಆಗಮನದ ಕಾಲ ಬರಲಿಲ್ಲ ಎನ್ನುವುದು ಅಲ್ಲಾಹನ ಪ್ರಕೋಪಕ್ಕೆ ಕರೆ ನೀಡಿದ ಮಾತಾಗುವುದು."
(ಖುತ್‌ಬ ಜುಮಾ 13 ಫೆಬ್ರವರಿ 2006, ಖುತ್‌ಬಾತೆ ಮಸ್ರೂರ್, ಸಂಪುಟ–4, ಪುಟ–72)

ಆಕಾಶವನ್ನು ನೀನು ನನಗಾಗಿ ಸಾಕ್ಷಿಯನ್ನಾಗಿ ಮಾಡಿದೆ
ನನಗಾಗಿ ಚಂದ್ರ ಸೂರ್ಯ ಗ್ರಹಣ ಹಿಡಿಯುವಂತಾಯಿತು.
ನಿರ್ಮಲ ಮನಸ್ಸು ಹೊಂದಿವರಿಗೆ ಹೆಚ್ಚಿನ ಸಾಕ್ಷ್ಯಗಳ ಅವಶ್ಯಕತೆಯಿರುವುದಿಲ್ಲ.
ದೇವಭಯಯುಳ್ಳವರಿಗೆ ಒಂದೇ ಒಂದು ದೃಷ್ಟಾಂತ ಸಾಕಾಗಿರುತ್ತದೆ.
ಲೋಕದಲ್ಲಿ ಇಂತಹ ಸುಳ್ಳುಗಾರನಿದ್ದರೆ ಅದರ ಪುರಾವೆ ಒದಗಿಸಿ ಓ ಜನರೇ
ನನ್ನಂತೆ ಅವನಿಗೆ ಅವನ ಪಕ್ಷದಲ್ಲಿ ಪದೇ ಪದೇ ಪುಷ್ಟಿ ದೊರೆಯುಂತಾದರೆ

ಪ್ರಾರ್ಥನೆಯಿದೆ. ಅಲ್ಲಾಹನು ಮುಸಲ್ಮಾನರಿಗೆ ಮತ್ತು ಇತರ ಧರ್ಮಿಯರಿಗೂ ಸಹ ಈ ಮಹೋನ್ನತವಾದ ದೃಷ್ಟಾಂತವನ್ನು ಅರಿಯಲು ಮತ್ತು ವಾಗ್ಧತ್ತ ಜಗದ್ದುದ್ಧಾರಕನನ್ನು ಸ್ವೀಕರಿಸುವ ಭಾಗ್ಯ ದೊರೆಯುವಂತಾಗಲಿಯೆಂದು. **ಆಮೀನ್**

*************

**Love for All, Hatred for None**

**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

# ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ ಪೂರ್ವಿಕ ಮಹಾತ್ಮರುಗಳ ದೃಷ್ಟಿಯಲ್ಲಿ

ಮಾಮೂನ್ ರ್‍ರಶೀದ್ ತಬ್ರೇಝ್, ಅಹ್ಮದಿಅತ್ ಇತಿಹಾಸ ವಿಭಾಗ ಖಾದಿಯಾನ್

ಲೋಕದಲ್ಲಿ ಯಾವಾಗಲೆಲ್ಲ ವಾಗ್ದತ್ತ ಪ್ರವಾದಿ ಅಥವಾ ಸಂದೇಶವಾಹಕರು ಬರುವರೋ ಅವರ ಆಗಮನದ ಕುರಿತು ಅಲ್ಲಾಹನು ಅವರು ಆಗಮಿಸುವ ಮುಂಚೆಯೇ ತಮ್ಮ ಸಾತ್ವಿಕ ದಾಸರಿಗೆ ಅದರ ಸೂಚನೆ ನೀಡಿರುತ್ತಾನೆ. ಈ ಸೂಚನೆ ಸಮಾಚಾರಗಳನ್ನು ಅಲ್ಲಾಹನ ಸಜ್ಜನ ಪುರುಷರು ಮುಂಬರುವ ಪೀಳಿಗೆಗೋಸ್ಕರ ಅದನ್ನು ಭವಿಷ್ಯವಾಣಿಗಳ ರೂಪದಲ್ಲಿ ಸುರಕ್ಷಿತಗೊಳಿಸಿರುತ್ತಾರೆ. ಆ ಭವಿಷ್ಯವಾಣಿಯಲ್ಲಿ ವಾಗ್ದತ್ತ ಪ್ರವಾದಿಯ ಆಗಮನದ ಸಮಯ ಮತ್ತು ಸ್ಥಳದ ಬಗ್ಗೆಯೂ ಮಾಹಿತಿ ನೀಡಿರುತ್ತಾರೆ. ಅದಲ್ಲದೇ ಆ ಭವಿಷ್ಯವಾಣಿಗಳಲ್ಲಿ ವಾಗ್ದತ್ತ ಕಾಲದ ದೃಷ್ಟಾಂತಗಳು ಮತ್ತು ಲಕ್ಷಣಗಳ ಬಗ್ಗೆಯೂ ವಿವರಿಸಿರುತ್ತಾರೆ. ಬೈಬಲ್‌ನಲ್ಲಿ ವಿವಿಧೆಡೆ ಹಜ್‌ರತ್ ಈಸಾ(ಅ) ರವರ ಬಗ್ಗೆಯೂ ಮತ್ತು ನಮ್ಮ ಪ್ರೀತಿಯ ಒಡೆಯರಾದ, ನೇತಾರರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಬಗ್ಗೆಯೂ ಇಸ್ರೇಲಿನ ಪ್ರವಾದಿಗಳ ಭವಿಷ್ಯವಾಣಿಗಳು ಲಭಿಸುತ್ತದೆ. ರಸೂಲುಲ್ಲಾಹ್(ಸ) ತಮ್ಮ ಸಮುದಾಯದ ಉಲಮಾಅ (ಮತಪಂಡಿತರ ಬಗ್ಗೆ) ಗಳ ಬಗ್ಗೆ ಹೀಗೆ ಹೇಳಿದರು. ಉಲಮಾಅ ಅಂದರೆ ನನ್ನ ಜನಾಂಗದ ಉಲಮಾಅಗಳು ಬನಿ ಈಸ್ರಾಯೀಲರ ಪ್ರವಾದಿಗಳ ಹಾಗೆ ಇರುವರು. ರಸೂಲುಲ್ಲಾಹ್(ಸ) ರವರ ಸಮುದಾಯದಲ್ಲಿ ಗತಿಸಿದ ಮಹಾತ್ಮರುಗಳು ಆಗಮಿಸಲಿರುವ ಮಸೀಹ್ ವ ಮಹದಿ(ಅ) ರವರ ಕುರಿತು ಅವರ ಬರುವಿಕೆಯ ಮುಂಚೆಯೇ ಬನೀ ಈಸ್ರಾಯೀಲರ ಪ್ರವಾದಿಗಳು ಮಾಡಿದ ಭವಿಷ್ಯವಾಣಿಗಳ ಪ್ರಕಾಶವೇ ಭವಿಷ್ಯವಾಣಿಗಳನ್ನು ಮಾಡಿರುವರು. ಆ ಭವಿಷ್ಯವಾಣಿಗಳು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮಸೀಹ್ ಮೌಊದ್(ಅ) ರವರ ಆಗಮನದಿಂದ ಅವರ ಸತ್ಯತೆಯ ಪ್ರಕಾಶಿಸುವ ಸೂರ್ಯನಂತೆ ಪ್ರಕಟವಾಯಿತು. ಮತ್ತು ಅವರ ಸತ್ಯತೆಯ ಮೇಲೆ ಒಂದು ದೃಷ್ಟಾಂತವಾಗಿ ಪರಿಣಮಿಸಿತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಹಲವು ದೈವಿಕ ಸ್ವಪ್ನಗಳನ್ನು ಪಡೆದ ಮಹನಿಯರಾದ ಮುಸಲ್ಮಾನರ ಸಂಖ್ಯೆ ಸಾವಿರಕ್ಕಿಂತಲೂ ಹೆಚ್ಚಾಗಬಹುದು. ತಮ್ಮ ದಿವ್ಯ ಸ್ವಪ್ನಗಳ ಮೂಲಕ ಮತ್ತು ಅಲ್ಲಾಹನ ಗ್ರಂಥ ಪವಿತ್ರ ಖುರ್‌ಆನ್‌ನಿಂದ ಜ್ಞಾನ ಪಡೆದು ಒಮ್ಮತದಿಂದ ದೃಢಪಡಿಸಿದರು. ಮಸೀಹ್ ಮೌಊದ್ ಅವರ ಆಗಮನ 14ನೇ ಶತಮಾನದ ಪ್ರಾರಂಭದ ಅವಧಿ ಮೀರಲಿಕ್ಕಿಲ್ಲ. ಹೀಗಿರುವಾಗ ಅಲ್ಲಾಹನ ಅನುಗ್ರಹ ಪಡೆದ ದಿವ್ಯ ಸ್ವಪ್ನಗಳನ್ನು ಪಡೆದ ಒಂದು ದೊಡ್ಡ ತಂಡ ಅವರಲ್ಲಿ ಪ್ರಾಥಮಿಕ ಕಾಲದವರು ಮತ್ತು ಅಂತ್ಯ ಕಾಲದವರು ಸೇರಿರುತ್ತಾರೆ. ಅವರೆಲ್ಲರೂ ಸುಳ್ಳುಗಾರರಾಗಲು ಸಾಧ್ಯವಿಲ್ಲ ಮತ್ತು ಅವರ ಅನಿಸಿಕೆಗಳು ಸುಳ್ಳಾಗಲಾರದು. (ತೊಹಫ ಗೋಲ್ಡವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–326)

1. ಆ ಸಾತ್ವಿಕ ಮಹಾತ್ಮರುಗಳಲ್ಲಿ ಒಬ್ಬರಾದ ಅಲ್ಲಾಮ ಅಬ್ದುಲ್ ವಹಾಬ್ ಅಶ್ವರಾನಿ(ರ) 976 ಹಿ ಅವರು ತನ್ನ ಗ್ರಂಥ **"ಅಲ್‌ಯುವಾಖೀತ್ ವಲ್ ಜವಾಹಿರ್"**ನಲ್ಲಿ ಅರುಹಿದರು: **ಮೌಲಿದುಹೂ ಲೈಲತನ್ನಿಸ್‌ಫಿ ಮಿನ್ ಶಬಾನ ಸನತನ್ ಖಮ್‌ಸೀನ ವ ಮಿಅತೈನಿ ಬಅದಲ್ ಅಲ್‌ಫಿ** ಅಂದರೆ ಇಮಾಮ್ ಮಹದಿಯರ ಜನನ 1250 ಹಿಜರಿಯಲ್ಲಿ ಸಂಭವಿಸುವುದು. (ನೂರುಲ್ ಅಬ್ಸಾರ್ ಫೀ ಮನಾಖಿಬ್ ಆಲಿ ಬೈತುನ್ನಬಿಲ್ ಮುಖ್ತಾರ್)

2. 12ನೇ ಶತಮಾನದ ಮುಜದ್ದಿದ್ ಹಝ್ರತ್ ಶಾಹ್ ವಲಿಯುಲ್ಲಕಹ್ ಮುಹದ್ದಿಸ್ ದೆಹಲ್ವಿ(ರ) ಅವರಿಗೆ ಅಲ್ಲಾಹನು ಅರುಹಿದರು. ಅಲ್‌ಮಹದಿಯ ತಹಯ್ಯಾ ಅಲ್ ಖುರೂಜಿ "ಅಂದರೆ ಇಮಾಮಿ ಮಹದಿ ಬರಲು ಸಿದ್ಧರಿದ್ದಾರೆ. (ತಫಹಿಮಾತ್ ಇಲಾಹಿಯ, ಸಂಪುಟ–2, ಪುಟ–123).

ನವಾಬ್ ಸಿದ್ಧೀಕ್ ಹಸಬ್ ತನ್ನ ಗ್ರಂಥ ಹಜರಲ್ ಕರಾಮ ಪೀ ಆಸಾರಲ್ ಖಿಯಾಮಹ್ ಪುಟ 394 ರಲ್ಲಿ ಇಮಾಮ್ ಮಹದಿ(ಅ) ರವರ ಆಗಮನ ಸಮಯದ ಬಗ್ಗೆ ಬರೆದಿದ್ದಾರೆ. ಪರ್ಷಿಯನ್ ಭಾಷೆಯ ಉರ್ದು ಅನುವಾದ ಇದಾಗಿದೆ. "ಗೋವಿಂದ್ ಶಹ್‌ವಲಿಲಿಲ್ಲಾಹ್ ಮುಹದ್ದಿಸ್ ದೆಹಲ್ವಿ (ರ) ಆಗಮಿಸುವ ತಾರೀಖ್ ಉರ್ದು ಪದ್ದು "ಚರಾಗ್ ದೀನ್" ಎಂದು ಮತ್ತು ಜುಮುಅ ಸಂಖ್ಯೆಯ ಪ್ರಕಾರ "ಯಕ್ ಹಝಾರ್ ರೋ ಸದ್ ಶಸಕ್ತ್ ವ ಹೂಕ್ತ್ ಶವದ್" ಅಂದರೆ ಹಜ್‌ರತ್ ಶಹ್ ವಲಿಲಿಲ್ಲಾಹ್ ಮುಹದ್ದಿಸ್ ದೆಹಲ್ವಿ ಅವರು ಇಮಾಮ್ ಮಹದಿ(ಅ) ರವರ ಆಗಮನ ತಾರೀಖ್ "ಚರಾಗ್ ದೀನ್' ಪದಗಳೊಡನೆ ವ್ಯಕ್ತಪಡಿಸಿದ್ದಾರೆ. ಅದು ಅಬ್‌ಜದ್ ಅಕ್ಷರ ಪ್ರಕಾರ 1268 ಆಗುತ್ತದೆ.

3. ದೆಹಲಿ ಹಳ್ಳಿಗಳಲ್ಲಿ ಸುಮಾರು ಎಂಟು ನೂರು ವರ್ಷಗಳ ಹಿಂದೆ ಒಬ್ಬ ಮಹಾನ್ ಮತ್ತು ದಿವ್ಯ ಸ್ವಪ್ನಧಾರಿಗಳು ಮತ್ತು ಪವಾಡ ಪುರುಷರು ಹಝ್ರತ್ ನಿಯಮತುಲ್ಲಾಹ್ ಶಾಹ್‌ವಲಿ(ರ) ಅಗಲಿದ್ದಾರೆ. ಅವರ ಸುಪ್ರಸಿದ್ಧ ಖಸೀದದಲ್ಲಿ ಈ ಅಂತ್ಯಕಾಲದ ಅವಸ್ಥೆಗಳ ಕುರಿತು ವಿವರ ದೊರೆಯುತ್ತದೆ. ಅವರು ಹೇಳುತ್ತಾರೆ.

ಮಹದಿಯೆ ವಖ್ತ್ ವ ಈಸಾಯೆ ದೌರಾಂ
ಹರ್ ದೋರಾ ಶಹ್‌ಸವಾರ್ ಮೀಬೀನಂ.

ಅಂದರೆ ಆ ಸಮಯದ ಮಹದಿ ಮತ್ತು ಈಸ ಅವರನ್ನು ಕುದುರೆ ಸವಾರರಾಗಿದ್ದು ಕಾಣುತ್ತಿದ್ದೇವೆ. (ಅರ್‌ಬಯೀನ್ ಫೀ ಅಹ್ವಾಲುಲ್ ಮಹ್‌ದೀಯೀನ್, ಮುದ್ರಣ 1268ಹಿ "ಅಸ್ಲಿ ಖಸೀದ" ಪಾಕಿಸ್ತಾನ ಲಾಹೋರ್)

4. ಹಝ್ರತ್ ಶೇಖ್ ಮುಹಿಯುದ್ದೀನ್ ಇಬ್ನುಲ್ ಅರಬಿ(ರ) ದಿವಂಗತರು 635ಹಿ. ಅವರ ಹಿಜರಿ 628 ರಲ್ಲಿ ಹೇಳಿದರು:

**ವಯಕೂನು ಝುಹೂರಹೂ ಬಅದ ಮಝೀಯ್ಯಿಂ ಖ.ಫ.ಜ ಮಿನಲ್ ಹಿಜ್‌ರತಿ** ಅಂದರೆ ಇಮಾಮ್ ಮಹದಿಯರ ಆಗಮನ ಸನ್ ಹಿಜರಿಯ ಪ್ರಕಾರ (ಖ.ಫ.ಜ ಉರ್ದು ಅಕ್ಷರಗಳ) ಪ್ರಕಾರ ಕಳೆದ ನಂತರ ಬರುವರು. (ಮುಖದ್ದಮ ಇಬ್ನು ಖುಲ್ದೂನ್, ಪುಟ–354, ಅನುವಾದ ಮೌಲಾನ ಸೀದ್ ಹುಸೈನ್ ಖಾನ್ ಯೂಸಫಿ ಫಾಝಿಲ್)

(ಖ.ಫ.ಜ) ಸಾಂಖಿಕ ಬಲ ಅಬ್‌ಜದ್ ಅಕ್ಷರ ಪ್ರಕಾರ 683 ಆಗುತ್ತದೆ. ( ಖ (2) 600, ಫ ಅ 80. ಜಅ 3) ಈ ನುಡಿಯು 628 ಹಿಜರಿಯದ್ದಾಗಿದೆ. ಕ್ರಮಶಃ 628 ರನ್ನು 683 ಕ್ಕೆ ಜೋಡಿಸಿದರೆ ಅಂದರೆ ಸಂಕಲನ ಮಾಡಿದರೆ ಒಟ್ಟು ಸಂಖ್ಯೆ 1311 ಆಗುತ್ತದೆ. ಅದು ಮಹದಿಯರ ಚಂದ್ರ ಸೂರ್ಯ ಗ್ರಹಣ ದೃಷ್ಠಾಂತ ಪ್ರಕಟವಾಗುವ ವರ್ಷವಾಗಿರುತ್ತದೆ.

5. ಇರಾನ್ ದೇಶದ ಮಹಾತ್ಮರೊಬ್ಬರು ಶೇಖ್ ಆಲಿ ಅಸ್ಗರ್ ಬರೋಜರ್ದಿ ಅವರು ಮೇಧಾವಿ ಮತ್ತು ಹಲವು ಗ್ರಂಥಗಳ ಲೇಖಕರಾಗಿದ್ದರು. ತನ್ನ ಗ್ರಂಥ "ನೂರುಲ್ ಅನ್ವಾರ್" ಪುಟ 215 ರಲ್ಲಿ ಬರೆದಿದ್ದಾರೆ.

ಅಂದರ್ "ಸರ್ಗಿ ಅಗರ್ ಬಮಾನಿ ಝಿಂದಾ
ಮುಲ್ಕ್ ವ ಮಿಲ್ಲತ್ ವ ದೀನ್ ಬರ್‌ಗರ್‌ದೊ

ಅಂದರೆ "ಸರ್ಗಿ" ವರ್ಷದಲ್ಲಿ ನೀನು ಜೀವಂತವಾಗಿದ್ದಲ್ಲಿ ದೇಶ ಆಡಳಿತ ಹಾಗೂ ಧರ್ಮದಲ್ಲಿ ಒಂದು ಕ್ರಾಂತಿಯನ್ನು ಕಾಣಬಹುದಾಗಿದೆ. ಸರ್ಗಿ ಅಂಕೆ ಸಂಖ್ಯೆಗನುಗುಣವಾಗಿ ಅಬ್‌ಜದ್ ಪ್ರಕಾರ 1290 ಆಗುತ್ತದೆ. (ಇಮಾಮ್ ಮಹದಿ ಕಾ ಝುಹೂರ್, ಮುಹಮ್ಮದ್ ಅಸದುಲ್ಲಾಹ್ ಕಶ್ಮೀರಿ, ಪುಟ–417)

6. ಖ್ವಾಜ ಹಸನ್ ನಿಝಾಮಿ ಅವರು ಅರಬ್ ದೇಶಗಳ ಪ್ರವಾಸಕ್ಕೆ ಹೊರಟ ಸಮಯ ಅಲ್ಲಿಯ ಉಲಮಾಅಗಳು ಇಮಾಮ್ ಮಹದಿಯರ ನಿರೀಕ್ಷೆಯಲ್ಲಿದ್ದ ಕುರಿತು ಬರೆಯುತ್ತಾರೆ:

1330 ಹಿಜರಿ ಸತ್ ಇದು ಭವಿಷ್ಯವಾಣಿಗಳ ಪ್ರಕಾರ ಹಝ್ರತ್ ಇಮಾಮ್ ಮಹದಿಯರ ಆಗಮನದ ವರ್ಷವಾದರೆ ಅಚ್ಚರಿಯ ವಿಷವೇನಲ್ಲ. ಆ ಸಮಯ ಇನ್ನು ಬಂದಿಲ್ಲ. ಅಂದರೂ 40 ಹಿಜರಿಯವರೆಗೆ ಆಗಮನ ದೃಢವಿದೆ. ಏಕೆಂದರೆ ಹಲವು ಮಹಾತ್ಮರುಗಳ ಭವಿಷ್ಯವಾಣಿಗಳನ್ನು ಕೂಡಿ ಹಾಕಿದರೆ ಎಲ್ಲರ ಒಮ್ಮತದ ನಿರ್ಧಾರವು 40 ರವರೆಗಿದೆ. (ಶೇಖ್ ಸನೂಸಿ, ಔರ್ ಝುಃಊರೆ ಮಹದಿ ಆಖಿರ್ ಝಮಾನ್, ಕೊನೇಯ ಪುಟ)

7. ಹಝ್ರತ್ ಹಾಫಿಝ್ ಉರ್‌ಖುರ್‌ದಾರ್ ಖಾನ್(ರ) ಸಿಯಾಲ್ಕೋಟಿನ ಓರ್ವ ಸಜ್ಜನ ಪುರುಷರು ಅಗಲಿದ್ದಾರೆ. ಮಸೀಹ್ ಮೌಊದ್ ರವರ ಆಗಮನ ಕುರಿತು ಹೇಳುತ್ತಾರೆ.

ಪಚ್ಚೆ ಇಕ್ ಹಝೂರ್ ವೆ ಗುಝ್‌ರೆ ತಿರಾಸಿ ಸಾಲ್
ಈಸಾ ಝೀಹಿರ್ ಹೋ ಸಿಯಾ ಕುರ್ಸೀ ಅದಲ್ ಕಮಾಲ್

ಅಂದರೆ ಹಿಜರಿ ವರ್ಷದ 1300 ವರ್ಷಗಳ ಪೂರ್ಣ ಕಳೆದರೆ ಆಗ ಹಝುರತ್ ಈಸಾ(ಅ) ಆಗಮಿಸುವರು. ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಹಝ್ರತ್ ಹಾಫಿಝ್ ಬರ್‌ಖುರ್ ದರ್ ಸಾಹಿಬ್ ಈಸಾ ಅವರ "ಜಹೂರ್" ಆಗಮನವನ್ನು ಒಪ್ಪುತ್ತಾರೆ ಹೊರತು ಆಕಾಶದಿಂದ ಅವತರಿಸುವರು ಎಂದಲ್ಲ.

8. ಸುಪ್ರಸಿದ್ಧ ಶಿಯಾ ಮಹಾತ್ಮರೊಬ್ಬರು ಹಝ್ರತ್ ಅಬೂ ಸಯೀದ್ ಖಾನಮ್ ಹಿಂದಿ ಅಗಲಿದ್ದಾರೆ. ಅವರು ತಮ್ಮ ದಿವ್ಯಸ್ವಪ್ನ ಒಂದರಲ್ಲಿ ಹಝ್ರತ್ ಇಮಾಮ ಮಹದಿಯರ ದರ್ಶನ ಪಡೆದಿದ್ದರು. ಅವರು ತಮ್ಮ ಎಲ್ಲಾ ದಿವ್ಯ

ಸ್ವಪ್ನವನ್ನು ವಿವರಿಸಿದ ಅಂತ್ಯದಲ್ಲಿ ಹೇಳುತ್ತಾರೆ. **"ಕುಲ್ಲು ಝಾಲಿಕ ಬಿಕಲಾಮಿ ಅಲ್‌ಹಿಂದ"** (ಸಾಫಿ ಶರಹ ಉಸೂಲ್ ಕಾಫಿ, ಕಿತಾಬುಲ್ ಹುಜ್ಜ, ಬಾಬ್ ಮೋಲದ್ ಸಾಹಿಬ್ ಅಝ್ಝುಮಾನ್, ಭಾಗ–2,3, ಪುಟ–304) ಅಂದರೆ ದಿವ್ಯ ಸ್ವಪ್ನದಲ್ಲಿ ಹಝ್ರತ್ ಇಮಾಮ್ ಮಹದಿಯರೊಡನೆ ಆದ ಎಲ್ಲ ವಾರ್ತಾಲಾಪಗಳು ಭಾರತೀಯ ಭಾಷೆಯಾಗಿತ್ತು. (ಇಮಾಮ್ ಮಹದಿ ಕಾ ಝುಹರ್, ಪುಟ–363)

ಅಂದ ಹಾಗೆ ಹಜ್‌ರತ್ ಮಸೀಹ್ ಮೌಊದ್(ಅ) ರವರ ಮಾತೃ ಭಾಷೆ ಪಂಜಾಬಿ ಭಾಷೆ ಆಗಿತ್ತು. ಆದರೆ ಅದರಲ್ಲಿ ಭಾರತದಲ್ಲಿ ಹೆಚ್ಚು ಪ್ರಚಲಿತವಿರುವ ಭಾಷೆ ಉರ್ದುವಿನೆಡೆ ಸಂಕೇತವಾಗಿದೆ. ಅವರ ಹೆಚ್ಚಿನ ಸಾಹಿತ್ಯವು ಉರ್ದು ಭಾಷೆಯಲ್ಲಿಯೇ ಇದೆ.

9. ಇನ್ನೋರ್ವ ಮಹಾತ್ಮರು ಸೂಫಿ ಹಝ್ರತ್ ಶೇಬುಲ್ ಹಸನ್ ಅಲ–ಇರಾಕಿ ಅವರು "ಲಿಗ್ಗಾಯತುಲ್ ಮಖ್‌ಸೂದ್" ಗ್ರಂಥದಲ್ಲಿ ಬರೆಯುತ್ತಾರೆ.

ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ. ನಾನು ಒಂದು ಸಂಜೆ ಯೌವನ ಸ್ಥಿತಿಯಲ್ಲಿ "ಜಾಮಿಯ ಬನೀ ಉಮ್ಮಯ" ಪ್ರವೇಶಿಸಿದೆ. ಅಲ್ಲಿ ಒಬ್ಬ ವ್ಯಕ್ತಿಯನ್ನು ಕುರ್ಚಿಯ ಮೇಲೆ ಕುಳಿತು ಮಹದಿ ಮತ್ತು ಅವರ ಆಗಮನದ ಕುರಿತು ಮಾತುಕತೆಯನ್ನು ಕೇಳಿದೆನು. ಅಂದಿನಿಂದ ನನ್ನ ಹೃದಯದಲ್ಲಿ ಮಹದಿ ಅವರ ಪ್ರೀತಿ ನಾಟಿದಂತಾಗಿದೆ ಮತ್ತು ನಾನು ದುಆ ಮಾಡತೊಡಗಿದೆ. ಅಲ್ಲಾಹನು ಅವರನ್ನು ಕಾಣುವಂತೆ ಮಾಡಲಿ ಎಂದು. ಹೀಗೆ ಒಂದು ವರ್ಷದವರೆಗೆ ದುಆ ಮಾಡುತ್ತ ಇದ್ದೆ. ಒಂದು ದಿನ ನಾನು ಮಗ್ರೀಬ್ ನಮಾಝ್ ನಂತರ ಮಸೀದಿಯಲ್ಲಿಯೇ ಇದ್ದೆ. ತಕ್ಷಣದಿಂದಾಗಿ ಒಬ್ಬನು ನನ್ನ ಬಳಿ ಬಂದ. ಅವನು ಶಿರದ ಮೇಲೆ ಅರಬಿಯೇತರ ಪಗಡಿ ಧರಿಸಿದ್ದನು ಮತ್ತು ಒಂಟೆಯ ಕೂದಲುಗಳ ಜುಬ್ಬವಿತ್ತು. ಅವನು ತನ್ನ ಕೈಗಳಿಂದ ನನ್ನ ಹೆಗಲನ್ನು ಮುಟ್ಟಿದ ಮತ್ತು ನಿನ್ನೊಡನೆ ಹೇಳಿದನು. ನಾನು ಭೇಟಿಯಾಗುವ ಅವಶ್ಯಕತೆ ನಿನಗೆ ಏಕಿದೆ. ನಾನು ಹೇಳಿದೆ. ನೀವು ಯಾರು. ಅವರು ಹೇಳಿದರು. ನಾನು ಮಹದಿ ಆಗಿದ್ದೇನೆ. ಅಂದ ಹಾಗೆ ನಾನು ಅವರ ಕೈಗೆ ಮುತ್ತನ್ನಿಟ್ಟೆ. (ಗ್ವಾಯತುಲ್ ಮಕ್ಸೂದ್, ಸಂಪುಟ–2, ಪುಟ–81)

ಇದರಲ್ಲಿ ಆಗಮಿಸುವವರು ಅಜಮಿಯಾಗಿರುವರು ಎಂಬ ಸೂಚನೆ ಇದೆ. ಈ ಮಾತನ್ನು ಹಿಂದಿನ ಮಾತಿಗೆ ಹೋಲಿಕೆ ಮಾಡಿ ನೋಡಿದರೆ ವಾಗ್ದತ್ತ ಇಮಾಮರು ಭಾರತದಲ್ಲಿಯೇ ಪ್ರಕಟವಾಗುವರು ಎಂಬ ಸ್ಪಷ್ಟವಾದ ಸೂಚನೆಯನ್ನು ಮೊದಲೇ ಕೊಡಲಾಗಿದೆ.

10. ಹಝ್ರತ್ ಮುಹಿಯುದ್ದೀನ್ ಇಬ್ನು ಅರಬಿ(ರ) ಅವರು ಕುರಿತು ಬರುತ್ತದೆ. ಅವರು ಹಝ್ರತ್ ರಸೂಲುಲ್ಲಾಹ್(ಸ) ರವರ ನುಡಿಯ ಪ್ರಕಾರ ಅವರಿಗೆ ದಿವ್ಯ ಸ್ವಪ್ನದಲ್ಲಿ ಅರುಹಿದರು. ಒಂದು ಗ್ರಂಥ ಫಸೂಸುಲ್ ಹೂಕಮ್ ರಚಿಸಿದರು. ಅದರಲ್ಲಿ ಭವಿಷ್ಯವಾಣಿ ನುಡಿದರು. ವಾಗ್ದತ್ತನು ಖಾತಮಲ್ ಅವ್‌ಲಿಯಾ ಆಗಿರುವನು ಮತ್ತು ತನಾಮ್ (ಅವಳಿಯಾಗಿ) ಜನಿಸುವನು. ಅವನಿಗಿಂತ ಮೊದಲು ಹೆಣ್ಣು ಮಗು ಹುಟ್ಟುವುದು ಮತ್ತೆ ಅವನ ಜನನವಾಗುವುದು.

ಭವಿಷ್ಯವಾಣಿಯಲ್ಲಿ ಹೇಳಲಾಗಿದೆ. ವಾಗ್ದತ್ತನು ಖಾತಮಲ್ ಅವಲಾದ್ ಆಗಿರುವನು. ಖಾತಮಲ್ ಅವ್‌ಲಾದ್ ಅರ್ಥ ಖಾತಮಲ್ ಅವ್‌ಲಿಯಾ ಎಂದಾಗಿದೆ. ಎರಡನೆಯದಾಗಿ ಅವನು ಅವಳಿಯಾಗಿ ಜನಿಸುವನು ಎಂದಿದೆ. ಅವನಿಗಿಂತ ಮುಂಚೆ ಆತನಿಗೆ ತಂಗಿ ಹುಟ್ಟುವಳು ಮತ್ತು ಅವನ ಜನ್ಮಸ್ಥಳ ಚೀನಾ ಆಗಿರುವುದು. ಅರಬಿಯಲಿ 'ಅಸ್ಸೀನ್ ಪದ ಬಳಕೆಯಾಗಿದೆ. ಈ ಅರಬಿ ಪದವು ಅರಬಿಯೇತರ ಕ್ಷೇತ್ರಕ್ಕೆ ಅಥವಾ ದೂರದ ಪ್ರದೇಶಕ್ಕೆ ಬಳಸುತ್ತಾರೆ. ಇಲ್ಲಿಯೂ ಸಹ ವಾಗ್ಧತ್ತ ಪ್ರವಾದಿ ಮಸೀಹರು ಮಹದಿಯ ಜನ್ಮಸ್ಥಳವು ಅರಬೇತರ ಕ್ಷೇತ್ರ ಅಥವಾ ದೂರದ ಪ್ರದೇಶ ಎಂದೇ ಆಗಿದೆ. (ಫಸೂಸುಲ್ ಹಕಮ್, ಪುಟ–36, ಅನುವಾದ ಮೌಲಾನ ಮುಹಮ್ಮದ್ ಮುಬಾರಕ್ ಅಲಿ ಹೈದ್ರಬಾದಿ, ಮುದ್ರಣ 1308ಹಿ)

ಹಝ್ರತ್ ಮುಹಿಯುದ್ದೀನ್ ಇಬ್ನು ಅರಬಿ(ರ) ಅವರದ್ದೇ. ಇನ್ನೊಂದು ಗ್ರಂಥ ಫುತುಹಾತೆ ಮಕ್ಕಿಯಾ" ಎಂದಿದೆ. ಆ ಗ್ರಂಥದ ಮೂರನೆಯ ಸಂಪುಟದಲ್ಲಿ ವಾಗ್ದತ್ತರ ಸಹಾಬ ಹಾಗೂ ನಿಕಟವರ್ತಿಗಳ ಬಗ್ಗೆ ವಿವರಿಸಲಾಗಿದೆ. ಬರೆಯುತ್ತಾರೆ. ಅವರೆಲ್ಲರೂ ಅರಬೇತರಾಗುವರು. ಅವರಲ್ಲಿ ಯಾರು ಅರಬರು ಇರುವುದಿಲ್ಲ. ಆದರೆ ಅವರು ಅರಬಿಯಲ್ಲಿ ಮಾತನಾಡುವರು. ಅವರಿಗೆ ಒಬ್ಬ ಹಾಫಿಝ್ ಖುರ್‌ಆನ್ ಇರುವನು. ಅವನು ಅವರ ವಂಶದವನಾಗಿರುವುದಿಲ್ಲ. ಏಕೆಂದರೆ ಅವನು ಎಂದೂ ಅಲ್ಲಾಹನನ್ನು ತಿರಸ್ಕರಿಸಿಲ್ಲ. ಅವನು ಆ ವಾಗ್ದತ್ತನ ಆಪ್ತ ಮಂತ್ರಿಯಾಗಿರುವನು ಮತ್ತು ಅತ್ಯುತ್ತಮ ಪ್ರಮಾಣಿಕನಾಗಿರುವನು." (ಫುತುಹಾತೆ ಮಕ್ಕಿಯಾ ಸಂ.3 ಪುಟ 364 ರಿಂದ 365)

ಸುಬ್‌ಹಾನಲ್ಲಾಹ್! ಈ ಭವಿಷ್ಯವಾಣಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಸಹಾಬರ ಕುರಿತು ವಿವರವಿದೆ. ಅಲ್ಲೆ ಹಝ್ರತ್ ಹಕೀಮುಲ್–ಉಮ್ಮತ್ ಮೌಲಾನ ನೂರುದ್ದೀನ್ ಸಾಹಿಬ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರೆಡೆ ಸ್ಪಷ್ಟವಾದ ಸಂಕೇತವಿದೆ.

11. ಮುಲ್ತಾನಿನ ಓರ್ವ ಸುಪ್ರಸಿದ್ಧ ವಲಿಯುಲ್ಲಾಹ್, ಮಹಾತ್ಮರು ಹಝ್ರತ್ ಶೇಖ್ ಮುಹಮ್ಮದ್ ಅಬ್ದುಲ್ ಅಝೀಝ್ ಪಹಾರ್ವಿ (ರ) ಅವರು ದೇವವಾಣಿ ಪಡೆದು ಮಸೀಹ್ ಮೌಊದ್(ರ) ರವರ ಸತ್ಯತೆಯ ಕುರುಹಾದ (ದೃಷ್ಟಾಂತ) ಚಂದ್ರ, ಸೂರ್ಯ, ಗ್ರಹಣ ಉಂಟಾಗುವ ಕುರಿತು ಭವಿಷ್ಯವಾಣಿ ಹೇಳಿದರು.

'ದರ್ ಸನ್ "ಗ್ವಾಫಿ" ದೋ ಖುರ್‌ಆನ್ ಖಾಹದ್ ಬವದ್' ಅರ್ಥಾತ್ 1311 ಹಿಜರಿಯಲ್ಲಿ ಚಂದ್ರ, ಸೂರ್ಯನಿಗೂ ಒಂದೇ ತಿಂಗಳಿನಲ್ಲಿ ಗ್ರಹಣ ದಜ್ಜಾಲಿನ ಮಿಥ್ಯತೆ ಅರುಹಲು ಕಾರಣವಾಗಬಹುದು. ಈ ಭವಿಷ್ಯವಾಣಿಯಲ್ಲಿ ಚಂದ್ರ, ಸೂರ್ಯನಿಗೆ 1311 ಹಿಜರಿಯಲ್ಲಿ ಗ್ರಹಣವಾಗುವುದರ ಕುರಿತು ಉಲ್ಲೇಖಿಸಲಾಗಿದೆ. ಅದೇ ತರಹದಲ್ಲಿ ಅದೇ ಪ್ರಕಾರ ಅಂದರೆ 1894 ರಲ್ಲಿ ಈ ದೃಷ್ಟಾಂತ ಗೋಚರವಾಗಿದೆ.

ಇವು ಮುಹಮ್ಮದಿಯ ಸಮುದಾಯದ ಮಹಾತ್ಮರುಗಳ ಮಹೋನ್ನತವಾದ ಭವಿಷ್ಯವಾಣಿಗಳಾಗಿವೆ. ಅವು ಹಜ್‌ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್ ಮಸೀಹ್ ಮೌಊದ್(ಅ) ವ ಮಹದಿ ಮಹ್ಮದ್(ಅ) ರವರ ಸತ್ಯತೆಯು ಲೋಕದ ಮುಂದೆ ಎಂದೆಂದಿಗೂ ಪ್ರಸ್ತುತಪಡಿಸುತ್ತದೆ. ಅಲ್ಲಾಹನು ಆ ಮಹಾತ್ಮರುಗಳು ವಿವರಿಸಿದ ಎಲ್ಲಾ ಭವಿಷ್ಯವಾಣಿಗಳ ಮೇಲೆ ದೃಢ ವಿಶ್ವಾಸ ಹೊಂದುವಂತೆ ಮಾಡಲಿ ಮತ್ತು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಯನ್ನು ಲೋಕವು ತಂಡೋಪಗಳ ತಂಡವಾಗಿ ಸ್ವೀಕರಿಸುವಂತೆ ದಯಪಾಲಿಸಲಿ. ಆಮೀನ್.

***********

*(ಪುಟ 11ರ ಉಳಿದ ಭಾಗ)*

286. ಅಮತುಲ್ ಹೈ ಬೇಗಮ್ ಬಿನ್ತ್ ಸೇಠ್ ಮುಹಮ್ಮದ್ ಗೌಸ್ ಹೈದ್ರಬಾದ್ ದಕ್ಕನ್
287. ಮಹ್ಮೂದ ಬೇಗಮ್ ಎಹ್ಲಿಯ ಮುಹಮ್ಮದ್ ಮುಈಸುದ್ದೀನ್ ಹೈದ್ರಬಾದ್
288. ಅಬ್ದುಲ್ ಅಝೀಝ್ ಸಕ್ನ ಚಕ್ ಸಿಕಂದರ್ ಗುಜ್ರಾತ್ ಜಿಲ್ಲೆ
289. ಡಾ॥ ನಝೀರ್ ಅಹ್ಮದ್ ತಂದೆ ಸರ್‌ದಾರ್ ಅಬ್ದುರ್ರಹ್ಮಾನ್ ಆಫ್ರಿಕ
290. ಮುಹಮ್ಮದ್ ಬಖ್ಶ್ ಅಹ್ಮದಿ ಸನ್ನೋರಿ ಪಟ್ಯಾಲ ರಾಜ್ಯ
291. ಚೌಧರಿ ಕರೋಮುದ್ದೀನ್ ಭಟ್ಟಿ ಚಕ್ 313/69 ಪೆನ್‌ಶನರ್ ಮುಹಾಜಿರ್ ಖಾದಿಯಾನ್
292. ಮುಹಮ್ಮದ್ ಶಫೀ ವಲ್ದ್ ಶೇಖ್ ಮೀರ್ ಮುಹಮ್ಮದ್ ನೌಶೇಹ್ರ ಕಕ್ಕೆ ಝಾಇಯಾಂ ಸಿಯಾಲ್ಕೋಟ್ ಜಿಲ್ಲೆ
293. ಅಲ್ಲಾಹ್ ಜವಾಯಾ ಅಹ್ಮದಿ ಚಿನ್ಯೋಟ್
294. ಮರಿಯಮ್ ಖಾತೂನ್ ಪತ್ನಿ ದಿವಂಗತ ಮೌಲವಿ ಅಲ್ಲಾಹ್ ದಿತ್ತ ಸಾಹಿಬ್ ಜಮ್ಮೂ ಮುಹಾಜಿರ್ ಖಾದಿಯಾನ್
295. ಸರ್‌ದಾರ್ ಬಶಾರತ್ ಅಹ್ಮದ್ ಆಫ್ರಿಕ ಇಬ್ನೆ ಮಾಸ್ಟರ್ ಅಬ್ದುರ್ರಹ್ಮಾನ್ ಸಾಹಿಬ್ ಬಿ.ಎ ಖಾದಿಯಾನ್
296. ಡಾ॥ ಫತಹ್ ಉದ್ದೀನ್ ಅಹ್ಮದಿ ಜಾಂಗ್ಪೂರಿ ಖಾದಿಯಾನ್
297. ಮರಿಯಮ್ ಶಾಹ್‌ನವಾಝ್ ಖಾನ್ ಬಿನ್ತ್ ಮಿಯಾಂ ಅಬ್ದುರ್ರಝ್ಝಾಖ್ ಸಿಯಾಲ್ಕೋಟಿ
298. ಬಿಬಿ ನಸೀಮ ಖಾತೂನ್ ಜಿದ್ದಹ್ ಮಾನ್ಯ ಹಝ್ರತ್ ಸಾರಹ್ ಬೇಗಮ್ ಸಾಹಿಬ(ರ) ಭಾಗಲ್ಪೂರ್ ಬಿಹಾರ್
299. ಶೇಖ್ ಅಬ್ದುಲ್ಲಾಹ್ ಸ್ಕಾಟ್‌ಲೇಂಡ್
300. ಅಝೀಝ್ ಬಾನು ಬಿನ್ತ್ ಮಿನ್ತಿ ಫಯಾಝ್ ಅಲಿ ಮೀರತ್ ಜಿಲ್ಲೆ
301. ಬಾಬು ಖುಶೀ ಮುಹಮ್ಮದ್. ಪಾರ್ಸಲ್ ಕ್ಲರ್ಕ್ , ಗುಜ್ರಾಂವಾಲ ಜಿಲ್ಲೆ
302. ನುಸ್ರತ್ ಸುಲ್ತಾನ ಬೇಗಮ್ ಸಾಹಿಬ ಗುಜ್ರಾತಿ ಲಾಹೋರಿ
303. ಮುನ್‌ಶಿ ಅಬ್ದುಲ್ ಕರೀಮ್ ಮೌಝು ನೌಶೇಹ್ರ ಕಕ್ಕೆ ಝಾಇಯಾಂ ಸಿಯಾಲ್ಕೋಟ್ ಜಿಲ್ಲೆ
304. ಸಯ್ಯದ್ ಮುಹಮ್ಮದ್ ಹುಸೇನ್ ಶಾಹ್ ವಲ್ದ್ ಅತಾ ಮುಹಮ್ಮದ್ ಶಾಹ್ ಮುಖ್ತಾರ್ ಆಮ್ ಸಾಹಿಬ್ಝಾದ್ಗಾನ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ವಾಲಿದ್ ಡಾ॥ ಮುಹಮ್ಮದ್ ಜೀ ಅಹ್ಮದಿ
305. ಕೆಪ್ಟನ್ ಡಾ॥ ಮುಹಮ್ಮದ್ ಜೀ ಅಹ್ಮದಿ ವಲ್ದ್ ಸಯ್ಯದ್ ಮುಹಮ್ಮದ್ ಹುಸೇನ್ ಶಾಹ್ ಮೆಡಿಕಲ್ ಆಫಿಸರ್ ನನ್‌ಕಾನ ಸಾಹಿಬ್ ಶೇಖುಪುರ ಜಿಲ್ಲೆ
306. ಬರ್‌ಕತ್ ಉನ್ನಿಸ ಬೇಗಮ್ ಎಹ್ಲಿಯ ಸಯ್ಯದ್ ಮುಹಮ್ಮದ್ ಹುಸೇನ್ ಶಾಹ್ ಮುಖ್ತಾರ್ ಆಮ್ ಸಾಹಿಬ್‌ಝಾದ್ಗಾನ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ವಾಲಿದ್ ಡಾ॥ ಮುಹಮ್ಮದ್ ಜಿ ಅಹ್ಮದಿ

***************

## ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ, ನ್ಯಾಯಾಧೀಕರಣ ಹಾಗೂ ತಿರ್ಪುಗಾರನ ನೆಲೆಯಲ್ಲಿ

ಲಈಖ್ ಅಹ್ಮದ್ ಡಾರ್, ಮುರಬ್ಬಿ ಸಿಲ್‌ಸಿಲ, ನಝಾರತ್ ಉಲಿಯಾ ಖಾದಿಯಾನ್

ಇತಿಹಾಸ ಸಾಕ್ಷಿಯಿದೆ ಎಂದೆಂದು ಲೋಕದಲ್ಲಿ, ಅಲ್ಲಾಹನ ಸಂದೇಶವಾಹಕರು ಆಗಮಿಸಿದಾಗ ಅವರನ್ನು ವಿರೋಧಿಸಲಾಯಿತು. ತೀವ್ರ ರೀತಿಯಲ್ಲಿ ವಿರೋಧಿಸಲಾಯಿತು. ಏಕೆಂದರೆ ಅವರು ರೂಢಿಗತ ವ್ಯವಸ್ಥೆಗಳಿಂದ ಭಿನ್ನವಾಗಿ ವಾದಿಸಿದರು ಮತ್ತು ಪ್ರಚಲಿತ ಪ್ರಸಿದ್ಧ ಪಂಡಿತರ ಅಭಿಪ್ರಾಯಗಳ ವಿರುದ್ಧ ಘೋಷಣೆ ಮಂಡಿಸಿದರು. ಮತ್ತೆ ನಿಧಾನವಾಗಿ ಜನಸಾಮಾನ್ಯರಿಂದ ಸಜ್ಜನ ವ್ಯಕ್ತಿಗಳ ಮೇಲೆ ಅವರ ಸತ್ಯತೆ ಪ್ರಕಟಗೊಂಡಿತು ಮತ್ತು ಅವರಿಗೆ ವಿಶ್ವಾಸ ಹೊಂದುವ ಭಾಗ್ಯ ದೊರೆಯಿತು. ಹೀಗೆ ಅಲ್ಲಾಹನ ಕಡೆಯಿಂದ ಬಂದವರ ಸತ್ಯತೆ ಹಗಲಿನ ಪ್ರಕಾಶದಂತೆ ಜಾಹಿರಾಗುತ್ತದೆ. ತಿರಸ್ಕರಿಸುವವರ ಕುರಿತು ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಪ್ರಸ್ತಾಪಿಸಿದನು. **"ಯಾ ಹಸರತನ್ ಅಲ್‌ಅ ಇಬಾದಿ ಮ ಯಾತೀಹಿಮ್ ಮಿರ್‌ರಸೂಲಿನ್ ಇಲ್ಲಾ ಕಾನೂ ಬಿಹೀ ಯಸ್ತಹ್‌ಝಿಊನ್** (ಯಾಸೀನ್-31)**"**

ಅಂದರೆ: ಹಾ ಮನುಷ್ಯರ ದುರದೃಷ್ಟವೋ ಅವರ ಅಪಹಾಸ್ಯಕ್ಕೆ ಗುರಿಯಾಗದೆ ಯಾವ ಪ್ರವಾದಿಯೂ ಅವರ ಬಳಿಗೆ ಬರುವುದಿಲ್ಲ.

ಇನ್ನೊಂದೆಡೆ ದೈವಿಕ ಸಂಘಟನೆಗಳ ವಿಜಯಿಗಳ ಕುರಿತು ಹೀಗೆ ಪ್ರಸ್ಥಾಪಿಸಿದನು. **ಕತಬಲ್ಲಾಹು ಲಅಗ್‌ಲಿಬನ್ನ ಅನಾ ವರುಸುಲಿ** (ಅಲ್‌ಮುಜಾದಿಲ:21) ನಾನು ನನ್ನ ಸಂದೇಶವಾಹಕರು ಖಂಡಿತವಾಗಿಯೂ ವಿಜಯಶಾಲಿಗಳಾಗುವೆವು ಎಂದು ಅಲ್ಲಾಹನು ವಿಧಿ ಬರೆದಿರುವನು.

ಹಝ್ರತ್ ರಸೂಲುಲ್ಲಾಹ್(ಸ) ತಮ್ಮ ಜನಾಂಗದ ಮುಂಬರುವ ಪರಿಸ್ಥಿತಿಗಳ ಬಗ್ಗೆ ಅವಗತ ಮಾಡಿದ್ದರು ಮತ್ತು ಅಂತ್ಯ ಕಾಲದಲ್ಲಿ ಓರ್ವ ಸಂದೇಶವಾಹಕರ ಆಗಮನದ ಭವಿಷ್ಯವಾಣಿಗಳನ್ನು ನುಡಿದಿದ್ದರು. ಈ ಸಮುದಾಯದ ಉಜ್ವಲ ಭವಿಷ್ಯಕ್ಕಾಗಿ ಓರ್ವ ಉದ್ಧಾರಕನು ಆಗಮಿಸುವನು. ಅವನು ಸ್ಥಾನಮಾನದ ನೆಲೆಯಲ್ಲಿ ಮಸೀಹನು ಮತ್ತು ಮಹದಿಯೂ, ನ್ಯಾಯಾಧೀಶನು ಮತ್ತು ತೀರ್ಪುಗಾರನು, ಹಾಗೆಯೇ ಹಲವು ದೈವಿಕ ಅನುಗ್ರಹಗಳಿಂದ ಅನುಗ್ರಹಿತನಾಗಿ ಕರೆಯಲ್ಪಡುವವನು ಮತ್ತು ಅಲ್ಲಾಹನು ಅವನಿಗೆ ಅಪಾರ ಗೌರವ ನೀಡುವನು. ಅವನಿಗೆ ನನ್ನ ಸಲಾಂ ಹೇಳಬೇಕು. ಮತ್ತು ಅವನ ಬೈಅತ್ ಮಾಡಬೇಕು. ತಾತ್ಪರ್ಯವೇನೆಂದರೆ ಅವರನ್ನು ವಿರೋಧಿಸಬಾರದು, ಬದಲು ಅವರ ಜಮಾಅತಿನಲ್ಲಿ ಸೇರಬೇಕು.

ತಕ್ಕುದಾದ ಸಮಯಕ್ಕೆ ಕಾಲದನುಗುಣವಾಗಿ ಆ ದೈವಿಕ ಬಾದಶಾಹನು ಬಂದರು ಮತ್ತು ದಾವೆ ಮಾಡಿದರು. "ನಾನೇ ಆ ವಾಗ್ದತ್ತ ಮಸೀಹ ಮತ್ತು ಮಹದಿ, ನ್ಯಾಯಾಧೀಶನು ಮತ್ತು ತೀರ್ಪುಗಾರನಾಗಿರುವೆನು ಮತ್ತು ಸಂದೇಶವಾಹಕನಾಗಿರುವೆನು. ಅದೇ ಸಮಯಕ್ಕೆ ಅವರ ವಿರೋಧವು ಪ್ರಾರಂಭವಾಯಿತು. ಈ ನಿಯಮವಂತೂ ಪುನರಾವರ್ತನೆ ಆಗಲೇಬೇಕಿತ್ತು. ಏಕೆಂದರೆ ಮೊದಲೇ ಅವರ ವಿರೋಧದ ಬಗ್ಗೆ ಭವಿಷ್ಯವಾಣಿಗಳಿದ್ದವು.

ಹದೀಸುಗಳಲ್ಲಿ ವಾಗ್ದತ್ತ ಮಸೀಹನನ್ನು ನ್ಯಾಯಾಧೀಶ ಮತ್ತು ತೀರ್ಪುಗಾರನೆಂದು ಸಂಬೋಧಿಸಿ ಧರ್ಮದಲ್ಲಿ ಉಂಟಾಗಿರುವ ಎಲ್ಲ ಭಿನ್ನ ಕಾರ್ಯಗಳಲ್ಲಿ ಅವನು ನ್ಯಾಯ ಮತ್ತು ತೀರ್ಪು ನೀಡುವವನು ಎಂದು ಹೇಳಲಾಗಿತ್ತು. ಅಂದ ಹಾಗೆ ಆ ನ್ಯಾಯಾಧೀಶನು ಮತ್ತು ತೀರ್ಪುಗಾರನು ಬಂದರು ಮತ್ತು ಧರ್ಮದಲ್ಲಿ ಉಂಟಾದ ಮಧ್ಯ ಭಿನ್ನತೆಗಳಲ್ಲಿ ತಮ್ಮ ನಿರ್ಣಯ ದಯಪಾಲಿಸಿದನು. ಯಾರು ಅವರ ಮಾತನ್ನು ನಂಬಿದರೋ ಅವರು ಅವರ ಜಮಾಅತ್ ಎನಿಸಲ್ಪಟ್ಟಿತು ಮತ್ತು ಉಳಿದವರು ಶಾಶ್ವತವಾದ ನಷ್ಟಗಳಿಗೆ ಗುರಿಯಾದರು.

ಕೆಲವು ಮುಖ್ಯ ಭಿನ್ನ ಸಮಸ್ಯೆಗಳಲ್ಲಿ ನ್ಯಾಯಾಧೀಶನಾದ ಮತ್ತು ತೀರ್ಪುಗಾರನಾದ ನೆಲೆಯಲ್ಲಿ ಕೈಗೊಂಡ ಕಾರ್ಯಗಳು ಈ ಕೆಳಗೆ ಅದರ ವಿವರಗಳು ಸಂಕ್ಷಿಪ್ತವಾಗಿ ನಮೂದಿಸಲಾಗಿದೆ.

### ಹಝ್ರತ್ ಈಸಾ(ಅ) ಅವರ ಮರಣ

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ನುಡಿದರು:

"ಐದನೇ ತಪ್ಪು ವಿಶ್ವಾಸ ಹಝ್ರತ್ ಮಸೀಹ್(ಅ) ರವರ ಶಿಲುಬೆಯ ಕುರಿತಾಗಿತ್ತು. ಅದರಲ್ಲಿ ಮುಸ್ಲಿಮರು, ಯಹೂದ್ಯರು ಮತ್ತು ಕ್ರೈಸ್ತರು ಒಳಗೊಂಡಿದ್ದರು. ಮುಸಲ್ಮಾನು ಹೇಳುತ್ತಿದ್ದರು. ಯಹೂದ್ಯರು ಹಝ್ರತ್ ಮಸೀಹ್(ಅ) ರವರ ಬದಲು ಇನ್ನೊಬ್ಬರಿಗೆ ಶಿಲುಬೆಗೆ ಏರಿಸಿದ್ದರು ಮತ್ತು ಅವರನ್ನು ಅಲ್ಲಾಹನು ಆಕಾಶದ ಮೇಲೆ ಎತ್ತಿಕೊಂಡನು. ಯಹೂದ್ಯರು ಮತ್ತು ಕ್ರೈಸ್ತರು ಹೇಳುತ್ತಿದ್ದರು. ಹಝ್ರತ್ ಮಸೀಹರನ್ನು ಶಿಲುಬೆ ಮೇಲೆ ಏರಿಸಿ ಹತ್ಯೆ ಮಾಡಿದರು. ಮುಸಲ್ಮಾನರ ಅನಿಸಿಕೆಯನ್ನು ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ರದ್ದುಗೊಳಿಸಿದರು.

ಹಝ್ರತ್ ಮಸೀಹರ ಬದಲು ಇನ್ನೊಬ್ಬರಿಗೆ ಶಿಲುಬೆಗೇರಿಸಿಸುವುದು ಅಪ್ಪಟ ದೌರ್ಜನ್ಯವಾಗಿದೆ. ಆ ವ್ಯಕ್ತಿಯ ರಾಜಿಯ ಮೇರೆಗೆ ಏನಾದರೂ ಶಿಲುಬೆಗೆ ಏರಿಸಲ್ಪಟ್ಟರೆ ಅದರ ಉಲ್ಲೇಖ ಇತಿಹಾಸದಲ್ಲಿ ಇರಬೇಕಾಗಿದೆ. ಮಸಿಹನನ್ನು ಅಲ್ಲಾಹನು ಆಕಾಶದಲ್ಲಿ ಎತ್ತಲ್ಪಟ್ಟಿದ್ದಾಗಿದ್ದರೆ ಒಬ್ಬ ಬಡವನನ್ನು ಶಿಲುಬೆಗೆ ಏರಿಸುವ ಅಗತ್ಯವಾದರೂ ಏನಿತ್ತು? ಅಂದ ಹಾಗೆ ಮಸೀಹರ ಬದಲಿಗೆ ಇನ್ನೊಬ್ಬನಿಗೆ ಶಿಲುಬೆಗೆ ಏರಿಸಲಾಯಿತು ಎಂಬುದು ಶುದ್ಧ ತಪ್ಪಾಗಿದೆ. ಮತ್ತು ಅವರು ಆಕಾಶದಲ್ಲಿ ಎತ್ತಲ್ಪಟ್ಟರು ಎಂಬುದು ಸಹ ತಪ್ಪಾಗಿದೆ. ಇನ್ನೊಂದೆಡೆ ಅವರು ಯಹೂದ್ಯರ ಮತ್ತು ಕ್ರೈಸ್ತರ ವಿಶ್ವಾಸ ಮಸೀಹರು ಶಿಲುಬೆಯ ಮೇಲೆ ಮರಣ ಹೊಂದಿದ್ದರು ಎಂಬುದು ಸಹ ರದ್ದುಗೊಳಿಸಿದಂತಾಯಿತು. ಅದರ ಬದಲು ಹಝ್ರತ್ ಮಸೀಹ್ ಜೀವಂತವಾಗಿ ಶಿಲುಬೆಯಿಂದ ಇಳಿಸಲ್ಪಟ್ಟರು. ಹೀಗೆ ಅಲ್ಲಾಹನು ಅವರಿಗೆ ಶಪಿಸಲ್ಪಟ್ಟ ಮರಣದಿಂದ ರಕ್ಷಿಸಿದನು.

ಈಗ ನೋಡಿ. ಸಾವಿರದ ಒಂಬೈನೂರ ವರ್ಷಗಳ ನಂತರ ಹಝ್ರತ್ ಮಸೀಹ್ ಮೌಊದ್(ಅ) ಅವರ ಈ ಘಟನೆಯ ವಾಸ್ತವವನ್ನು ಪತ್ತೆ ಹಚ್ಚುವುದು ಎಷ್ಟೊಂದು ಮಹಾ ಕಾರ್ಯವಾಗಿತ್ತು. ವಿಶೇಷವಾಗಿ ಉಲ್ಲೇಖನೀಯವಾದುದೇನೆಂದರೆ ಹಝ್ರತ್ ಮಸೀಹ್(ಅ) ಜೀವಂತವಾಗಿ ಶಿಲುಬೆಯಿಂದ ಇಳಿಸಲ್ಪಟ್ಟ ವಿಷಯ ಇಂದಿನಿಂದಲೇ ಸಾಬೀತುಪಡಿಸಿದರು. ಉದಾಹರಣೆಗೆ ಒಂದು ಸಂದರ್ಭದಲ್ಲಿ ಉಲಮಾಗಳು ಮಸೀಹರೊಡನೆ ದೃಷ್ಟಾಂತವನ್ನು ಬಯಸಿದ್ದರು. ಅವರಿಗೆ ಹೀಗೆ ಉತ್ತರ ನೀಡಿದರು.

"ಈ ಕಾಲದ ದುಷ್ಟ ಹಾಗೂ ವ್ಯಭಿಚಾರಿ ಜನರು ನನ್ನಿಂದ ದೃಷ್ಟಾಂತವನ್ನು ಬಯಸುತ್ತಾರೆ. ಆದರೆ ಯಾವ ಪ್ರವಾದಿಯ ಹೊರತು ಅವರಿಗೆ ಯಾವ ದೃಷ್ಟಾಂತವು ತೋರಿಸಲಾಗುವುದಿಲ್ಲ. ಏಕೆಂದರೆ ಯೂನರ ಪ್ರವಾದಿಯು ಮೂರು ಹಗಲು ರಾತ್ರಿ ಮೀನಿನ ಹೊಟ್ಟೆಯಲ್ಲಿದ್ದ ರೀತಿ ಇಬ್ನು ಆದಂ ಮೂರು ಹಗಲು ರಾತ್ರಿ ಭೂಮಿಯೊಳಗಿರುವನು." (ಮತಿ ಬಾಬ್-12, ಸೂಕ್ತ-39,40)

ತಾರೀತಿನಿಂದ ಸಾಬೀತಿದೆ. ಹಝ್ರತ್ ಯೂನೂಫ್ (ಅ) ಮೂರು ದಿವಸಗಳವರೆಗೆ ಮೀನಿನ ಹೊಟ್ಟೆಯಲ್ಲಿ ಜೀವಂತವಾಗಿದ್ದರು ಮತ್ತು ಜೀವಂತವಾಗಿಯೇ ಹೊರ ಬಂದರು. ಅಂದ ಹಾಗೆ ಅವಶ್ಯವಾಗಿತ್ತು, ಹಝ್ರತ್ ಮಸೀಹ್ ನಾಸರಿ ಸಹ ಶಿಲುಬೆಯ ಘಟನಾ ಸಂದರ್ಭದಲ್ಲಿ ಜೀವಂತವಾಗಿಯೇ ಸಮಾಧಿಯಲ್ಲಿ ಪ್ರವೇಶ ಮಾಡಬೇಕು ಮತ್ತು ಜೀವಂತವಾಗಿಯೇ ಹೊರ ಬರಬೇಕು. ಆದುದರಿಂದ ಹಝ್ರತ್ ಮಸೀಹ್ (ಅ) ಮರಣ ಹೊಂದಿದರು ಎಂಬುದು ಇಂಜೀಲಿನ ಪ್ರಕಾರವೇ ಅಪ್ಪಟ ವಿರೋಧಭಾಸವಾಗುತ್ತದೆ. ಸ್ವಯಂ ಮಸೀಹರು ಸಹ ಇದರಿಂದ ತಪ್ಪಿತಸ್ಥರಾಗುತ್ತಾರೆ. ಕ್ರೈಸ್ತರ ವಿರುದ್ಧ ಹಝ್ರತ್ ಮಸೀಹ್ ಮೌಊದ್ (ಅ) ರವರ ಈ ವಾದ ಬಹುದೊಡ್ಡ ಸಾಧನೆಯಾಗಿದೆ ಮತ್ತು ಅವರ ಸಾಧನೆಗೆ ದೊರೆತ ಮಹೋನ್ನತ ಪುರಾವೆಯಾಗಿದೆ. ಅಷ್ಟಕ್ಕೆ ನಿಲ್ಲಿಲ್ಲ. ಬದಲು ಇತಿಹಾಸದಿಮದ ಸಾಬೀತು ಮಾಡಿ ತೋರಿಸಿದರು. ಹಝ್ರತ್ ಮಸೀಹ್ ನಾಸರಿ ಶಿಲುಬೆ ಘಟನಾವಳಿಯ ನಂತರ ಕಾಶ್ಮೀರಕ್ಕೆ ಬಂದರು ಅಲ್ಲಿ ಬಂದ ನಂತರ ಮತ್ತೆ ಅವರು ನಿಧನ ಹೊಂದಿದರು. ಅಂತೂ ಅವರ ಜಿವನದ ಎಲ್ಲ ರಹಸ್ಯಗಳನ್ನು ಬಹಿರಂಗಗೊಳಿಸಿದರು. (ಹಝ್ರತ್ ಮಸೀಹ್ ಮೌಊದ್(ಅ) ಸಾಧನೆಗಳು, ಅನ್ವಾರುಲ್ ಉಲೂಮ್, ಸಂಪುಟ-10, ಪುಟ-170-171)

### ಖತ್ಮೆ ನಬುವ್ವತ್

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಹೇಳುತ್ತಾರೆ:

"ಮತ್ತೆ ಪ್ರವಾದಿಗಳ ಆಗಮಿಸುವ ಕುರಿತು ವಿರೋಧ ನಿಲುಗಳಿದ್ದವು. ಎಲ್ಲ ರೀತಿಯ ಪ್ರವಾದಿತ್ವ ಹಝ್ರತ್ ರಸೂಲುಲ್ಲಾಹ್(ಸ) ರವರಲ್ಲಿ ಅಂತ್ಯಗೊಂಡಿತು. ಇದೀಗ ಯಾರು ಸಹ ಅವರಿಂದಲೇ ಅನುಗ್ರಹಿತರಾದರೂ ಸಹ, ಅವರ ಶರೀಅತಿನ ಪರಿಪಾಲಕನಾದರೂ ಸಹ, ಪ್ರವಾದಿಯಾಗಲು ಸಾಧ್ಯವಿಲ್ಲ. ಅವರು ಸಾಕ್ಷ್ಯಗಳೊಂದಿಗೆ ಖಾತಮುನ್ನಬಿಯೀನ್ ಕುರಿತು ಹೇಳಿದರು. ಅದರ ಅರ್ಥ ನೀವು ಭಾವಿಸಿದಂತಲ್ಲ, ಪ್ರವಾದಿತ್ವ ಸಮಾಪ್ತಿಯ ತಾತ್ಪರ್ಯವು ಇದೀಗ ಯಾವುದೇ ರೀತಿಯ (ರೂಪದಲ್ಲಿ) ನಬಿ ಬರಲು ಸಾಧ್ಯವಿಲ್ಲ ಎಂಬುದು ತಪ್ಪು. ಏಕೆಂದರೆ ಹಝ್ರತ್ ರಸೂಲುಲ್ಲಾಹ್(ಸ) ನಂತರ ಕೇವಲ ಶರೀಅತ್ತಿನ ಪ್ರವಾದಿತ್ವ ಮಾತ್ರ ಬಂದಾಗಿರುತ್ತದೆ. ಆದರೆ ಶರೀಅತ್ ಅಲ್ಲದ ಮತ್ತು ಪ್ರತಿಬಿಂಬಿತ (ಸಾದೃಶ್ಯ) ಪ್ರವಾದಿತ್ವದ ಬಾಗಿಲು ಮುಚ್ಚಲ್ಪಟ್ಟಿಲ್ಲ. ನಿಜವಾಗಿಯೂ ಎಲ್ಲ ರೀತಿಯ

ಪ್ರವಾದಿತ್ವವು ಬಂದಾಗಿದೆ ಎಂದಾದರೆ ಅದರರ್ಥ ನೌಝುಬಿಲ್ಲಾಹ್ (ಅಲ್ಲಾಹನ ಅಭಯವಿರಲಿ) ಹಝ್‌ರತ್ ರಸೂಲುಲ್ಲಾಹ್(ಸ) ರವರ ಅಸ್ತಿತ್ವದಿಂದ ಅವರ ಸಮುದಾಯ ಎಲ್ಲ ದೈವಿಕ ಅನುಗ್ರಹಗಳಿಂದ ವಂಚಿಸಲ್ಪಟ್ಟಿದೆ ಎಂದಾಗುವುದು. ಅಂದ ಹಾಗೆ ಅವರು ಎಲ್ಲ ವಿವೇಕಯುತ ಪುರಾವೆಗಳೊಂದಿಗೆ ಈ ಸಮಸ್ಯೆಯ ಮಿಥ್ಯರೂಪ ಸಾಬೀತುಗೊಳಿಸಿದರು. (ನೋಡಿ ಹಝ್‌ರತ್ ಮಿರ್ಝಾ ಸಾಹಿಬರ ಗ್ರಂಥಗಳಾದ ಇಕ್ ಗಲ್ತಿ ಕ ಇಝಾಲ, ತುಹ್‌ಫ ಗೊಲಡ್ವಿಯ, ನುಝೂಲುಲ್ ಮಸೀಹ್ ಮತ್ತು ಹಖೀಖತುಲ್ ಸಹಿ ಮುಂತಾದವು) (ತ್ ಬ್ ಲೀ ಗ್ ಹಿದಾಯತ್, ಪುಟ–108–109)

**ಖುರ್‌ಆನ್ ಹದೀಸುಗಳ ಸ್ಥಾನಮಾನ**

ಖಮರುಲ್ ಅಂಬಿಯಾ ಹಝ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ಹೇಳುತ್ತಾರೆ. "ಮತ್ತೆ ಖುರ್‌ಆನ್ ಹದೀಸುಗಳ ಸ್ಥಾನಮಾನ ಕುರಿತು ಅಂದರೆ ಇವೆರಡರಲ್ಲಿ ಯಾರ ಸ್ಥಾನ ಮೇಲ್ಮೆ ಹೊಂದಿದೆ ಎಂಬ ಅನಿಸಿಕೆಗಳಾಗಿದ್ದವು. ಆ ಭಾವನೆಗಳನ್ನು ಕೇಳಿಯೇ ಮೈ ಕಂಪಿಸುತ್ತದೆ. ಮುಸಲ್ಮಾನರ ಒಂದು ಪಂಥವು ಖುರ್‌ಆನ್‌ಗೆ ಬೆನ್ನ ಹಿಂದೆ ಬಿಸಾಕಿ ಹಾಕಿದರು ಮತ್ತು ಹದೀಸುಗಳ ಮೇಲೆ ಒಂದು ವಿಗ್ರಹದ ಮೇಲೆ ಮುಗಿಬಿದ್ದ ಹಾಗೆ ಮುಗಿಬಿದ್ದಿದ್ದರು. ಅವರು ಈ ಸಮಸ್ಯೆಗಳ ಕುರಿತು ಗಾಢಾಲೋಚನೆಯಿಂದ ಬೆಳಕು ಚೆಲ್ಲಿದರು. ಒಂದೆಡೆ ಸುನ್ನತನ್ನು (ಸಭಿಚರ್ಯೆ) ಹದೀಸಿನಿಂದ ಬೇರ್ಪಡಿಸಿದರು. ಇನ್ನೊಂದೆಡೆ ಖುರ್‌ಆನ್ ಮತ್ತು ಹದೀಸುಗಳಿಗೆ ಪ್ರತ್ಯೇಕ ಸ್ಥಾನಮಾನವನ್ನು ಸಾಕ್ಷ್ಯಗಳೊಂದಿಗೆ ನಿಗಧಿಪಡಿಸಿದರು. (ನೋಡಿ ಅಲ್ ಹಕ್ ಲೂಧಿಯಾನ, ರಿವೀವ್ ಬರ್ ಮುಬಾಹಿಸ ಚಕ್ಡಾಲ್ವಿ, ಕಿಶ್ತಿ ಎ ನೂಹ್ ಮುಂತಾದವು) (ತಬ್ಲೀಗೆ ಹಿದಾಯತ್, ಪುಟ–110)

ಖುರ್‌ಆನ್ ಹದೀಸು ಸ್ಥಾನಮಾನಗಳ ಕುರಿತು ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ:

"ಜನರಿಗೆ 13ನೇ ತಪ್ಪು ಗ್ರಹಿಕೆ ಏನಾಗಿತ್ತೆಂದರೆ–ಅವರು ಪವಿತ್ರ ಖುರ್‌ಆನ್ನನ್ನು ಹದೀಸುಗಳಿಗೆ ಹಿಂಬಾಲಕನಂತೆ ಪರಿಗಣಿಸುತ್ತಿದ್ದರು. ಎಲ್ಲಿಯವರೆಗೆ ಎಂದರೆ ಹದೀಸುಗಳು ಪವಿತ್ರ ಖುರ್‌ಆನ್‌ನ ವಚನಗಳನ್ನು ರದ್ದುಗೊಳಿಸಬಹುದು ಎಂಬುದಾಗಿ ಭಾವಿಸುತ್ತಿದ್ದರು. ಹಝ್‌ರತ್ ಮಸೀಹ್ ಮೌಊದ್(ಅ) ಈ ತಪ್ಪನ್ನು ಹೊಗಲಾಡಿಸಿದರು. ಅವರು ಹೇಳಿದರು. ಪವಿತ್ರ ಖುರ್‌ಆನ್ ಅಧಿಕಾರಯುಕ್ತವಾಗಿದೆ ಮತ್ತು ಹದೀಸುಗಳು ಅದರಡಿಯಲ್ಲಿ ಬರುವವು. ನಾವು ಕೇವಲ ಪವಿತ್ರ ಖುರ್‌ಆನ್‌ಗೆ ಅನುಗುಣವಾಗಿರುವ ಹದೀಸುಗಳನ್ನು ಮಾತ್ರ ಮನ್ನಿಸುವೆವು. ಇಲ್ಲದಿದ್ದರೆ ಇಲ್ಲ. ಅದೇ ರೀತಿ ದೇವ ನಿಯಮಗಳಿಗೆ ತಕ್ಕುದಾದ ಹದೀಸುಗಳನ್ನು ಮಾತ್ರ ಪರಿಗಣಿಸುವೆವು. ಏಕೆಂದರೆ ದೇವ ನಿಯಮಗಳು ಮತ್ತು ದೇವಕಾರ್ಯಗಳಲ್ಲಿ ವಿರೋಧಭಾಸವಿರುವುದಿಲ್ಲ" (ಹಝ್‌ರತ್ ಮಸೀಹ್ ಮೌಊದ್(ಅ) ಕೆ ಕಾರ್ನಾಮೆ, ಅನ್ವಾರುಲ್ ಉಲೂಮ್, ಸಂಪುಟ–10, ಪುಟ–159–160)

**ರದ್ದುಪಡಿಸುವಿಕೆ ಅಥವಾ ಮರೆತು ಬಿಡುವಿಕೆ**

ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ:

"ಎರಡನೆಯದಾಗಿ ಮುಸಲ್ಮಾನರಲ್ಲಿ ಭಾವನೆಯಿರುವುದೇನೆಂದರೆ ಖುರ್‌ಆನ್‌ನ ಒಂದು ಭಾಗ ರದ್ದುಗೊಂಡಿದೆ ಎಂದು. ಹಝ್‌ರತ್ ಮಸೀಹ್ ಮೌಊದ್(ಅ) ಅದರ ಸಮಂಜಸವಾದ ಉತ್ತರ ನೀಡಿದ್ದಾರೆ. ಅದು ಹೇಗೆಂದರೆ ಯಾವ ವಚನಗಳನ್ನು ಜನರು ರದ್ದುಗೊಂಡಿದೆ ಎನ್ನುತ್ತಾರೆ. ಅದರಲ್ಲಿಯೇ ಅನ್ಯೋನ್ಯ ಆಧ್ಯಾತ್ಮಿಕ ಜ್ಞಾನ ಅಡಗಿಗೊಂಡಿವೆ ಎಂದು ವಿವರಿಸಿದಾಗ ಶತ್ರುಗಳು ಸಹ ಹೈರಾಣಾದರು. ಅವರು(ಅ) ವಿವರಿಸುವ ತತ್ವಗಳಂತೆ ಪವಿತ್ರ ಖುರ್‌ಆನ್‌ನ ಒಂದೇ ಒಂದು ವಚನ ಸಹ ರದ್ದುಗೊಂಡಿರುವುದಿಲ್ಲ ಎಂದು ಸಾಬೀತುಪಡಿಸಿದರು. ಇದೀಗ ಅಹ್ಮದಿಯೇತರು ಇಲ್ಲಿಯವರೆಗೆ ಪವಿತ್ರ ಖುರ್‌ಆನ್‌ನ ಕೆಲವು ವಚನಗಳನ್ನು ರದ್ದುಗೊಂಡಿವೆ ಎನ್ನುತ್ತಿದ್ದರು. ಅದೇ ವಚನ ಸಹಿತ ಹಜ್ರತ್ ಮಸೀಹ್ ಅಲೈಹಿಸ್ಸಲಾಮ್ ಇಸ್ಲಾಮಿನ ಘನತೆಯನ್ನು ಎತ್ತಿ ಹಿಡಿದರು. (ಹಝ್ರತ್ ಮಸೀಹ್ (ಮೌಊದ್) ಕಾರ್‌ನಾಮೆ, ಅನ್ವಾರುಲ್ ಉಲೂಮ್, ಸಂಪುಟ–10, ಪುಟ–147)

ಮತ್ತು ಹೇಳುತ್ತಾರೆ. "ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಪವಿತ್ರ ಖುರ್‌ಆನ್‌ನ ಒಂದೇ ಒಂದು ಅಕ್ಷರ ಸಹ ರದ್ದುಗೊಂಡಿಲ್ಲ. ಯಾವ ವಚನಗಳನ್ನು ರದ್ದುಗೊಂಡಿವೆ ಎನ್ನುತ್ತಿದ್ದರು. ಅದನ್ನೇ ಬಹು ಅರ್ಥಗರ್ಭಿತವಾದುದು ಎಂದು ಹೇಳಿದರು." (ಹಝ್ರತ್ ಮಸೀಹ್ ಮೌಊದ್(ಅ) ಕೆ ಕಾರ್ನಾಮೆ, ಅನ್ವಾರುಲ್ ಉಲೂಮ್, ಸಂಪುಟ–10, ಪುಟ–159)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ವಾಸ್ತವವೇನೆಂದರೆ ನಿಜವಾಗಿಯೂ ರದ್ದುಗೊಂಡಂತಹ ವಿಷಯ ಮತ್ತು ಯಾವುದೇ ಹೆಚ್ಚುವರಿಕೆಯ ವಿಷಯ ಖುರ್‌ಆನ್‌ನ ನಿಮಿತ್ತ ಧರ್ಮ ಸಮ್ಮತ್ತವಲ್ಲ. ಏಕೆಂದರೆ ಅದರಿಂದ ಅದರ ಸುಳ್ಳುವಾದಕ್ಕೆ ಪುಷ್ಟಿ ದೊರೆಯುತ್ತದೆ. ನೂರುಲ್ ಅನ್ವಾರ್ ಎಂಬ ಹನಫೀಯರ ಗ್ರಂಥದ ಪುಟ 91 ರಲ್ಲಿ ಹೀಗೆ ಬರೆಯಲಾಗಿದೆ. ಎಲ್ಲಾ ವಿಷಯವು ಖುರ್‌ಆನ್‌ನಲ್ಲಿ ಬರೆಯಲ್ಪಟ್ಟಿದೆ. ಯಾವ ವಸ್ತುವು ಅದರ ಹೊರತಾಗಿಲ್ಲ. ಮತ್ತು ಅದಕ್ಕೆ ಪುಷ್ಟಿ ನೀಡುವಂತಹ ಉಲ್ಲೇಖಗಳು ವಿವರಸಬೇಕಾದರೆ ಒಂದು ಕಛೇರಿಯು ಬೇಕಾಗುವುದು. ಆದುದರಿಂದ ವಾಸ್ತವವೇನೆಂದರೆ ಯಾವ ವಸ್ತು ಖುರ್‌ಆನ್‌ಗೆ ಹೊರತಾಗಿದೆ ಎನ್ನುವುದು ಅಥವಾ ಅದರ ವಿರುದ್ಧವಾಗಿದೆ ಎನ್ನುವುದೇ ತಪ್ಪಾಗಿರುತ್ತದೆ. ಹಾಗೆಯೇ ಸರಿಯಾದ ಹದೀಸುಗಳು ಸಹ ಖುರ್‌ಆನ್‌ಗೆ ಹೊರತಾಗಿಲ್ಲ. ಏಕೆಂದರೆ ದೇವವಾಣಿಯ ಸಹಾಯದಿಂದ ಎಲ್ಲಾ ಸಮಸ್ಯೆಗಳನ್ನು ಪವಿತ್ರ ಖುರ್‌ಆನ್‌ನೊಂದಿಗೆ ಸಂಯೋಜಿಸಿ ಪಡೆಯಲಾಗಿದೆ. ಹೌದು ಇಷ್ಟಂತು ನಿಜವಾಗಿರುತ್ತದೆ. ತಾಳೆ ಹೊಂದುವ ಅಥವಾ ತಾಳೆ ಹೊಂದದ ವಿಷಯಗಳು ರಸೂಲುಲ್ಲಾಹ್(ಸ) ಅಥವಾ ಅವರ ಸಾದೃಶ್ಯ ವ್ಯಕ್ತಿಯ ಹೊರತು ಅದನ್ನು ಸ್ಪಷ್ಟಪಡಿಸಲು ಪ್ರತಿಯೊಬ್ಬರ ಕಾರ್ಯವಲ್ಲ. ನಿಸ್ಸಂಶಯವಾಗಿಯೂ ಸಾದೃಶ್ಯ ರೀತಿಯಲ್ಲಿ ಅಲ್ಲಾಹನ ಅನುಗ್ರಹಗಳು ಮತ್ತು ಜ್ಞಾನ ರಸೂಲುಲ್ಲಾಹ್(ಸ) ರವರ ಅನುಸರಣೆಯಿಂದ ಪವಿತ್ರ ಖುರ್‌ಆನ್‌ನ ಎಲ್ಲಾ ಸಾಕ್ಷ್ಯಗಳು ರಹಸ್ಯ ಜ್ಞಾನ ಮತ್ತು ಆಧ್ಯಾತ್ಮಿಕ ಜ್ಞಾನದಿಂದ ಅನುಗ್ರಹಿಸಲಾಗುತ್ತದೆ. (ಅಲ್‌ಹಖ್ ಲುಧಿಯಾನ, ತಫ್‌ಸೀರ್ ಮಸೀಹ್ ಮೌಊದ್(ಅ), ಪುಟ–185–186)

ಇಂದು ನಮಗೆ ಹಝ್ರತ್ ಮಸೀಹ್ ಮೌಊದ್(ಅ) ಒದಗಿಸಿದ ಸಾಕ್ಷ್ಯಗಳ ಪ್ರಕಾಶದಲ್ಲಿ ಲೋಕಕ್ಕೆ ತಿಳಿಸಬೇಕಾಗಿದೆ. ಅದರಿಂದ ದೂರವಾದರೆ ಅಥವಾ ತಮ್ಮನ್ನು ಪ್ರತ್ಯೇಕ ಗೊಳಿಸಿಕೊಂಡರೆ ನಾವು ನಷ್ಟಹೊಂದುವವರಾಗುವೆವು. ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸಿ ಮೂಲಭೂತ ವಿಶ್ವಾಸಗಳಲ್ಲಿ ತಮ್ಮ ನಿರ್ಣಯವನ್ನು ಸ್ಪಷ್ಟಪಡಿಸಿದ್ದಾರೆ. ಅವರ ನಂತರ ಅಹ್ಮದಿಯ ಖಿಲಾಫತ್ತಿನ ಮಾಧ್ಯಮದಿಂದ ಬರುವ ಅಂತಹ ತೀರ್ಮಾನದವರೆಗೆ, ಎಲ್ಲಾ ಭಿನ್ನಾಭಿಪ್ರಾಯಗಳ ವಿಷಯಗಳಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಶಿಕ್ಷಣಗಳ ಅಡಿಯಲ್ಲಿ ಸದಾ ನಮಗೆ ಮಾರ್ಗದರ್ಶನವಾಗಿರುವುದು. ಅದೇ ರೀತಿ ಈ ಜನಾಂಗ ಅಹ್ಮದಿಯಾ ಜಮಾಅತ್ತಿನ ಮಾಧ್ಯಮದಿಂದ ನಿಜವಾದ ಸತ್‌ಪಥ ಮತ್ತು ಅಭಿವೃದ್ಧಿ ಪಡೆಯುವಂತಾಗುವುದು ವಲ್ಲಾಹುಲ್ ಮುಸ್ತಾನ್.

ಹಝ್‌ರತ್ ಮಸೀಹ್ ಮೌದ್(ರ) ನುಡಿದರು. "ಈ ಲೋಕವು ಅಶಾಶ್ವತವಾಗಿದೆ. ಯಾರು ಯಾವಾಗ ಮರಣ ಹೊಂದುವರು ಹೇಳಲಾಗದ ಅರಿಯಿರಿ ಎಲ್ಲರಿಗೂ ಒಂದು ದಿನ ಮರಣವಿದೆ ಮತ್ತು ಅಲ್ಲಾಹನ ಬಳಿ ಹೋಗಬೇಕಾಗಿದೆ. ಆ ಸಮಯ ಸತ್ಯ ವಿಶ್ವಾಸಗಳ ಮತ್ತು ಸತ್ಕರ್ಮಗಳ ಹೊರತು ಏನು ಕೆಲಸಕ್ಕೆ ಬಾರದು. ಬಡವನು ಈ ಲೋಕದಿಂದ ಬರಿ ಕೈಯಲ್ಲಿ ಹೋಗುತ್ತಾನೆ ಮತ್ತು ಶ್ರೀಮಂತನು, ರಾಜನು ಸಹ ಈ ಲೋಕದಿಂದ ಏನೂ ಕೊಂಡುಹೋಗುವುದಿಲ್ಲ. ಬಡವನಿಗೂ ಏನೂ ಕೊಂಡುಹೋಗಲು ಸಾಧ್ಯವಿಲ್ಲ. ಜೊತೆಗಿರುವುದು ಕೇವಲ. ಸತ್ಯವಿಶ್ವಾಸ ಮತ್ತು ಸತ್ಕರ್ಮವಾಗಿದೆ. ಆದುದರಿಂದ ಅಲ್ಲಾಹನ ಸಂದೇಶವಾಹಕನ ಮೇಲೆ ವಿಶ್ವಾಸ ಕೈಗೊಳ್ಳಿರಿ. ಪರಿಣಾಮವಾಗಿ ಅಲ್ಲಾಹನಿಂದ ನಿಮಗೆ ಶಾಂತಿ ದೊರೆಯುವುದು. ಇಸ್ಲಾಮಿನ ಸಂದೇಶವನ್ನು ಸ್ವೀಕರಿಸಿ. ನಿಮಗೆ ನೆಮ್ಮದಿ ದೊರೆಯುವುದು (ಅನ್ವಾರುಲ್ ಊಲೂಮ್, ಸಂಪುಟ–7, ಪುಟ–595–596, ದಅವತುಲ್ ಅಮೀರ್)

************************

**ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

ಹಝ್‌ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ಮನುಷ್ಯನಿಗೆ ನೀಡಲಾದ ಆ ಶ್ರೇಷ್ಠ ಪ್ರಕಾಶ - ಎಂದರೆ ಪರಿಪೂರ್ಣ ಮನುಷ್ಯನಿಗೆ ನೀಡಲಾದ ಪ್ರಕಾಶ - ಅದು ದಿವ್ಯದೂತರಲ್ಲಿಯೂ ಇರಲಿಲ್ಲ. ಅದು ನಕ್ಷತ್ರಗಳಲ್ಲಾಗಲೀ ಚಂದ್ರನಲ್ಲಾಗಲೀ ಸೂರ್ಯನಲ್ಲಾಗಲೀ ಇರಲಿಲ್ಲ. ಅದು ಭೂಮಿಯ ಸಮುದ್ರಗಳಲ್ಲಾಗಲೀ ನದಿಗಳಲ್ಲಾಗಲೀ ಇರಲಿಲ್ಲ. ಅದು ಮಾಣಿಕ್ಯದಲ್ಲಾಗಲೀ ನೀಲಮಣಿಯಲ್ಲಾಗಲೀ ಮುತ್ತಿನಲ್ಲಾಗಲೀ ಇರಲಿಲ್ಲ. ಒಟ್ಟಾರೆ ಹೇಳುವುದಾದರೆ ಅದು ಭೂಮಿ ಮತ್ತು ಆಕಾಶದ ಇತರ ಯಾವುದೇ ವಸ್ತುವಿನಲ್ಲಿರಲಿಲ್ಲ. ಅದು ಮನುಷ್ಯನಲ್ಲಿ – ಎಂದರೆ ಪರಿಪೂರ್ಣ ಮನುಷ್ಯನಲ್ಲಿ ಮಾತ್ರವಿದ್ದಿತು. ಮನುಷ್ಯವರ್ಗದಲ್ಲಿ ಪರಿಪೂರ್ಣನೂ ಪರಿಪೂರ್ಣ ಸ್ವಭಾವಗಳನ್ನು ಹೊಂದಿದವನೂ ಅತ್ಯುನ್ನತ ಸ್ಥಾನ ಪಡೆದವನೂ ಮನುಷ್ಯರೆಲ್ಲರ ಅತಿ ಎತ್ತರದಲ್ಲಿರುವವನೂ ಆದ ವ್ಯಕ್ತಿ ನಮ್ಮ ನಾಯಕ, ನಮ್ಮ ಮಾಲಿಕ, ಪ್ರವಾದಿಗಳ ನೇತಾರ, ಎಲ್ಲ ಜೀವಿಗಳ ಸರದಾರ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಆಗಿದ್ದಾರೆ. ಆ ಪ್ರಕಾಶ ಆ ಮನುಷ್ಯನಿಗೆ ನೀಡಲಾಗಿತ್ತು ಮತ್ತುಅವರ ಹಾಗೆಯೇ ಅಲ್ಪ ಸ್ವಲ್ಪ ವರ್ಣವನ್ನು ಪಡೆದ ಎಲ್ಲರಿಗೂ ಅದು ನೀಡಲಾಯಿತು......ಆದರೆ ಈ ಪ್ರಕಾಶ ವೈಭವಪೂರ್ಣವಾಗಿ ಕಂಡು ಬರುವುದು ನಮ್ಮ ನಾಯಕ, ನಮ್ಮ ಮಾಲಿಕ, ನಮ್ಮ ಮಾರ್ಗದರ್ಶಕ, ಸತ್ಯಸಂಧ, ಸತ್ಯಪ್ರಮಾಣಿತನಾಗಿರುವ, ದೇವನಿಂದ ಆಯ್ಕೆಗೊಂಡ ನಿರಕ್ಷರಿ ಪ್ರವಾದಿ ಹಝ್‌ರತ್ ಮುಹಮ್ಮದ್ ಮುಸ್ತಫಾ(ಸ) ಅವರಲ್ಲಾಗಿದೆ. ***(ಆಯಿನಯೇ ಕಮಾಲಾತೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 5, ಪುಟ 160 – 162)***

**ಪುಟ ಸಂಖ್ಯೆ 01ರ ಉಳಿದ ಭಾಗ**

ಈ ಸಲ ಮುಖ ತಿರುಗಿಸಬೇಡಿ, ನನ್ನ ಈ ಪತ್ರಿಕೆಯಲ್ಲಿ ಏನಾದರೂ ತಪ್ಪುಗಳಿದ್ದರೆ ಎತ್ತಿ ತೋರಿಸಿ. ಎಷ್ಟು ತಪ್ಪುಗಳನ್ನು ತೋರಿಸುವನೋ ಆ ಪೈಕಿ ಒಂದು ತಪ್ಪಿಗೆ ಒಂದು ರೂಪಾಯಿಯಂತೆ ನಿಮಗೆ ನೀಡಲಾಗುವುದು. 25 ಜುಲೈ 1894 ವರೆಗೆ ಇದರ ಅವಧಿಯಿದೆ. 25 ಜುಲೈ 1894 ರವರೆಗೆ ಈ ತನ್ನ ಅಪೇಕ್ಷೆಯ ಮೇರೆಗೆ ಯಾವುದೇ ಪ್ರಕಟಣೆ ನೀಡಲಿಲ್ಲವಾದರೆ ನೀವು ಪಲಾಯನ ಮಾಡಿದ್ದೀರಿ ಎಂದು ಭಾವಿಸುವೆನು. **(ಸಿರ್‍ರುಲ್ ಖಿಲಾಫ್, ರೂಹಾನಿ ಖಝಾಇನ್ ಸಂಪುಟ–8, ಪುಟ–417).**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನಂತರ ಈ ಬಹುಮಾನವನ್ನು ಹೆಚ್ಚಿಸಿ ಎರಡು ರೂಪಾಯಿಗಳನ್ನಾಗಿ ಮಾಡಿದರು. ಆದರೆ ತಪ್ಪುಗಳನ್ನು ತೆಗೆಯಲು ಮತ್ತು ಬಹುಮಾನ ಪಡೆಯಲು ಕೆಲವು ಶರತ್ತುಗಳನ್ನು ನಿಗದಿಪಡಿಸಿದರು. ಈ ಪೈಕಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ (ಅ) ಹೇಳುತ್ತಾರೆ:

ಹೆಚ್ಚಿನ ಟೀಕಾಕಾರರು ವಿಶೇಷವಾಗಿ ಶೇಖ್ ಮುಹಮ್ಮದ್ ಹುಸೇನ್ ಸಾಹಿಬ್ ಬಟೌಲ್ವಿ ಅವರು ನಮ್ಮ ಅರಬಿ ಗ್ರಂಥಗಳನ್ನು ಟೀಕಾ ದೃಷ್ಟಿಯಿಂದಲೇ ನೋಡುತ್ತಾರೆ. ದ್ವೇಷ, ನಂಜಿನ ಕಾರಣದಿಂದಾಗಿ ಆಕಸ್ಮತ್ತಾಗಿ ಆದ ತಪ್ಪನ್ನು ಸಹ ತಪ್ಪಿನ ಶಾಖೆಯಲ್ಲಿ ಸೇರಿಸುತ್ತಾರೆ. ಆದರೆ ವ್ಯಾಕರಣ ದೃಷ್ಟಿಯಿಂದ ನೋಡುವಾಗ ನಾವು ಬರೆದಂತಹ ಬರಹ ಇತರ ಗ್ರಂಥಗಳೆಡೆಯಲ್ಲಿ ಕಾಣದಿದ್ದಾಗ ಮಾತ್ರ ತಪ್ಪೆಂದು ಹೇಳಬಹುದು. ಯಾವುದೇ ಜಾಗದಲ್ಲಿ ಆಕಸ್ಮತ್ತಾಗಿ ಕೈ ತಪ್ಪಿನಿಂದ ಏನಾದರೂ ತಪ್ಪಾಗಿದ್ದರೆ, ಅದೇ ರೀತಿಯ ಪದಗಳು ಬೇರೆ ಭಾಗಗಳಲ್ಲಿ ಸರಿಯಾಗಿವೆ ಎಂದಾದರೆ, ಆಗ ನ್ಯಾಯವೆಂದರೆ ಅದನ್ನು ಕೈತಪ್ಪಿನಿಂದ ಆದ ತಪ್ಪು ಎಂದು ಭಾವಿಸಬೇಕೇ ವಿನಹಃ ನಿಜವಾದ ತಪ್ಪಲ್ಲ. ಅದಾಗ್ಯೂ ನಾನು ಈ ಗ್ರಂಥಗಳನ್ನು ಬಹು ವೇಗವಾಗಿ ಬರೆದಿದ್ದೇನೆ. ಅದನ್ನೂ ಮನಗಾಣಬೇಕು. ಮತ್ತು ಈ ಗ್ರಂಥಗಳನ್ನು ಒಂದು ಪವಾಡ ಎಂದು ಭಾವಿಸಬೇಕು. ಪವಿತ್ರ ಖುರ್‌ಆನ್ ಹೊರತುಪಡಿಸಿದರೆ ಯಾವ ಗ್ರಂಥವು ಸಹ ತಪ್ಪಿನಿಂದ ಮುಕ್ತವಲ್ಲ. ಅದನ್ನು ಸ್ವಯಂ ಬಟಾಲ್ವಿ ಸಹ ಒಪ್ಪುತ್ತಾರೆ ಮತ್ತು ಹೇಳುತ್ತಾರೆ. ಜನರು ಉಮ್ರಾಬಲ್ ಖೈಸ್ ಮತ್ತು ಹರೀರಿ ಅಂತಹವರ ತಪ್ಪುಗಳನ್ನು ಹುಡುಕಿ ತೆಗೆದಿದ್ದಾರೆ. ಹೀಗಿರುವಾಗ ಸಂಭವತಃ ಆಕಸ್ಮಾತ್ತಾಗಿ ತಪ್ಪನ್ನು ಹುಡುಕಿದ ಒಬ್ಬ ವ್ಯಕ್ತಿ ಉಮ್ರಾಉಲ್ ಖೈಸ್ ಆಗಲು ಸಾಧ್ಯವೇ. ಖಂಡಿತ ಇಲ್ಲ. ತಪ್ಪು ಶೋಧಿಸುವುದು ಕಠಿಣ ಕೆಲಸವಾಗಿದೆ. ಆದರೆ ತಪ್ಪು ಹೊರೆಸುವ ಕೆಲಸ ಎಂಥವನು ಸಹ ಮಾಡಬಹುದಾಗಿದೆ. ನಮ್ಮ ಕಡೆಯಿಂದ "ಹಮಾಮತುಲ್ ಬುಶ್ರಾ ಮತ್ತು ನೂರುಲ್ ಹಖ್" ಎದುರಿನಲ್ಲಿ ಪತ್ರಿಕೆ ಬರೆಯಲು 1894 ರ ಜೂನ್ ಕೊನೆಯವರೆಗೆ ಅವಧಿಯಿತ್ತು. ಅದು ಕಳೆದಿದೆ. ಆದರೆ ಯಾವ ಮೌಲ್ವಿಗೂ ಅದರ ಎದುರಾಗಿ ಬರೆಯುವ ಉದ್ದೇಶದಿಂದ ಬಹುಮಾನ ಜಮಾ ಮಾಡಲು ಮನವಿ ಪತ್ರ ಬರಲಿಲ್ಲ. ಇದೀಗ ಆ ಸಮಯ ಕಳೆದುಹೋಗುತ್ತಿದೆ. ಅವರು ತಪ್ಪುಗಳನ್ನು ಹುಡುಕಲು ಭಗಿರಥ ಪ್ರಯತ್ನ ಮಾಡಿದರು. ದ್ವೇಷ ನೀತಿಯಿಂದಾಗಿ ಕೆಲ ಆಗುಂತಕರು ಕೆಲವು ಸಹಜ ಆಕಸ್ಮಿಕ ತಪ್ಪುಗಳನ್ನು ತಪ್ಪೆಂದು ಹೇಳಿ ಬಹುಮಾನ ಬಯಸಿದರು. ಕಣ್ಣು ತೆರೆದು ಶರತ್ತೆನಾಗಿತ್ತೆಂದರೆ, ನಾನು ಅವರ ಎದುರಾಗಿ ಉತ್ತರ ಬರೆಯುತ್ತೇನೆ ಎಂದು ಮುಂದಾಗಿ ತಿಳಿಸಬೇಕು. ಹಾಗೆ ಸುಮ್ಮನೆ ಬೇಕು. ಬೇಡದವರು ಸಹ ಯದ್ವಾ ತದ್ವಾ ತಪ್ಪುಗಳನ್ನು ಎತ್ತಿ ತೋರಿಸಿದರೆ, ಯಾರಿಗೆ ಅಂತ ಬಹುಮಾನ ನೀಡುವುದು. ಮೊದಲ ಶರತ್ತೆಂದರೆ ಉದಾಹರಣೆಗೆ ಈ ಪತ್ರಿಕೆ "ಸಿರ್‍ರುಲ್ ಖಿಲಾಫ್" ಎದುರಿಗೆ ಲೇಖನ ಬರೆಯಬೇಕು. ಹಾಗೂ ಅವರ ಈ ಲೇಖನ ತಪ್ಪುಗಳಿಂದ ಮುಕ್ತವಾಗಿದ್ದರೆ, ನಮ್ಮ ಪತ್ರಿಕೆಯ ಸಾಹಿತ್ಯಕ್ಕೆ ಸರಿಸಮವಾದರೆ ಆಗ ನಾವು ಬಹುಮಾನ ಒಂದು ತಪ್ಪಿಗೆ ಒಂದು ರೂಪಾಯಿಯಂತೆ ಪಡೆಯಬಹುದು. ಅದಕ್ಕೆ ನಾವು ವಾಗ್ದಾನ ನೀಡಿರುತ್ತೇವೆ. ಹಾಗೆ ಸುಮ್ಮನೆ ಟೀಕೆ ಮಾಡುವುದು ಹಿತವಲ್ಲ. **ವಸ್ಸಲಾಮು ಮಸಿತ್ತಬರಿಲ್ ಹುದಾ. (ಅದೇ ಪುಟ 316)**

ಇದೀಗ ನಾವು ಕೆಳಗೆ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿ ನಿಜವಾಗಿಯೂ ಅರಬಿ ಭಾಷೆಯ ಕುರಿತು ಯಾವ ಆಳವಾದ ಜ್ಞಾನವು ಹೊಂದಿರಲಿಲ್ಲ. ಎಂದು, ಅವರು ಅರಬಿಯಲ್ಲಿ ಯಾವ ಕವನವು ಬರೆದಿರಲಿಲ್ಲ. ಯಾವ ಗ್ರಂಥವು ಬರೆಯಲಿಲ್ಲ. ಅವರು ಫರ್ಷಿಯನ್ ಭಾಷೆಯ ವಿಧ್ವಾಂಸರು ಸಹ ಆಗಿರಲಿಲ್ಲ ಎಂಬ ಕುರಿತು ಹುಝೂರ್(ಅ) ರವರ ಕೆಲ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಶೇಖ್ ಬಟೌಲ್ವಿ ಸಾಹಿಬ್ ತನ್ನ ತಿಳುವಳಿಕೆಯ ಪ್ರಕಾರ ನಮ್ಮ ಗ್ರಂಥ **'ತಬ್ಲೀಗ್'**ನ **(ತಬ್ಲೀಗ್ ಎಂದರೆ, ಆಯಿನಾ ಕಮಾಲಾತೆ ಇಸ್ಲಾಂ (ರೂಹಾನಿ ಖಝಾಇನ್, ಸಂಪುಟ–5) ಅರಬಿಯ ಭಾಗವಾಗಿದೆ)** ಕೆಲವು ತಪ್ಪುಗಳನ್ನು ಎತ್ತಿ ತೋರಿಸಿದ್ದಾರೆ. ನಾನು ತುಂಬ ವಿಷಾದದಿಂದ ಬರೆಯುತ್ತಿದ್ದೇನೆ. ಅವರು ದ್ವೇಷ ಮಾತ್ರದಿಂದ ಅಥವಾ ತಮ್ಮ ಮೂಢತೆಯಿಂದಾಗಿ ಸರಿ ಮತ್ತು ತರ್ಕಬದ್ಧವಾದ ಪದಗಳಿಗೂ ಸಹ ತಪ್ಪೆಂದು ಸೇರಿಸಿದ್ದಾರೆ. ಇದರ ಮೌಲ್ಯ ಮಾಪನಕ್ಕಾಗಿ ಒಂದು ವಿಶೇಷ ರೀತಿಯ ಸಭೆ ಏರ್ಪಡಿಸಿದರೆ ನಾವು ಅವರಿಗೆ ಮನವರಿಕೆ ಮಾಡಿಕೊಡಬಹುದು. ಇಂತಹ ಅಸಂಬದ್ಧ ತರ್ಕದಿಂದ ಎಷ್ಟೊಂದು ಅವಮಾನ ಎದುರಿಸಬೇಕಾಗುವುದು ಎಂದು. ಅಂತ್ಯ ತೀರ್ಮಾನ ದಿನದ ದೃಷ್ಟಾಂತಗಳು ಪ್ರಕಟವಾಗಿವೆ. ಈ ಜ್ಞಾನ ಮತ್ತು ಹೆಸರು ಮೌಲ್ವಿ, 'ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿಊನ್' ಅವರು ಎತ್ತಿ ತೋರಿಸಿದಂತಹ ತಪ್ಪುಗಳು ಕೈಬರಹದ ತಪ್ಪಿನಿಂದ ಆಗುವಂತಹವು. ಇನ್ನು ಮೂರು ತಪ್ಪುಗಳು ಮರು ಪರಿಶೀಲನೆ ಮಾಡದೇ ಬರೆದ ಕಾರಣದಿಂದಾಗಿದೆ. ಉಳಿದದ್ದು ಶೇಖ್ ಸಾಹಿಬರು ತನ್ನ ಬುದ್ಧಿ ಭ್ರಮಣೆ ಮತ್ತು ತಿಳುವಳಿಕೆ ಅಭಾವದಿಂದಾಗಿದೆ. ಇದರಿಂದ ಸಾಬೀತಾಗುವುದೇನೆಂದರೆ ಶೇಖ್ ಸಾಹಿಬ್ ಎಂದೂ ಅರಬಿ ಭಾಷೆಯತ್ತ ಕಣ್ಣೆತ್ತಿಯೂ ನೋಡಲಿಲ್ಲ. ಮೌನವಾಗಿದ್ದರೆ ಚೆನ್ನಾಗಿತ್ತು. ಅವರ ಬಂಡವಾಳ ಹೊರಗೆ ಬರುತ್ತಿರಲಿಲ್ಲ. ಅವರು ನಮ್ಮ ಗ್ರಂಥಗಳ ಎದುರಿನಲ್ಲಿ ಯಾವುದೋ ಅರ್ಥಗರ್ಭಿತ ಸಾಹಿತ್ಯಿಕ ಪತ್ರಿಕೆ, ಕವನ ಮತ್ತು ಬರಹ ಬರೆಯಬಹುದೆಂದು ಆಶಿಸಿದ್ದೆವು. ಮತ್ತು ನಮ್ಮಿಂದ ಬಹುಮಾನ ಪಡೆಯುವವರು ಮತ್ತು ನಮ್ಮಿಂದ ನಿಜವಾಗಿಯೂ ಅವರೊಬ್ಬ ಅರಬಿ ಭಾಷಾ ಪಂಡಿತರು, ಮೌಲ್ವಿ ಎಂಬ ಬಿರುದು ಪಡೆಯುವವರು ಎಂದು. **(ಸಿರ್‍ರುಲ್ ಖಲೀಫ್. ರೂಹಾನಿ ಖಝಾಇನ್, ಸಂಪುಟ–8, ಪುಟ–415)**

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಶೇಖ್ ಬಟೌಲ್ವಿ ಸಾಹಿಬರು ಈ ವಿನೀತನ ಗ್ರಂಥದಿಂದ ಎಷ್ಟೆಲ್ಲ ತಪ್ಪುಗಳನ್ನು ಹುಡುಕಿ ಇಟ್ಟಿದ್ದಾರೆ. ಅದರಿಂದ ಸಾಬೀತಾಗುವುದು ಏನಾದರೂ ಇದ್ದರೆ ಅವರು ಎಷ್ಟು ಕೀಳುಮಟ್ಟಕ್ಕೆ ಇಳಿದಿದ್ದಾರೆಂದರೆ ಅವರ ದೃಷ್ಟಿಯಲ್ಲಿ ಸರಿ ತಪ್ಪಾಗಿ ಬಿಟ್ಟಿದೆ ಮತ್ತು ಸಾಹಿತ್ಯಕವಾದುದು ಅವರ ದೃಷ್ಟಿಯಲ್ಲಿ ಅಸಾಹಿತ್ಯವಾಗಿದೆ. ಅವರು ಏಕೆ ಮತ್ತು ಎಷ್ಟರಮಟ್ಟಿಗೆ ತಮ್ಮ ಅಜ್ಞತೆ ತೋರಿಸಬಯಸುತ್ತಾರೆ ತಿಳಿಯದು. ಅವರ ವಿಧಿಯಲ್ಲಿ ಎಷ್ಟೆಲ್ಲ ಅನುಮಾನ ಪಡೆಯಬಹುದಾಗಿದೆ ತಿಳಿಯದು ಕೆಲ ವಿದ್ವಾಂಸರು ಸಾಹಿತಿಗಳು ಅವರ ಈ ಮಾತುಗಳನ್ನು ಮತ್ತು ಅವರು ಈ ತರಹದ ಎತ್ತಿ ತೋರಿಸಿದ ತಪ್ಪುಗಳನ್ನು ನೋಡಿ ಅವರ ಮೇಲೆ ಅಳುವುದೋ, ನಗುವುದೋ ತಿಳಿಯದು ಅನ್ನುತ್ತಾರೆ ಈ ವ್ಯಕ್ತಿ ಯಾಕಾದರೂ ಇಷ್ಟೊಂದು ಅಜ್ಞಾನತೆಯ ಕೆಸರಿನಲ್ಲಿ ಇಳಿದುಬಿಟ್ಟಿದ್ದಾನೆ ಎಂದು ವ್ಯಥೆಪಡುತ್ತಾರೆ.
**(ಕರಾಮತುಸ್ಸಾದಿಖೀನ್, ರೂಹಾನಿ ಖಝಾಇನ್ ಸಂಪುಟ–7, ಪುಟ–63)**

ನಾವು ಓದುಗರಿಗೆ ದೃಢಪಡಿಸ ಬಯಸುತ್ತೇವೆ. ಶೇಖ್ ಬಟೌಲ್ವಿ ಅರಬಿಯಿಂದ ಏನೂ ಸಂಬಂಧವಿರಿಸಿಲ್ಲ. ತಪ್ಪುಗಳನ್ನು ಎತ್ತಿ ಹಿಡಿಯಬೇಕಾದರೆ ಆಧುನಿಕ ಸಾಹಿತ್ಯ ಮತ್ತು ಪುರಾತನ ಅರಬಿ ಸಾಹಿತ್ಯದ ಮೇಲೆ ದೃಷ್ಟಿ ಹೊಂದಬೇಕಾಗುತ್ತದೆ. ನುಡಿಗಟ್ಟು ಇತ್ಯಾದಿಗಳನ್ನು ತಿಳಿಸಬೇಕಾಗಿರುತ್ತದೆ. ಸಾವಿರಾರು ಅರಬಿ ಕವನದ ಪಂಕ್ತಿಗಳನ್ನು ಅವರು ಮುಂದಿಡಬೇಕಾಗುತ್ತದೆ. ಮತ್ತು ಅನುಸರಣೆ ಹಾಗೂ ಅನುಭವ ಹೊಂದಿರಬೇಕಾಗುತ್ತದೆ. ಇಲ್ಲಿ ನೋಡಿದರೆ ಪಾಪ ಈ ಶೇಖ್ ಸಾಹಿಬರು ಉರ್ದು ಭಾಷೆಯಲ್ಲಿಯೇ ತಮ್ಮ ಗಡ್ಡ ಬಿಳಿಮಾಡಿಕೊಂಡಿದ್ದಾರೆ. ಸಾಹಿತ್ಯ ಪರಿಕಲ್ಪನೆ ಇವರಿಗಿಲ್ಲ. ಎಂದಾದರೂ ಇವರು ಎರಡು ನಾಲ್ಕು ನೂರುಗಳಷ್ಟನ್ನಾದರೂ ಅರಬಿ ಕವನ ಪಂಕ್ತಿಗಳು ಬರೆದದ್ದು ಅಥವಾ ಪ್ರಕಟಿಸಿದ್ದು ಯಾರೂ ನೋಡಲಿಲ್ಲ. ನನಗಂತೂ ಇವರಿಂದ ಒಂದೇ ಒಂದು ಸಾಲು ಸಹ ಅಥವಾ ಒಂದು ಗೆರೆ ಸಾಹಿತ್ಯ ಭರಿತವಾಗಿ ಬರೆಯಬಹುದೆಂದು ನಿರೀಕ್ಷಿಸುವಂತಿಲ್ಲ. ಹೌದು ಉರ್ದು ಸಾಹಿತ್ಯಕರ ಅವಶ್ಯವಾಗಿದ್ದಾರೆ. **(ಅದೇ ಪುಟ 64)**

ಇನ್‌ಶಾಲಿಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನ ಪಂಥಾಹ್ವಾನ ನಾವು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

********************

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**


**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.



ಮಸ್ಜಿದ್ ಮುಬಾರಕ್ (ಇಸ್ಲಾಮಬಾದ್ ಯು.ಕೆ)



ಮಸ್ಜಿದ್ ಫಝ್ಲ್ (ಲಂಡನ್ ಯು.ಕೆ)



ಮಸ್ಜಿದ್ ನುಸ್ರತ್ ಜಹಾನ್ (ಕೂಪನ್ ಹೇಗನ್, ಡೆನ್ಮಾರ್ಕ್)




ಮಸ್ಜಿದ್ ಅಖ್ಸ (ರಬ್ವಃ, ಪಾಕಿಸ್ತಾನ್)



ಮಸ್ಜಿದ್ ಮಸ್ರೂರ್ (ವರ್ಜೀನಿಯಾ ಅಮೇರಿಕ)



ಮಸ್ಜಿದ್ ಬೈತುಲ್ ಅಹದ್ (ನಗೋಯ, ಜಪಾನ್)



ಮಸ್ಜಿದ್ ಬೈತುಸ್ಸಮದ್ (ಬಾಲ್ಟಿ ಮೂರ್, ಅಮೇರಿಕ)




ಮಸ್ಜಿದ್ ಬೈತುಲ್ ಹಮೀದ್ (ಫಿಲ್ಡ, ಜರ್ಮನಿ)

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ 213 ರಾಷ್ಟ್ರಗಳಲ್ಲಿ ಸ್ಥಾಪನೆ ಆಗಿರುತ್ತದೆ. ಅಲ್‌ಹಮ್‌ದುಲಿಲ್ಲಾಹ್. ಲೋಕದಾದ್ಯಂತ ವಿವಿಧ ರಾಷ್ಟ್ರಗಳಲ್ಲಿ ಜಮಾಅತೆ ಅಹ್ಮದಿಯಾದ ವತಿಯಿಂದ ನಿರ್ಮಿಸಲಾದ ಕೆಲವು ಮಸೀದಿಗಳ ಸುಂದರ ನೋಟ

**EDITOR**
TARIQ AHMED IDRIS.
Mobile : +91 8050330779
Website : akhbarbadrqadian.in
: www.alisla
E-mail : kannadabadar@gmail.com

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
ಕನ್ನಡ ಬದರ್ ವಾರ ಪತ್ರಿಕೆ **Weekly BADAR Qadian**
Qadian - 143516 Distt. Gurdaspur (Pb.) INDIA
Vol No.02, Thursday, 04, 11 March 2021, Issue No. 09-10

**MANAGER**
SHAIKH MUJAHID AHMAD.
Mobile : +91 99153 79255
e-mail: managerbadrqnd@gmail.com
SUBSCRIPTION
ANNUAL: Rs. 500/-

**ವಾಗ್ದಾತ್ತ ಮಸೀಹರು ಸಿರಿಯಾದ ಪೂರ್ವ ಭಾಗದಲ್ಲಿರುವ ಮಿನಾರ (ಗೋಪುರ)ದ ಬಳಿ ಅವತರಿಸುವರು ಎಂದು ಹದೀಸಿನಲ್ಲಿದೆ.**

**ಮಿತ್ರರೇ! ಈ ಮಿನಾರ (ಗೋಪುರವು) ನಿರ್ಮಿಸಲಾದ ಉದ್ದೇಶವು ಹದೀಸಿನ ಪ್ರಕಾರ ಮಸೀಹರ ಕಾಲದ ಸ್ಮರಣೆಯಾಗಬೇಕು ಎಂದು**

**ಈ ಮಿನಾರವೂ ಸಹ ಸೀರಿಯಾದ ಪೂರ್ವ ಭಾಗದೆಡೆಯೇ ಸ್ಥಾಪಿತವಾಗಿದೆ.**



ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಓ ಮಿತ್ರರೇ! ಈ ಮಿನಾರವು ಹದೀಸಿನ ಪ್ರಕಾರ ಮಸೀಹ್ ಮೌಊದರ ಕಾಲದ ಬಗ್ಗೆ ಸ್ಮರಿಸಬೇಕು ಎಂಬ ಉದ್ದೇಶದಿಂದ ನಿರ್ಮಿಸಲಾಗಿದೆ. ಅದರಿಂದ ಆ ಮಹೋನ್ನತವಾದ ಭವಿಷ್ಯವಾಣಿ ಅದರ ವಿವರ ಪವಿತ್ರ ಖುರ್‌ಆನಿನ ವಚನನದಲ್ಲಿ ಹೀಗೆ ಬರುತ್ತದೆ:– ಸುಬ್‌ಹಾನಲ್ಲಝಿ ಅಸ್ರ ಬಿಅಬ್‌ದಿಹೀ ಲೈಲಮ್ಮಿನಲ್ ಮಸ್ಜಿದಿಲ್ ಹರಾಮಿ ಇಲಾ ಮಸ್ಜಿದಿಲ್ ಅಖ್ಸಲ್ಲಝಿ ಬಾರಕ್‌ನ ಹೌಲಹೂ ಅದೇ ರೀತಿ ಆ ಮಿನಾರದ ಬಗ್ಗೆ ಹದೀಸಿನಲ್ಲಿಯೂ ಸಹ ಉಲ್ಲೇಖವಿದೆ ಅಂದರೆ ಮಸೀಹರು ಮಿನಾರದ ಬಳಿ ಅವತರಿಸುವರು ಎಂದು. ಹದೀಸಿನ ಗ್ರಂಥವಾದ ಮುಸ್ಲಿಮ್‌ನ ಒಂದು ಹದೀಸಿನಲ್ಲಿ ಸೀರಿಯಾದ ವಿವರ ಬರಲು ಕಾರಣವೇನೆಂದರೆ ಅಲ್ಲಿಂದಲೇ ತ್ರೀತ್ವದ (ಮೂರು ದೇವರ ಸೃಷ್ಠಿ) ಬೀಜ ಮೊದಲು ಸೀರಿಯಾದಿಂದಲೇ ಬಿತ್ತಲಾಗಿತ್ತು. ವಾಗ್ದಾತ್ತ ಮಸೀಹರ ಅವತರಿಕೆಯು ಅದೇ ಕಾರಣದಿಂದ ಆ ಮೂರು ದೇವರ ಕಲ್ಪನೆಯನ್ನು ಹೋಗಲಾಡಿಸಿ ಏಕದೇವನ ಪ್ರತಾಪ ಪುನಃ ಖಾಯಮ್ ಆಗಬೇಕು ಎಂಬ ಉದ್ದೇಶ ಹೊಂದಿದೆ. ಆದುದರಿಂದ ಮಸೀಹನ ಅವತರಿಕೆಯು ಸೀರಿಯಾದ ಪೂರ್ವ ಭಾಗದಲ್ಲಿರುವ ಮಿನಾರದ ಬಳಿ ಆಗುವುದು ಎಂಬ ವಿವರವಿದೆ. ಈ ಮಾತು ಸರಿಯೂ ಆಗಿದೆ. ಏಕೆಂದರೆ ಪಂಜಾಬಿನ ಗುರುದಾಸ್‌ಪುರ ಜಿಲ್ಲೆಯಲ್ಲಿರುವ ಖಾದಿಯಾನ್, ಲಾಹೋರ್ ಅಲ್ಲಿಂದ ಪಶ್ಚಿಮ ಹಾಗೂ ದಕ್ಷಿಣ ದಿಕ್ಕಿನಲ್ಲಿ ಬರುತ್ತದೆ. ಅದು ಸೀರಿಯಾದಿಂದ ಸರಿಯಾಗಿ ಪೂರ್ವ ದಿಕ್ಕಿಗೆ ಬರುತ್ತದೆ ಅಂದ ಹಾಗೆ ಈ ಮಿನಾರತುಲ್ ಮಸೀಹ್ ಸೀರಿಯಾದಿಂದ ಪೂರ್ವದಿಕ್ಕಿನಲ್ಲಿದೆ ಎಂದು ಸಾಬೀತಾಗುತ್ತದೆ. ಪ್ರತಿಯೊಬ್ಬ ವಿವೇಕ ಉಳ್ಳವನು ಯೋಚಿಸಬೇಕು ಸೀರಿಯಾ ಪದ ಬರಲು ಕಾರಣವೇನು, ವಾಗ್ದಾತ್ತ ಮಸೀಹರು ಸಿರಿಯಾದ ಪೂರ್ವ ದಿಕ್ಕಿಗೆ ಅವತರಿಸುವರು ಎಂದು. ಇದೀಗ ನಮ್ಮ ವಿರೋಧಿಗಳು ಈ ಸಿರಿಯಾದ ಹದೀಸನ್ನು ಪದೇ ಪದೇ ಹೇಳುತ್ತಾರೆ ಅವರು ಕೇವಲ ಒಂದು ಕಥೆಯ ರೂಪದಲ್ಲಿ ಅದನ್ನು ಭಾವಿಸಿಕೊಂಡಿರುತ್ತಾರೆ. ಆದರೆ ನೆನಪಿರಲಿ ಇದು ಕಥೆಯಲ್ಲ, ಅಲ್ಲಾಹನು ಇಂತಹ ನಿಷ್ಪ್ರಯೋಜಕ ಕಾರ್ಯಗಳಿಂದ ಮುಕ್ತವಾಗಿದ್ದಾನೆ. ಬದಲು ಈ ಹದೀಸಿನಲ್ಲಿ ಮೊದಲು ಸಿರಿಯಾದ ಹೆಸರು ಬರುತ್ತದೆ ಆ ಮೇಲೆ ಪೂರ್ವ ದಿಕ್ಕಿನಲ್ಲಿ ಮಿನಾರ ಎಂಬ ವಿವರಣೆ ಇದೆ. ಇದೊಂದು ಮಹೋನ್ನತ ರಹಸ್ಯ ಒಳಗೊಂಡಿದೆ. ಅದು ನಾವು ವಿವರಿಸಿಯೂ ಆಗಿದೆ ಅಂದರೆ ತ್ರೀತ್ವದ ಮೂರು ದೇವರ ಬುನಾದಿ ಸಿರಿಯಾದಿಂದಲೇ ಕಂಡುಬರುತ್ತದೆ. ಈ ಬಹುದೇವಾರಾಧನೆಯ ಪೆಡಂಭೂತ ಮೊದಲು ಸೀರಿಯಾದಲ್ಲಿಯೇ ಹೆಚ್ಚು ಬೆಳೆದಿದೆ ಮತ್ತು ತನ್ನ ಬಾಹು ಚಾಚಿದೆ ಮತ್ತು ಈ ವಿಷಯ ಇತರ ಸ್ಥಳಗಳಿಗೂ ವ್ಯಾಪಿಸಿದೆ. ಅಂದಹಾಗೆ ದೇವನು ಮನುಷ್ಯನನ್ನು ದೇವನನ್ನಾಗಿ ಮಾಡುವ ಅಡಿಗಲ್ಲು ಸೀರಿಯಾದಲ್ಲಿಯೇ ಹಾಕಲಾಗಿತ್ತು. ಆದುದರಿಂದ ಈ ಕಾಲದ ವಿವರಣೆ ನೀಡುವಾಗ ಅಂದರೆ ಮಿಥ್ಯ ದೇವರುಗಳನ್ನು ನಾಶ ಪಡಿಸುವ ಕಾಲದಲ್ಲಿ ಮತ್ತೆ ಸಿರಿಯವನ್ನು ಎತ್ತಿಕೊಂಡು ಹೇಳಿದನು– ಮಸೀಹನ ಮಿನಾರ (ಗೋಪುರ) ಅಂದರೆ ಅವನ ಪ್ರಕಾಶ ಪ್ರಕಟವಾಗುವ ಸ್ಥಳವು ಸೀರಿಯಾದ ಪೂರ್ವ ದಿಕ್ಕಿನಲ್ಲಿದೆ. ಅದರ ಅರ್ಥ ಈ ಮಿನಾರವೂ ಸೀರಿಯದ್ದೆ ಒಂದು ಭಾಗವಾಗುವುದು ಎಂದಲ್ಲ ಸೀರಿಯಾದಲ್ಲಿರುವುದು ಎಂಬುದು ದುರದೃಷ್ಟಕರ ಸಂಗತಿಯಾಗಿದೆ. ವಾಸ್ತವದಲ್ಲಿ ಅದರ ಅರ್ಥ ವಾಗ್ದಾತ್ತ ಮಸೀಹರ ಪ್ರಕಾಶವೂ ಸೂರ್ಯದ ರೀತಿಯಲ್ಲಿ ಸೀರಿಯಾದ ಪೂರ್ವ ಸಿಕ್ಕಿನಿಂದ ಉದಯವಾಗಿ ಪಶ್ಚಿಮದ ಅಂಧಕಾರವನ್ನು ದೂರವಾಗುವುದು ಎಂದಿದೆ. ಇದೊಂದು ಸೂಕ್ಷ್ಮವಾದ ಸಂಕೇತವಿದೆ. ಏಕೆಂದರೆ ಮಸೀಹನ ಮಿಣಾರವನ್ನು ಸಿರಿಯಾದ ಬಳಿ ಅವಸು ಅವತರಿಸುವನು ಅದು ಸೀರಿಯಾದ ಪೂರ್ವ ಭಾಗ ಎನ್ನಲಾಗಿದೆ. ಸೀರಿಯಾದ ತ್ರೀತ್ವವನ್ನು ಅದರ ಪಶ್ಚಿಮದೆಡೆ ಇಟ್ಟಿರುವನು. ಹೀಗೆ ಆಗಮಿಸುವ ಕಾಲವನ್ನು ವಾಗ್ದಾತ್ತ ಮಸೀಹರ ಕಾಲಕ್ಕೆ ಹೋಲಿಸಲಾಗಿದೆ. ವಾಗ್ದಾತ್ತ ಮಸೀಹರು ಆಗಮಿಸುವಾಗ ಸೂರ್ಯನು ಪೂರ್ವದಿಂದ ಉದಯಿಸುವನು ಎಂದು ಹೇಳಲಾಗಿದೆ. ಅದರ ವಿರುದ್ಧವಾಗಿ ತ್ರೀತ್ವದ ದೀಪವು ಆರಿಹೋಗುವುದು ಅದು ಪಶ್ಚಿಮ ದಿಕ್ಕಿನಲ್ಲಿದೆ, ದಿನೇ ದಿನೇ ಕ್ಷೀಣಿಸುತ್ತ ಹೋಗುವುದು ಏಕೆಂದರೆ ಪೂರ್ವ ದಿಕ್ಕಿನ ಉದಯವನ್ನು ದೇವಗ್ರಂಥಗಳಲ್ಲಿ ಶ್ರೇಷ್ಠತೆಯ ಪ್ರತೀಕ ಎಂದು ಹೇಳಲಾಗಿದೆ. ಮತ್ತು ಪಶ್ಚಿಮ ದಿಕ್ಕಿಗೆ ತೆರಳುವುದು ಅವನತಿಯ ಸಂಕೇತ ಎನ್ನಲಾಗಿದೆ."

(ಮಜ್‌ಮುಳ ಇಶ್ತಿಹಾರಾತ್, ಸಂಪುಟ–3, ಪುಟ–287–294)

Printed & Published by: Jameel Ahmed Nasir On Behalf Of Nigran Board Of Badar, Name Of Owner: Nigran Board Of Badar. And Printed at Fazle-Umar Printing Press, Harchowal Road, Qadian. Dist. Gurdaspur-143516, Punjab. And Published at Office Of Weekly Badar Mohalla Ahmadiyya, Qadian. Dist. Gurdaspur-143516, Punjab. INDIA. Editor: Tariq Ahmed Idris.